ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 6 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 228 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜಯಪುರ ಹೋಬಳಿ ಮಟ್ಟದ ಪ್ರೌಢಶಾಲಾ ಪ್ರತಿಭಾ ಕಾರಂಜಿ, ಕಲೋತ್ಸವ ಸಂಭ್ರಮಾಚರಣೆ



ಜಯಪುರ ಹೋಬಳಿ ಮಟ್ಟದ ಪ್ರೌಢಶಾಲಾ ಪ್ರತಿಭಾ ಕಾರಂಜಿ, ಕಲೋತ್ಸವ ಕಾರ್ಯಕ್ರಮ ಸಂಭ್ರಮದಿಂದ ಆಚರಿಸಲಾಯಿತು.

ಮೈಸೂರು, ಡಿ.5– ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ಶುಕ್ರವಾರ ಜಯಪುರ ಹೋಬಳಿ ಮಟ್ಟದ ಪ್ರೌಢ ಶಾಲಾ ಹಂತದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಂಠಪಾಠ, ಧಾರ್ಮಿಕ ಪಠಣ, ಜಾನಪದ ಗೀತೆ, ಭಾವಗೀತೆ, ಭರತ ನಾಟ್ಯ, ಪ್ರಬಂಧ ರಚನೆ, ಚಿತ್ರಕಲೆ, ಮಿಮಿಕ್ರಿ, ಚರ್ಚಾ ಸ್ಪರ್ಧೆ, ರಂಗೋಲಿ, ಗಝಲ್, ಕವನ ವಾಚನ, ಆಶುಭಾಷಣ, ರಸಪ್ರಶ್ನೆ, ಜಾನಪದ ನೃತ್ಯ, ಕವ್ವಾಲಿ ಸ್ಪರ್ಧೆಗಳು ನಡೆದವು. ವಿಜೇತರಾದ ವಿದ್ಯಾರ್ಥಿಗಳಿಗೆ ಸಮಾರೋಪ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ, ಬಹುಮಾನ ವಿತರಿಸಲಾಯಿತು. ಜಯಪುರ ಹೋಬಳಿಯ ಡಿ.ಸಾಲುಂಡಿ, ಜಯಪುರ, ಹಾರೋಹಳ್ಳಿ, ಉದ್ಬೂರು ಕ್ಲಸ್ಟರ್ ವ್ಯಾಪ್ತಿಯ 17 ಪ್ರೌಢಶಾಲೆಗಳ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಬಿಆರ್‌ಸಿ ಗೀತಾ, ಮೈಸೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ. ಮಾಲೇಗೌಡ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಆನಂದ್, ಇಸಿಓ ಮಂಜುನಾಥ್, ಸಿಆರ್‌ಪಿ ಲಲಿತಾ, ಶ್ರೀರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆ ಆಡಳಿತ ಮಂಡಳಿ ಜಂಟಿ ಕಾರ್ಯದರ್ಶಿ ಎಸ್. ವೈದ್ಯನಾಥನ್, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವಿ, ಎಸ್.ಕಲ್ಲಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಬಸವರಾಜಪ್ಪ, ಹಾರೋ ಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಜಯಂತಿ, ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆ ಪ್ರಭಾರ ಮುಖ್ಯಶಿಕ್ಷಕ ಬಿ.ಸಿದ್ದರಾಮು, ನಿವೃತ್ತ ಶಿಕ್ಷಕರಾದ ಬಿ.ವಿ.ನಂಜುಂಡಸ್ವಾಮಿ, ಶಿಕ್ಷಣ ಇಲಾಖೆಯ ಅನಿತಾ, ಜ್ಯೋತಿ, ಸರಿತಾ, ಉದ್ಯಮಿ ಶಿವು ಉಪಸ್ಥಿತರಿದ್ದರು.

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಿವೇಶನಗಳಿಗೆ ಕೂಡಲೇ ಖಾತೆ ಮಾಡಿಕೊಡಿ

ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸೂಚನೆ



ಬೋಗಾದಿ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಸುಸಜ್ಜಿತ ಗ್ರಂಥಾಲಯ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು, ಡಿ.5(ಜಿಎ)–ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೋಗಾದಿ ಪಟ್ಟಣ ಪಂಚಾಯಿತಿಗೆ 145 ಬಡಾವಣೆಗಳಿಂದ 13,113 ನಿವೇಶನಗಳು ಹಸ್ತಾಂತರಗೊಂಡಿದ್ದು, ಕೂಡಲೇ ಖಾತೆ ಮಾಡಿಕೊಡುವಂತೆ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸೂಚಿಸಿದರು.

ಬೋಗಾದಿ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ, ಬೋಗಾದಿ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಸುಸಜ್ಜಿತ ಗ್ರಂಥಾಲಯ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ನಂತರ ಮಾತನಾಡಿದ ಅವರು, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಠಾಣಗಳ ಖಾತೆ ಮಾಡಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ದೂರುಗಳು ಕೇಳಿ ಬಂದಿದ್ದು, ಯಾವುದೇ ತೊಂದರೆ ನೀಡದೆ ಕೂಡಲೇ ಖಾತೆಗಳನ್ನು ಮಾಡಿಕೊಡಿ. ಒಳಚರಂಡಿ ನಿರ್ವಹಣೆ, ಪಾರ್ಕ್‌ಗಳ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸ್ಮಶಾನಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಈಗಾಗಲೇ 12 ಕೋಟಿ ರೂ. ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ಕೂಡಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿ ಎಂದ ಅವರು, ಮರಟಿಕ್ಯಾತನಹಳ್ಳಿ ಮತ್ತು ದಾಸನಕೊಪ್ಪಲು ಗ್ರಾಮಗಳ ಒಳಚರಂಡಿ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಲು 5 ಕೋಟಿ ರೂ. ವೆಚ್ಚದಲ್ಲಿ ಕೆಮ್ಮಣ್ಣಪುರ ಸರ್ವೇ ನಂಬರ್‌ನಲ್ಲಿ ಎಸ್‌ಟಿಪಿ, ಎಫ್‌ಎಸ್‌ಟಿಪಿ ಘಟಕಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಕೆರೆ ಮತ್ತು ನಾಲೆಗಳ ಒತ್ತುವರಿ ತೆರವುಗೊಳಿಸುವ ಸಂಬಂಧ ತಹಸೀಲ್ದಾರ್ ಸೂಕ್ತ ಕ್ರಮ ಕೈಗೊಳ್ಳಬೇಕು. ಈಗಾಗಲೇ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರವಾಗಿ ಕುಡಿಯುವ ನೀರನ್ನು ಒದಗಿಸಲು 8 ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದ್ದು, ಕಾವೇರಿ ಮತ್ತು ಕಬಿನಿ ಎರಡು ಕಡೆಯಿಂದ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಟ್ಯಾಂಕ್‌ಗಳಿಂದ ಬಡಾವಣೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಲು ಪಟ್ಟಣ ಪಂಚಾಯಿತಿಯಿಂದ ಕ್ರಮ ಕೈಗೊಳ್ಳಿ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದಲ್ಲಿ ಅರ್ಹ ಫಲಾನುಭವಿಗಳಿಗೆ ಸೌಲತ್ತುಗಳನ್ನು ವಿತರಿಸಲು ಸೂಚಿಸಿದರು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ನೀಲ ನಕ್ಷೆಯನ್ನು ತಯಾರಿಸಿ, ಕನಿಷ್ಠ ಪ್ರತಿ ಬಡಾವಣೆಯಲ್ಲಿ ಒಂದು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಿ, ಅಲ್ಲಿನ ನಿವಾಸಿಗಳು ಸೇರಿದಂತೆ ನಿರ್ವಹಣೆ ಸಮಿತಿ ರಚಿಸಿ, ಪಾರ್ಕ್‌ಗಳನ್ನು ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ವಿ.ಪ್ರಿಯದರ್ಶಿನಿ, ಆಡಳಿತಾಧಿಕಾರಿ ಮಹೇಶ್ ಕುಮಾರ್, ಮುಖ್ಯಾಧಿಕಾರಿಗಳಾದ ಸುಜಯ್ ಕುಮಾರ್ ಸೇರಿದಂತೆ ಹಲವಾರು ಅಧಿಕಾರಿಗಳು ಉಪಸ್ಥಿತರಿದ್ದರು.

ಡಿ.10ರ ಚಳಿಗಾಲದ ರೇಸ್ ರದ್ದು



ಮೈಸೂರು,ಡಿ.5– ಮೈಸೂರು ರೇಸ್ ಕ್ಲಬ್‌ನಲ್ಲಿ ಆಯೋಜಿಸಿದ್ದ 'ಮೈಸೂರು ಚಳಿಗಾಲದ ರೇಸ್ ನಾಲ್ಕನೇ ದಿನದ ಡಿ.10ರ ಬುಧವಾರದ ರೇಸ್ ಅನ್ನು ಆಡಳಿತಾತ್ಮಕ ಕಾರಣಕ್ಕಾಗಿ ರದ್ದುಗೊಳಿಸುವ ನಿರ್ಧಾರವನ್ನು ರೇಸ್ ಕ್ಲಬ್‌ನ ಸ್ಟೀವರ್ಡ್‌ಗಳು ಕೈಗೊಂಡಿದ್ದಾರೆ ಎಂದು ಕಾರ್ಯದರ್ಶಿ ಹಾಗೂ ಸಿಇಓ ಎನ್. ಹೆಚ್.ಮಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Incubation ತರಬೇತಿ ಕಾರ್ಯಕ್ರಮ

ಮೈಸೂರು, ಡಿ.5– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಆರ್‌ಎಎಂಪಿ ಯೋಜನೆಯಡಿ Incubation ತರಬೇತಿ ಕಾರ್ಯಕ್ರಮವನ್ನು ಎನ್.ಐ.ಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಚಾರ್ಯ ಡಾ. ಕೆ.ಸಿ. ಮಂಜುನಾಥ ಉದ್ಘಾಟಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಕೃಷ್ಣಮೂರ್ತಿ ಉದ್ದಿಮೆದಾರರ ಗುಣಲಕ್ಷಣಗಳ ಕುರಿತು, ಚಂದ್ರಹಾಸ್ ಅವರು ನವೋದ್ಯಮದ ಸ್ಥಾಪನೆ ಕುರಿತು ಹಾಗೂ ವಿರೂಪಾಕ್ಷ ಹೊಸದಾಗಿ ಪ್ರಾರಂಭಿಸುವ ಉದ್ದಿಮೆಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ನಜೀರ್ ಅಹಮ್ಮದ್ ಉಪಸ್ಥಿತರಿದ್ದರು.

ಖ್ಯಾತ ಸ್ತ್ರೀರೋಗ ತಜ್ಞೆ ಡಾ. ಜಯಶ್ರೀ, ಪುತ್ರ ಆಕಾಶ್ ಆತ್ಮಹತ್ಯೆ

ಡೆತ್ ನೋಟ್ ಪತ್ತೆ



ಶಿವಮೊಗ್ಗ: ಶಿವಮೊಗ್ಗದ ಖ್ಯಾತ ಸ್ತ್ರೀರೋಗ ತಜ್ಞೆ ಡಾ. ಜಯಶ್ರೀ ಹೊಮ್ಮರಡಿ ಹಾಗೂ ಅವರ ಪುತ್ರ ಆಕಾಶ್ ಹೊಮ್ಮರಡಿ ಅವರು ಶುಕ್ರವಾರ ತಮ್ಮ ಮನೆಯಲ್ಲಿಯೇ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಡಾ. ಜಯಶ್ರೀ ಮತ್ತು ಅವರ ಮಗ ಇಬ್ಬರೂ ಪ್ರತ್ಯೇಕವಾಗಿ ತಮ್ಮ ತಮ್ಮ ಬೆಡ್ ರೂಮ್‌ಗಳಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಅಶ್ವತ್ಥ್ ಬಡಾವಣೆಯಲ್ಲಿ ನಡೆದಿದೆ.

ಡಾ. ಜಯಶ್ರೀ(57) ಮತ್ತು ಮಗ ಆಕಾಶ್(32) ಇಬ್ಬರ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಭೇಟಿ ನೀಡಿದ ವಿನೋಬನಗರ ಠಾಣಾ ಪೊಲೀಸರು ಮನೆ ಪರಿಶೀಲನೆ ಮಾಡಿದ್ದು, ಈ ವೇಳೆ ಡೆತ್ ನೋಟ್ ಪತ್ತೆಯಾಗಿದೆ.

ಮೂಲತಃ ದಾವಣಗೆರೆ ಜಿಲ್ಲೆಯ ನ್ಯಾಮತಿಯ ಡಾ. ನಾಗರಾಜ ಹೊಮ್ಮರಡಿ ಕುಟುಂಬ ಶಿವಮೊಗ್ಗದ ಗಾಂಧಿನಗರದಲ್ಲಿ ಹೊಮ್ಮರಡಿ ಆಸ್ಪತ್ರೆಯ ಮೂಲಕ ಹಲವು ವರ್ಷಗಳಿಂದ ವೈದ್ಯಕೀಯ ಸೇವೆಯಲ್ಲಿ ತೊಡಗಿತ್ತು.

ಮಕ್ಕಳ ತಜ್ಞರಾಗಿದ್ದ ಡಾ.ನಾಗರಾಜ ಹೊಮ್ಮರಡಿ ಸಹ 10 ವರ್ಷಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಪುತ್ರ ಆಕಾಶ್ ಅವರ ಪತ್ನಿ ನವ್ಯಶ್ರೀ ಕೂಡ ಒಂದೂವರೆ ವರ್ಷದ ಹಿಂದೆ ಅದೇ ಮನೆಯಲ್ಲಿ ನೇಣಿಗೆ ಶರಣಾಗಿದ್ದರು.

ಇದರಿಂದ ಆಘಾತಕ್ಕೆ ಒಳಗಾಗಿದ್ದ ಡಾ. ನಾಗರಾಜ ಅವರ ಪತ್ನಿ ಜಯಶ್ರೀ ಅವರು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಳಿಕ ಮಗ ಕೂಡ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಆಘಾತದಿಂದ ಹೊರಬರಲು ಕಳೆದ ಮೇ ತಿಂಗಳಲ್ಲಿ ಆಕಾಶ್ ಮತ್ತೊಂದು ಮದುವೆಯಾಗಿ ಆರು ತಿಂಗಳಾಗಿತ್ತು. ಹೀಗಿರುವಾಗ ತಾಯಿ ಮಗ ಆತ್ಮಹತ್ಯೆಗೆ ಶರಣಾಗಿದ್ದಾರೆ. ಎರಡನೇ ಪತ್ನಿ ಮನೆಯಲ್ಲಿರುವಾಗಲೇ ಆಕಾಶ್ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಇಂದಿನಿಂದ ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಥೈರಾಯ್ಡ್ ತಪಾಸಣೆ

ಮೈಸೂರು, ಡಿ.5– ಮೈಸೂರು ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯಲ್ಲಿ ಲಾಲ್‌ಪತ್ ಲ್ಯಾಬ್ ರವರ ಸಹಯೋಗದಲ್ಲಿ ಡಿ.6, 7 ಮತ್ತು 8 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ಉಚಿತ ಥೈರಾಯ್ಡ್ ತಪಾಸಣೆ ಆಯೋಜಿಸಲಾಗಿದೆ.

ಸುಸ್ತು, ತೂಕ ಹೆಚ್ಚಾಗುವುದು, ಖಿನ್ನತೆ, ಆಯಾಸ, ಹೆಚ್ಚಿನ ಮುಟ್ಟಿನ ಅವಧಿಗಳು, ಕೂದಲು ಉದುರುತ್ತಿದ್ದರೆ ಹಾಗೂ ಇನ್ನಿತರ ಥೈರಾಯ್ಡ್ ಸಂಬಂಧಿತ ಸಮಸ್ಯೆಗಳಲ್ಲಿ ಬಳಲುತ್ತಿದ್ದರೆ ಈಗಲೇ ಸಾರ್ವಜನಿಕರು ಪರೀಕ್ಷಿಸಿಕೊಳ್ಳುವುದು ಉತ್ತಮ.

ಶಿಬಿರದಲ್ಲಿ ರಕ್ತದ ಮಾದರಿಯನ್ನು ಪಡೆದು ಮರುದಿನ ರಿಪೋರ್ಟ್ ಅನ್ನು ಕೊಡಲಾಗುವುದು. ಮೊದಲ 300 ನೋಂದಣಿ ಆದ ಶಿಬಿರಾರ್ಥಿಗಳಿಗೆ ಮಾತ್ರ ಉಚಿತ ಪರೀಕ್ಷೆ ಮಾಡಲಾಗುವುದು ಎಂದು ಸಿಗ್ಮಾ ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದೂ.ನಂ.: 0821–4266661, ಮೊ.ನಂ.91080–28661 ಕ್ಕೆ ಹೆಸರು ನೋಂದಾಯಿಸಲು ಸಂಪರ್ಕಿಸಿ.

ನ್ಯಾಷನಲ್ ಹೆರಾಲ್ಡ್ ಕೇಸ್: ಡಿಕೆ ಬ್ರದರ್ಸ್‌ಗೆ ದೆಹಲಿ ಪೊಲೀಸರ ನೋಟಿಸ್



ನವದೆಹಲಿ: ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಹೋದರ ಡಿ.ಕೆ.ಸುರೇಶ್ ಅವರಿಗೆ ದೆಹಲಿ ಪೊಲೀಸರು ನೋಟಿಸ್ ನೀಡಿದ್ದಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್ಥಿಕ ಅಪರಾಧ ವಿಭಾಗದಿಂದ ನೋಟಿಸ್ ನೀಡಲಾಗಿದೆ. ಪ್ರಕರಣದ ತನಿಖೆಯ ಭಾಗವಾಗಿ ವಿವರವಾದ ಹಣಕಾಸು ಮತ್ತು ವಹಿವಾಟು ಮಾಹಿತಿಯನ್ನು ಕೋರಿ ನೋಟಿಸ್ ಕೊಟ್ಟಿದ್ದಾರೆ.

ನ.29 ರಂದು ನೋಟಿಸ್ ನೀಡಿರುವ ಪೊಲೀಸರು, ಡಿ.19 ರೊಳಗೆ ತನಿಖಾಧಿಕಾರಿಗಳ ಮುಂದೆ ಹಾಜರಾಗಲು ಅಥವಾ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸೂಚನೆ ನೀಡಿದ್ದಾರೆ. ಡಿ.ಕೆ.ಸುರೇಶ್ ಅವರಿಗೂ ನೋಟಿಸ್ ನೀಡಿರುವ ದೆಹಲಿ ಪೊಲೀಸರು, ಎಷ್ಟು ದುಡ್ಡು ನೀಡಿದ್ದೀರಿ, ಯಾವ ಉದ್ದೇಶಕ್ಕೆ ಬಳಕೆಯಾಗಿದೆ, ಹಣವನ್ನು ನೀಡಿದ್ದು ಹೇಗೆ, ಎಷ್ಟು ಹಣ ನೀಡಿದ್ದೀರಿ ಎಂಬ ಪ್ರಶ್ನೆಗಳಿಗೆ ವಿವರ ಕೇಳಿದ್ದಾರೆ.

ನಾಳೆ ಮಕ್ಕಳಿಗಾಗಿ 61 ಪುಸ್ತಕ ಬಿಡುಗಡೆ

ಮೈಸೂರು, ಡಿ.5– ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳಿಗಾಗಿ ವಿವಿಧ ಲೇಖಕರ 61 ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳ ಬಿಡುಗಡೆ ಸಮಾರಂಭವನ್ನು ಡಿ.7ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಸರಸ್ವತಿಪುರಂನ ವಿಜಯ ವಿಠಲ ವಿದ್ಯಾಶಾಲಾ ಆವರಣದ ವಿಜಯಧ್ವಜ ಮಂಟಪದಲ್ಲಿ ಏರ್ಪಡಿಸಲಾಗಿದೆ. ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಲೇಖಕ ಎಂ.ಎಸ್.ನರಸಿಂಹಮೂರ್ತಿ, ಹಿರಿಯ ವಾಗ್ಮಿ ಎಂ.ಕೃಷ್ಣೇಗೌಡ, ಹಿರಿಯ ಸಂಶೋಧಕ ಡಾ.ಬಿ.ಎಸ್.ಪ್ರಣತಾರ್ತಿಹರನ್ ಭಾಗವಹಿಸುವರು. ಶಾಸಕ ಟಿ.ಎಸ್.ಶ್ರೀವತ್ಸ, ವಿಜಯ ವಿಠಲ ವಿದ್ಯಾ ಸಂಸ್ಥೆ ಅಧ್ಯಕ್ಷ ಆರ್.ವಾಸುದೇವ ಭಟ್, ನಾಟಕಕಾರ ಕೆ.ವಿ.ರಾಮಪ್ರಸಾದ್ ಶುಭ ನುಡಿಯುವರು ಎಂದು ಸಂಸ್ಕೃತಿ ಬುಕ್ ಏಜೆನ್ಸೀಸ್ ಸಂಸ್ಕೃತಿ ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ವಕೀಲ ಶೇಷಯ್ಯ ನಿಧನ



ಮೈಸೂರು, ಡಿ.5– ಮೈಸೂರಿನ ಜಿಲ್ಲಾ ನ್ಯಾಯಾಂಗ ಇಲಾಖೆ ಮಾಜಿ ಅಧ್ಯಕ್ಷರು, ಮೈಸೂರಿನ ನ್ಯಾಯಾಂಗ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಕೀಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರೂ ಆದ ಹಿರಿಯ ವಕೀಲ ಶೇಷಯ್ಯ(86) ಅವರು ಇಂದು ನಿಧನರಾದರು.

ಮೃತರು ಪತ್ನಿ ಸರೋಜಮ್ಮ, ಮಕ್ಕಳಾದ ನಿರಂಜನ್, ಶ್ರೀಯಾ ರಂಜನ್, ಪುಟ್ಟು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಡಿ.6) ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಸಂವಿಧಾನ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ವಕೀಲರಾದ ತಿಮ್ಮಯ್ಯ, ಪುಟ್ಟರಸ, ಕಾಂತರಾಜು ಎ.ಆರ್. ವಿಷ್ಣುವರ್ಧನ, ಮಹೇಶ, ಪುಟ್ಟಸ್ವಾಮಿ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.12.2025 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ. ಎನ್. ಶೀಲಾ, ವ್ಯಾಖ್ಯಾನ–ಪ್ರೊ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ಕುವೆಂಪುನಗರದ ಶ್ರೀ ಗುರು ಕಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ:ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ– ಶ್ರೀರಂಗಪಟ್ಟಣ ತಾಲೂಕು ಅರಕೆರೆ ಹೋಬಳಿ ಪೀಹಳ್ಳಿ ಗ್ರಾಮದ ಕೃಷಿಕ ದಂಪತಿ ಎಂ. ಪ್ರಸನ್ನಕುಮಾರ್ ಹಾಗೂ ಬಿ.ಆರ್. ಭವಾನಿ, ಪ್ರಸ್ತುತಿ– ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ನೀಲಾ ಸಿನ್ಹಾ ರಾಯ್ ಹಾಡುಗಾರಿಕೆ – ತುಮರಿ, ದಾದ್ರ

- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಹುಣ್ಣಿಮೆ – ಶ್ರೀ ದತ್ತಾತ್ರೇಯ ಜಯಂತಿ, ಶ್ರೀ ರಾಜರಾಜೇಶ್ವರಿ ದೇವಾಲಯದ 2ನೇ ವಾರ್ಷಿಕೋತ್ಸವ, ವಾರ್ಷಿಕ ಶಾಸ್ತ್ರ ಸಭೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆಯಿಂದ
- **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ, ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರಿ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.
- **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಶ್ರೀ ಹನುಮ ಜಯಂತಿ ಮಹೋತ್ಸವ, ಬೆಳಗ್ಗೆ 9.30 ರಿಂದ ರಾಘವೇಂದ್ರ ರತ್ನಾಕರ್ ಮತ್ತು ವೃಂದದವರಿಂದ ಭಕ್ತಿಗೀತೆ, ಸಂಜೆ 5.30 ರಿಂದ ತ್ರಿಶೂಲಿ ಸ್ಕೂಲ್ ಆಫ್ ಆರ್ಟ್ಸ್, ನಿತ್ಯಶ್ರೀ ಅವರಿಂದ ಭರತನಾಟ್ಯ, ಸಂಜೆ 7 ರಿಂದ ಭಾರತೀಯ ನೃತ್ಯ ಕಲಾಶಾಲೆ ಅವರಿಂದ ನೃತ್ಯರೂಪಕ, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಬೇಸ್ ಪಿಯು ಕಾಲೇಜು :** ಉತ್ಸವ–2025–26 ಮತ್ತು 2026ನೇ ಬ್ಯಾಚ್‌ಗೆ ಬೀಳ್ಕೊಡುಗೆ, ಉಪಸ್ಥಿತರು : ಪಿಯು ಶಿಕ್ಷಣ ಮಂಡಳಿ ಸಹಾಯಕ ನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಡಾ. ಜ್ಯೋತಿಶಂಕರ್, ಡಾ. ಗಿರೀಶ್ ಚಂದ್ರ, ವಿವೇಕ್ ಖನ್ನಾ, ಸ್ಥಳ: ಕರಾಮುವಿವಿ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 10ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.
- **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಕಾವೇರಿ ಚಾರಿಟಬಲ್ ಟ್ರಸ್ಟ್, ಮೈಸೂರು ಸೈನ್ಸ್ ಫೌಂಡೇಷನ್ :** ವಿಜ್ಞಾನ ಮತ್ತು ಗಣಿತೋತ್ಸವ–2025, ಗಣಿತೋತ್ಸವ ಉದ್ಘಾಟನೆ : ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್. ಭಾರ್ಗವ, ವಿಜ್ಞಾನೋತ್ಸವ ಉದ್ಘಾಟನೆ : ಬಿಎಆರ್‌ಸಿ ವಿಶ್ರಾಂತ ಕಾರ್ಯನಿರ್ವಾಹಕ ನಿರ್ದೇಶಕ ಎನ್. ರಾಮಮೋಹನ್, ವಿಜ್ಞಾನಿ ಎಂ.ವಿ. ರೂಪ, ಉಪಸ್ಥಿತರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಡಿ. ಉದಯಕುಮಾರ್, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಗಣಿತ ಸಂವಹನಕಾರ ವಿ.ಎಸ್.ಎಸ್. ಶಾಸ್ತ್ರಿ, ವಿಶ್ರಾಂತ ವಿಜ್ಞಾನಿ ಡಾ. ಟಿ. ತಿಪ್ಪೇಸ್ವಾಮಿ, ಸ್ಥಳ: ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜು, ವಿಜಯನಗರ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಭಾರತೀಯ ವಿದ್ಯಾಭವನ :** ಡಾ. ಬಿ.ಆರ್. ಅಂಬೇಡ್ಕರ್ 69ನೇ ವರ್ಷದ ಪರಿನಿಬ್ಬಾಣ ದಿನದ ಅಂಗವಾಗಿ ಭಾರತ ಭಾಗ್ಯ ವಿದಾತ ರೂಪಕ ಪ್ರದರ್ಶನ ಹಾಗೂ ಸಂವಾದ, ಉದ್ಘಾಟನೆ : ಭಾರತೀಯ ವಿದ್ಯಾಭವನ ಪ್ರಿನ್ಸಿಪಾಲ್ ಶ್ರೀಮತಿ ಎಸ್. ಲೇಖಾ ನಾಯರ್, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಡಾ. ಜೆ. ಸೋಮಶೇಖರ್, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕ ಪ್ರೊ. ಎಸ್. ನರೇಂದ್ರ ಕುಮಾರ್, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ, ಬೆಳಗ್ಗೆ 10.30ಕ್ಕೆ.
- **ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಶಾಖೆ :** ಡಿಎಸ್‌ಎಸ್ ಪ್ರತಿರೋಧ ಸಮಾವೇಶ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಉಪಸ್ಥಿತರು : ಗುರುಪ್ರಸಾದ್ ಕೆರಗೋಡು, ದಿನೇಶ್ ಅಮೀನ್‌ಮಟ್ಟು, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಆಲಗೂಡು ಶಿವಕುಮಾರ್, ವರಹಳ್ಳಿ ಆನಂದ್, ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಬಿ.ಡಿ. ಶಿವಬುದ್ಧಿ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಡಾ. ಬಿ.ಆರ್. ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಧ್ಯಾಪಕ ಪ್ರೊ. ಡಿ. ಆನಂದ್ ಅವರಿಂದ ವಿಶೇಷ ಉಪನ್ಯಾಸ, ಸ್ಥಳ: ಕಾವೇರಿ ಸಭಾಂಗಣ, ಬೆಳಗ್ಗೆ 11ಕ್ಕೆ
- **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 25ನೇ ವರ್ಷದ ಹನುಮಜಯಂತಿ ಮಹೋತ್ಸವ, ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ.
- **ವಿವೇಕ ಕುಟುಂಬಕಂ, ಶ್ರೀ ವಿವೇಕ ವಿದ್ಯಾಲಯ ಪದವಿಪೂರ್ವ ಕಾಲೇಜು :** ವಾರ್ಷಿಕೋತ್ಸವ, ಸಾನ್ನಿಧ್ಯ : ಸ್ವಾಮಿ ಪರಹಿತಾನಂದಜೀ ಮಹಾರಾಜ್, ಮುಖ್ಯ ಅತಿಥಿಗಳು : ಡಾ. ಬಿ.ಆರ್. ಗುರುಪ್ರಸಾದ್, ಕೆ.ಸಿ. ಪುಟ್ಟಸಿದ್ದಶೆಟ್ಟಿ, ಕೆ.ಪಿ. ಸುನೀಲ್ ಕುಮಾರ್, ಎಂ.ಎಸ್. ನಾಗೇಶ್, ಸ್ಥಳ: ಕಾಲೇಜು ಆವರಣ, ಸಂಜೆ 4ಕ್ಕೆ.
- **ದಿ ನೈನ್ ಇನ್ನರ್ ವ್ಹೀಲ್ ಕ್ಲಬ್ಸ್ ಆಫ್ ಮೈಸೂರು :** ಆರೇಂಜ್ ದಿ ವರ್ಲ್ಡ್ ಅಭಿಯಾನ, ಉಪಸ್ಥಿತರು : ಡಿಸಿಪಿ ಶ್ರೀಮತಿ ಬಿಂದುಮಣಿ, ಸ್ಥಳ: ಇನ್ನರ್‌ವ್ಹೀಲ್ ಕ್ಲಬ್ಸ್ ಆಫ್ ಮೈಸೂರು ಆವರಣ, ಸಂಜೆ 4ಕ್ಕೆ.
- **ಡಿಎವಿ ಪಬ್ಲಿಕ್ ಸ್ಕೂಲ್ :** 22ನೇ ಶಾಲಾ ವಾರ್ಷಿಕೋತ್ಸವ 'ಶಿಶಿರೋತ್ಸವ' ಕಾರ್ಯಕ್ರಮ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಬಯಲು ರಂಗ ಮಂದಿರ, ಮಾನಸಗಂಗೋತ್ರಿ, ಸಂಜೆ 4.30ಕ್ಕೆ.
- **ಕ್ರೆಡಾಯ್ ಮೈಸೂರು, ಕರ್ನಾಟಕ ರೇರಾ :** ರೇರಾ ಜಾಗೃತಿ ಕಾರ್ಯಾಗಾರ, ಮುಖ್ಯ ಅತಿಥಿಗಳು : ರೇರಾ, ಕರ್ನಾಟಕ ಅಧ್ಯಕ್ಷ ರಾಕೇಶ್ ಸಿಂಗ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಉಕೇಶ್ ಕುಮಾರ್, ಮೈಸೂರು ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಆರ್. ರಕ್ಷಿತ್, ರೇರಾ, ಕರ್ನಾಟಕ ಕಾರ್ಯದರ್ಶಿ ಡಾ. ಹೆಚ್.ಆರ್. ಶಿವಕುಮಾರ್, ಸ್ಥಳ: ಎಂಬಿಸಿಟಿ ಹಾಲ್, ಇಂಡಸ್ಟ್ರಿಯಲ್ ಸಬರ್ಬ್, ವಿದ್ಯಾರಣ್ಯಪುರಂ, ಸಂಜೆ 4.30 ರಿಂದ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 909, ಕಥೆ ಹೇಳುವವರು: ಧನಂಜಯ ಎನ್, ಹಿರಿಯ ರಂಗಕರ್ಮಿ ಹಾಗೂ ಅಂಕಣಬರಹಗಾರರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಪ್ರಮತಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ :** ಪ್ರಮತಿ ಉತ್ಸವ, ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಚಲನಚಿತ್ರ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4.30ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭಾದರಾಯಣಾಚಾರ್ಯ ಅವರಿಂದ ಶ್ರೀಮದ್ ಭಾಗವತ ಮುಂದುವರಿದ ಭಾಗ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸಮಾರೋಪ ಭಾಷಣ : ಮಹಾರಾಜ ಕಾಲೇಜು ವಿಶ್ರಾಂತ ಪ್ರಾಂಶುಪಾಲ ಡಾ. ಸಿ.ಎ. ಶ್ರೀಧರ್, ಸಮ್ಮೇಳನಾಧ್ಯಕ್ಷೆ ವಿದುಷಿ ಡಾ. ಟಿ.ಎಸ್. ಸತ್ಯವತಿ ಅವರಿಂದ ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ, ಸಂಗೀತ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ : ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಅಧ್ಯಕ್ಷ ರಮೇಶ್ ಕೆ. ಕಣ್ಣನ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 5.30ಕ್ಕೆ
- **ವ್ಯವಸ್ಥಾಪಕರು :** ಪ್ರೊಟೆಕ್ಟ್ ದ ಪಬ್ಲಿಕ್ ಮಾಸ ಪತ್ರಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ :ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ. ಹರೀಶ್‌ಗೌಡ, ಶಿಕ್ಷಣ ತಜ್ಞ ಪ್ರೊ. ಸಿ.ಜಿ. ವೆಂಕಟರಮಣ ಶೆಟ್ಟಿ, ವಕೀಲ ಪಿ. ಪಾಲಾಕ್ಷ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ರಾಜುಕಾರ್ಯ, ಡಾ. ಶೈಲೇಶ್‌ರಾಜ್ ಅರಸ್, ಸ್ಥಳ:ಐಡಿಯಲ್ ಜಾವಾ ಸ್ಕೂಲ್, ಜೆಎಲ್‌ಬಿ ರಸ್ತೆ, ಸಂಜೆ 5.45ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಶಾಂತ ನರಸಿಂಹಂ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಆರ್. ಸಾಯಿ ವಿಘ್ನೇಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಬಿ.ಕೆ. ರಘು–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಆರ್. ಶ್ರೀನಿಧಿ ಕೌಂಡಿಲ್ಯ–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್–ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ಸುರೇಖಾ ಮನೋಜ್ ಅವರಿಂದ ಇಂಪ್ಯಾಕ್ಟ್ ಆಫ್ ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್ ಆನ್ ದಿ ಪವರ್ ಗ್ರಿಡ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರ :** ಅಭಿವ್ಯಕ್ತಿ ಹಬ್ಬ–2025, ನೃತ್ಯೋನ್ನತಿ ಭರತನಾಟ್ಯ ಕಾರ್ಯಾಗಾರ, ವಿದುಷಿ ದಿವ್ಯ ರವಿ ಅವರಿಂದ ಭರತನಾಟ್ಯ, ಸ್ಥಳ: ಋತ್ವಿಕ್ ವೇದಿಕೆ, ಜಯಲಕ್ಷ್ಮಿದೇವಿ ಪಿಯು ಕಾಲೇಜು, ರಾಮಕೃಷ್ಣನಗರ, ಸಂಜೆ 6 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 6 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 228 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೋಮು ಗಲಭೆ ನಿಗ್ರಹಕ್ಕೆ ಮಂಡ್ಯ ಜಿಲ್ಲೆಗೂ
ವಿಶೇಷ ಕಾರ್ಯಪಡೆ

ಗೃಹ ಸಚಿವ ಡಾ. ಪರಮೇಶ್ವರ್ ಘೋಷಣೆ



ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಪೊಲೀಸ್ ಇಲಾಖೆಯ ಪ್ರಗತಿ ಸ್ತಂಭಗಳು ಪುಸ್ತಕ ಬಿಡುಗಡೆ ಮಾಡಿದರು.

ಬೆಂಗಳೂರು, ಡಿ.5– ಮಂಡ್ಯ ಜಿಲ್ಲೆಯಲ್ಲಿ ಸೂಕ್ಷ್ಮ ಪ್ರಕರಣಗಳ ನಿರ್ವಹಣೆಗೆ ವಿಶೇಷ ಕಾರ್ಯಪಡೆ ರಚಿಸಲಾಗುವುದು. ಅಲ್ಲದೇ ಪೊಲೀಸ್ ಇಲಾಖೆಯು ಜನಸ್ನೇಹಿಯಾಗಿ, ಕೇಂದ್ರಿಕೃತವಾಗಿ ಕೆಲಸ ಮಾಡುತ್ತಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು.

ಪೊಲೀಸ್ ಪ್ರಧಾನ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಹಾಗೂ ರೆನಾಲ್ಟ್ ನಿಸ್ಸಾನ್ ಟೆಕ್ನಾಲಜಿ ಮತ್ತು ಬಿಸಿನೆಸ್ ಸೆಂಟರ್ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ 'ಹೈಜಿನ್ ಆನ್ ಗೋ' ವಾಹನಗಳ ಹಸ್ತಾಂತರ ಹಾಗೂ ಪೊಲೀಸ್ ಇಲಾಖೆಯ 'ಪ್ರಗತಿಯ ಸ್ತಂಭಗಳು' ಪುಸ್ತಕವನ್ನು ಬಿಡುಗಡೆಗೊಳಿಸಿ ಬಳಿಕ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದರು.

ಕಳೆದ ಎರಡು ವರ್ಷದಲ್ಲಿ ನಮ್ಮ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಅನೇಕ ಸವಾಲುಗಳನ್ನು ಎದುರಿಸಿಕೊಂಡು ಬಂದಿದೆ. ಜನಸ್ನೇಹಿಯಾಗಿ ಕೆಲಸ ಮಾಡಬೇಕು ಎಂಬುದು ಪೊಲೀಸ್ ಇಲಾಖೆಯ ಉದ್ದೇಶ. ಯಾವುದೇ ಅಹಿತಕರ ಘಟನೆ ಆಗಬಾರದು. ಕಳೆದ ಎರಡು ವರ್ಷದ ಅವಧಿಯಲ್ಲಿ ಈ ನಿಟ್ಟಿನಲ್ಲೇ ಇಲಾಖೆ ಕೆಲಸ ಮಾಡಿದೆ ಎಂದು ಹೇಳಿದರು.

ಇಲಾಖೆಯಲ್ಲಿ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವ ಮೂಲಕ ಬದಲಾವಣೆಗಳನ್ನು ತಂದಿದ್ದೇವೆ. ರಾಜ್ಯದ ಪೊಲೀಸ್ ಇಲಾಖೆ ಸ್ನೇಹತ್ವದಿಂದ ಜನಗಳ ಕೆಲಸಗಳಾಗಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಲ್ಲಿ ಅನ್ಯರಿಗೆ ತೊಂದರೆಯಾಗಬಾರದು. ಬದಲಾದ ಪರಿಸ್ಥಿತಿಯಲ್ಲಿ ತಂತ್ರಜ್ಞಾನದ ಉಪಯೋಗದಿಂದ ಅಪರಾಧಗಳನ್ನು ಕಂಡು ಹಿಡಿಯುವ ರೀತಿಯಲ್ಲಿ ಕೆಲಸ ಮಾಡಲಾಗಿದೆ ಎಂದರು.

ಕರ್ನಾಟಕ ಪೊಲೀಸ್ ಹೆಗ್ಗಳಿಕೆ: ಕರ್ನಾಟಕ ಪೊಲೀಸ್ ನಾಗರಿಕರಿಗೆ ನ್ಯಾಯವನ್ನು ಒದಗಿಸುವುದರಲ್ಲಿ ಇಡೀ ದೇಶದಲ್ಲಿ ಮೊದಲನೇ ಸ್ಥಾನದಲ್ಲಿದೆ. ವಿವಿಧ ಮಾನದಂಡಗಳನ್ನು ಇಟ್ಟುಕೊಂಡು ಇಂಡಿಯಾ ಜಸ್ಟೀಸ್ ರಿಪೋರ್ಟ್ ಸಮೀಕ್ಷಾ ವರದಿ ನೀಡಿದೆ. 10 ಅಂಕಗಳಲ್ಲಿ ಕರ್ನಾಟಕ 6.78 ಅಂಕಗಳನ್ನು ಪಡೆದು ಮೊದಲನೆಯ ಸ್ಥಾನ ಗಳಿಸಿದೆ. ಪೊಲೀಸ್ ಮತ್ತು ನ್ಯಾಯಾಂಗ ಎರಡೂ ಸಾಮ್ಯತೆಯಿಂದ ಕೆಲಸ ಮಾಡಿ, ವಿಶೇಷವಾಗಿ ಶೋಷಿತ ಸಮುದಾಯಗಳಿಗೆ ನ್ಯಾಯ ಕೊಡಿಸುವುದರಲ್ಲಿ ಮೊದಲನೇ ಸ್ಥಾನದಲ್ಲಿದೆ.

ದೇಶದಲ್ಲೇ ಮೊದಲು ಡಿಸಿಆರ್ಇ ಠಾಣೆ: ನಮ್ಮ ಸರ್ಕಾರವು ಅನೇಕ ಬದಲಾವಣೆಗಳನ್ನು ತಂದಿದೆ. ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ 33 ಡಿಸಿಆರ್ಇ ಠಾಣೆಗಳನ್ನು ಸ್ಥಾಪಿಸಲಾಗಿದೆ. ಡಿಸಿಆರ್ಇ ಅಧಿಕಾರಿಗಳು ಪ್ರತಿ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ಪ್ರತ್ಯೇಕಗೊಳಿಸಿ ಎಸ್‌ಸಿ, ಎಸ್‌ಟಿ ಸಮುದಾಯಗಳ ಜನರ ಮೇಲಿನ ದೌರ್ಜನ್ಯ ತಡೆ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ.

ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಡಿಸಿಆರ್ಇ ಪ್ರತ್ಯೇಕ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿಲ್ಲ. ಜಿಲ್ಲೆಗಳ ಪೊಲೀಸ್ ಪ್ರಗತಿ ಪರಿಶೀಲನೆ ವೇಳೆ ಎಸ್‌ಸಿ, ಎಸ್‌ಟಿ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸುವುದಿಲ್ಲ ಎಂಬ ಆರೋಪಗಳು ಕೇಳಿ ಬಂದಿದ್ದವು. ಇದನ್ನು ಆದರಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಮಂಡ್ಯ ಜಿಲ್ಲೆಗೂ ಕಾರ್ಯಪಡೆ: ಕರಾವಳಿ ಭಾಗದಲ್ಲಿ ಕೊಲೆ, ಕೋಮು ಗಲಭೆಗಳು ನಡೆದವು. ಶಾಂತಿ ಇಲ್ಲದಂತಾಗಿತ್ತು. ಸಮಾಜದಲ್ಲಿ ದ್ವೇಷ ಭಾವನೆ ಮೂಡುತ್ತಿರುವುದನ್ನು ಗಮನಿಸಿ, ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿಶೇಷ ಕಾರ್ಯಪಡೆ (ಸ್ಪೆಷಲ್ ಆ್ಯಕ್ಷನ್ ಫೋರ್ಸ್) ಸ್ಥಾಪನೆ ಮಾಡಲಾಗಿದೆ. 300ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಲಾಗಿದೆ. ನಮಗೆ ಸಿಕ್ಕ ಮಾಹಿತಿ ಆಧರಿಸಿ ಮಂಡ್ಯ ಜಿಲ್ಲೆಗೂ ಸ್ಪೆಷಲ್ ಆ್ಯಕ್ಷನ್ ಫೋರ್ಸ್ ■6ನೇ ಪುಟಕ್ಕೆ

ಭಾರತಕ್ಕೆ ತೈಲ ಸರಬರಾಜು ನಿಲ್ಲಲ್ಲ; ರೂಪಾಯಿ–ರುಬೆಲ್‌ನಲ್ಲೇ ವ್ಯವಹಾರ



ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್–ಪ್ರಧಾನಿ ಮೋದಿ ಯಶಸ್ವಿ ದ್ವಿಪಕ್ಷೀಯ ಮಾತುಕತೆ.

ಅಮೆರಿಕಾಕ್ಕೆ ಪುಟಿನ್ ಪರೋಕ್ಷ ಟಾಂಗ್

ನವದೆಹಲಿ, ಡಿ.5– ಭಾರತಕ್ಕೆ ತಡೆರಹಿತ ಇಂಧನದ ಪೂರೈಕೆಯನ್ನು ಕಾಯ್ದುಕೊಳ್ಳುವ ಬದ್ಧತೆಯನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪುನರುಚ್ಚರಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡುವಂತೆ ಅಮೆರಿಕ ಭಾರತದ ಮೇಲೆ ಒತ್ತಡ ಹೇರುತ್ತಿರುವ ಸಮಯದಲ್ಲಿ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ಘೋಷಣೆ ಹೊರಬಿದ್ದಿದೆ.

ತೈಲ, ಅನಿಲ, ಕಲ್ಲಿದ್ದಲು ಮತ್ತು ಭಾರತದ ಇಂಧನ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲದರ ವಿಶ್ವಾಸಾರ್ಹ ಪೂರೈಕೆದಾರ ರಷ್ಯಾ ಎಂದು ಪುಟಿನ್ ಹೇಳಿದರು. ಮಾಸ್ಕೋ ನವದೆಹಲಿಯ ದೀರ್ಘಕಾಲೀನ ಇಂಧನ ಅವಶ್ಯಕತೆಗಳನ್ನು ಅಡೆತಡೆಯಿಲ್ಲದೆ ಪೂರೈಸಲು ಸಿದ್ಧವಾಗಿದೆ. ನಾವು ರೂಪಾಯಿ ಮತ್ತು ರುಬೆಲ್‌ನಲ್ಲೇ ವ್ಯವಹರಿಸುತ್ತೇವೆ ಎಂದು ಅವರು ತಿಳಿಸಿದರು. ಭಾರತೀಯ ಸಶಸ್ತ್ರ ಪಡೆಗಳನ್ನು ಆಧುನೀಕರಿಸುವಲ್ಲಿ ಮಾಸ್ಕೋದ ನಿರಂತರ ಪಾತ್ರವನ್ನು ಒತ್ತಿ ಹೇಳಿದ ಪುಟಿನ್, ನಮ್ಮ ದೇಶ ಕಳೆದ ಅರ್ಧ ಶತಮಾನದಿಂದ ವಾಯು ರಕ್ಷಣಾ ಪಡೆಗಳು, ವಾಯುಯಾನ ಮತ್ತು ನೌಕಾಪಡೆ ಸೇರಿದಂತೆ ಭಾರತೀಯ ಸೇನೆಯನ್ನು ಶಸ್ತ್ರಸಜ್ಜಿತ ಗೊಳಿಸಲು ಮತ್ತು ■6ನೇ ಪುಟಕ್ಕೆ

ಪುಟಿನ್ ಭೇಟಿ ಬೆನ್ನಲ್ಲೇ ಭಾರತದೊಂದಿಗೆ ವ್ಯಾಪಾರ ಮಾತುಕತೆಗೆ ಅಮೆರಿಕ ತೀವ್ರಾಸಕ್ತಿ

ನವದೆಹಲಿ, ಡಿ.5– ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತ ಭೇಟಿಯನ್ನು ಇಡೀ ವಿಶ್ವವೇ ಕುತೂಹಲದಿಂದ ನೋಡುತ್ತಿದ್ದು, ಈ ಮಧ್ಯೆ ಅಮೆರಿಕ ಭಾರತದೊಂದಿಗೆ ವ್ಯಾಪಾರ ಮಾತುಕತೆ ನಡೆಸಲು ತುದಿಗಾಲಲ್ಲಿ ನಿಂತಿದೆ.

ಅಮೆರಿಕದ ವ್ಯಾಪಾರ ಪ್ರತಿನಿಧಿ ರಿಕ್ ಸ್ವಿಟ್ಜರ್ ನೇತೃತ್ವದ ಟ್ರಂಪ್ ಆಡಳಿತದ ಸಂಧಾನಕಾರರ ತಂಡ ಮುಂದಿನ ವಾರ ಭಾರತಕ್ಕೆ ಪ್ರಯಾಣ ಬೆಳೆಸಲಿದ್ದು, ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ಮುಂದುವರಿಸಲಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದೊಂದಿಗೆ ಆರಂಭಿಕ ಒಪ್ಪಂದವನ್ನು ಅಂತಿಮಗೊಳಿಸಲು ಉತ್ಸುಕವಾಗಿದೆ ಭಾರತೀಯ ಸರಕುಗಳ ಮೇಲಿನ ಶೇ.50 ರಷ್ಟು ಸುಂಕಗಳು ದೇಶದ ಆರ್ಥಿಕತೆಯ ಪ್ರಮುಖ ವಲಯಗಳಿಗೆ ಅಡ್ಡಿಯಾಗಿದ್ದು, ಇದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒಪ್ಪಂದ ಅಂತಿಮಗೊಳಿಸಲು ಬಯಸಿದೆ.

ವರ್ಷಕ್ಕೆ ಮೂರು ಬಾರಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಗೊಂದಲ ಬೇಡ

ಶಿವಮೊಗ್ಗ, ಡಿ.5– ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಈಗಿನಂತೆ ವರ್ಷಕ್ಕೆ ಮೂರು ಬಾರಿಯೇ



ಮುಂದುವರೆಯಲಿದೆ. ಅದನ್ನು ಎರಡು ಬಾರಿಗೆ ಇಳಿಸುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ. ಅದೆಲ್ಲವೂ ಮಾಧ್ಯಮಗಳ ಸೃಷ್ಟಿ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷೆಗಳ ಸಂಖ್ಯೆಯನ್ನು ಎರಡು ಬಾರಿಗೆ ಇಳಿಸಲಾಗುತ್ತದೆ ಎಂದು ಕೆಲವು ಮಾಧ್ಯಮಗಳಲ್ಲಿ ತಪ್ಪು ಸುದ್ದಿ ಪ್ರಕಟವಾಗಿದೆ. ಇದರಿಂದ ಮಕ್ಕಳಲ್ಲಿ ವೃಥಾ ಗೊಂದಲ ಉಂಟಾಗಲಿದೆ. ಅವರು ಧೈರ್ಯ ಕಳೆದುಕೊಳ್ಳಲಿದ್ದಾರೆ. ಇಂತಹ ವಿಷಯಗಳಲ್ಲಿ ಮಾಧ್ಯಮದವರು ಜವಾಬ್ದಾರಿಯಿಂದ ವರ್ತಿಸಲಿ. ಆ ಬಗ್ಗೆ ಅನಗತ್ಯ ಚರ್ಚೆಗಳೂ ಬೇಡ ಎಂದು ಸಲಹೆ ನೀಡಿದರು. ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ತರುವುದಿದ್ದರೆ ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಅದನ್ನು ಮಾಧ್ಯಮಗಳಿಗೆ ತಿಳಿಸಿಯೇ ಮುಂದುವರೆಯಲಿದ್ದೇವೆ. ಹೀಗಾಗಿ ಆತುರ ಬೇಡ ಎಂದರು.

ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ವರಿಷ್ಠರ ಸಂದೇಶ ತಲುಪಿಸಿದ ಸಚಿವ ಪ್ರಿಯಾಂಕ್ ಖರ್ಗೆ!

ಬೆಂಗಳೂರು, ಡಿ. 5(ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತಂತೆ ಕಾಂಗ್ರೆಸ್ ವರಿಷ್ಠರು ನೀಡಿರುವ ಸಂದೇಶವನ್ನು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಲುಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನಡುವಿನ ಅಧಿಕಾರ ಹಸ್ತಾಂತರ ವಿಚಾರ ಮುನ್ನೆಲೆಗೆ ಬರುತ್ತಿದ್ದಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ರಾಜ್ಯದ ಕೆಲವು ಮುಖಂಡರು ಮತ್ತು ಸಚಿವರನ್ನು ಕರೆಸಿಕೊಂಡು ಸಮಾಲೋಚನೆ ಮಾಡಿದ್ದರು.



ಪ್ರಿಯಾಂಕ್ ಖರ್ಗೆ

ಇದಕ್ಕೆ ಸಂಬಂಧಿಸಿದಂತೆ ರಾಹುಲ್, ಸಚಿವ ಪ್ರಿಯಾಂಕ್ ಅವರನ್ನು ಎರಡು–ಮೂರು ಬಾರಿ ದೆಹಲಿಗೆ ಕರೆಸಿಕೊಂಡು ಚರ್ಚೆ ಮಾಡಿದ್ದಾರೆ. ಒಮ್ಮೆ ಪ್ರಿಯಾಂಕ್ ದೆಹಲಿಯಿಂದ ಹಿಂತಿರುಗುತ್ತಿದ್ದಂತೆ, ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ವರಿಷ್ಠರ ಸಂದೇಶ ನೀಡಿದ್ದರು.

ಇದಾದ ನಂತರವೂ ಶಿವಕುಮಾರ್ ಅವರನ್ನು ಎರಡು ಬಾರಿ ಭೇಟಿ ಮಾಡಿದ್ದರು. ಇಂದು ಬೆಳ್ಳಂಬೆಳಗ್ಗೆ ಮತ್ತೆ ಉಪಮುಖ್ಯಮಂತ್ರಿ ನಿವಾಸಕ್ಕೆ ತೆರಳಿ ಸುಮಾರು 90 ನಿಮಿಷಗಳವರೆಗೆ ಮುಖಾಮುಖಿ ಚರ್ಚೆ ಮಾಡಿದ್ದಾರೆ.

ಈ ಕುರಿತು ಇಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಶಿವಕುಮಾರ್, ನಿನ್ನೆ ರಾತ್ರಿ ಮದುವೆಯೊಂದರಲ್ಲಿ ಸತೀಶ್ ಜಾರಕಿಹೊಳಿ ಭೇಟಿಯಾಗಿದ್ದು ನಿಜ, ರಾಜ್ಯ ಹಾಗೂ ಪಕ್ಷದ ವಿಚಾರ ಮಾತನಾಡಿದ್ದೇವೆ. ನಾವು ಸಹೋದ್ಯೋಗಿಗಳು, ನಮ್ಮನ್ನು ವೈರಿಗಳಂತೆ ಏಕೆ ನೋಡುತ್ತೀರಿ ಎಂದು ಪ್ರಶ್ನಿಸಿದರು. ನಾವು ಸಚಿವ ಸಂಪುಟ ಸಭೆಯಲ್ಲಿ ಇರುತ್ತೇವೆ. ರಾತ್ರಿ ಊಟಕ್ಕೆ ಸೇರುತ್ತೇವೆ. ಬೆಳಗ್ಗೆ ತಿಂಡಿಗೆ ಸೇರುತ್ತೇವೆ. ಇವೆಲ್ಲ ಇದ್ದದ್ದೇ. ರಾಜಕೀಯದಲ್ಲಿ ಸ್ನೇಹ, ಬಾಂಧವ್ಯ, ನೆಂಟಸ್ಥನ ಇದ್ದೇ ಇರುತ್ತದೆ. ■6ನೇ ಪುಟಕ್ಕೆ

1.2 ಕೆಜಿ ಚಿನ್ನ ದರೋಡೆ ಪ್ರಕರಣ: ಮೂವರು ವಶಕ್ಕೆ

ಮಾಸ್ಟರ್ ಮೈಂಡ್‌ಗೆ ಶೋಧ

ಮೈಸೂರು ಡಿ. 5 (ಆರ್‌ಕೆ)– ಇತ್ತೀಚೆಗಷ್ಟೇ ಬಂಡೀಪುರ ಅರಣ್ಯ ಪ್ರದೇಶದಲ್ಲಿ ದುಷ್ಕರ್ಮಿಗಳ ಗುಂಪೊಂದು ಕೇರಳದ ಆಭರಣ ತಯಾರಕನ ಕಾರು ಅಡ್ಡಗಟ್ಟಿ 1.2 ಕೆಜಿ ಚಿನ್ನ ದರೋಡೆ ಮಾಡಿದ ಪ್ರಕರಣದಲ್ಲಿ ಗುಂಡ್ಲುಪೇಟೆ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಗುಂಡ್ಲುಪೇಟೆ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್ ನೇತೃತ್ವದ ತನಿಖಾ ತಂಡ ಕೇರಳದಲ್ಲಿ ಕಾರ್ಯಾಚರಣೆ ನಡೆಸಿ ಮೂವರನ್ನು ವಶಕ್ಕೆ ಪಡೆದಿದ್ದು ಅವರ ಮಾಹಿತಿ ಆಧರಿಸಿ ತಲೆಮರೆಸಿಕೊಂಡಿರುವ ದರೋಡೆ ಪ್ರಕರಣದ ಮಾಸ್ಟರ್ ಮೈಂಡ್ ಪತ್ತೆಗೆ ತೀವ್ರ ಶೋಧ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಕಳೆದ ನ.20 ರಂದು ಸಂಜೆ 7.30 ರ ವೇಳೆ ಕೇರಳದ ಕ್ಯಾಲಿಕಟ್‌ನ ಚಿನ್ನಾಭರಣ ವ್ಯಾಪಾರಿ ವಿನು ಎಂಬುವರ ಮಾರುತಿ ಬ್ರೇಜಾ (ಕೆಎಲ್ 58, ವಿ 1595) ಕಾರನ್ನು ಬಂಡೀಪುರ ಮೂಲೆಹೊಳೆಯ ಮದ್ದೂರು ಅರಣ್ಯ ಚೆಕ್‌ಪೋಸ್ಟ್ ಸಮೀಪ ಅಡ್ಡಗಟ್ಟಿ, ವಿನು ಮತ್ತು ಅವರ ಕಾರು ಚಾಲಕನ ಮೇಲೆ ಹಲ್ಲೆ ನಡೆಸಿ, ಅವರನ್ನು ಕಾರಿನ ಸಮೇತ ಅಪಹರಿಸಿಕೊಂಡು ಬಂದು, 1.2 ಕೆಜಿ ಚಿನ್ನದ ಗಟ್ಟಿಯನ್ನು ■6ನೇ ಪುಟಕ್ಕೆ

ರಾಜ್ಯ ಸರ್ಕಾರದ ವಿರುದ್ಧ ಮತ್ತೊಂದು ಹಗರಣ
ಕೆಎಸ್‌ಡಿಎಲ್‌ನಲ್ಲಿ ನಡೆದಿದೆಯಂತೆ ಸಾವಿರ ಕೋಟಿ ಭ್ರಷ್ಟಾಚಾರ

ಬೆಂಗಳೂರು, ಡಿ. 5– ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ ಗಂಧದ ಎಣ್ಣೆ ಖರೀದಿಯಲ್ಲಿ 1000 ಕೋಟಿ ರೂ. ಭ್ರಷ್ಟಾಚಾರವಾಗಿದೆ ಎಂದು ಕೆಆರ್ ಪೇಟೆ ಜೆಡಿಎಸ್ ಶಾಸಕ ಹೆಚ್.ಟಿ. ಮಂಜು ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.



ಹೆಚ್.ಟಿ.ಮಂಜು

ವಿಧಾನಸೌಧದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಂಧದ ಎಣ್ಣೆ ಖರೀದಿಯಲ್ಲಿ 1000 ಕೋಟಿ ರೂ. ಭ್ರಷ್ಟಾಚಾರ ಆಗಿದೆ. ಈ ಸಂಬಂಧ 800 ಪುಟಗಳ ವರದಿಯನ್ನು ಪಡೆದಿದ್ದೇವೆ. 9 ಟೆಂಡರ್ ದಾಖಲೆಗಳು ಮಾತ್ರ ಸಿಕ್ಕಿವೆ. ಸರ್ಕಾರದ ಮುಖ್ಯ ಕಾರ್ಯದರ್ಶಿ, ಇಲಾಖೆಯ ಸಚಿವರು, ಸಿಎಂಗೆ ಪತ್ರ ಬರೆದಿದ್ದು, ಯಾರೊಬ್ಬರೂ ಈವರೆಗೆ ಉತ್ತರ ನೀಡಿಲ್ಲ ಎಂದಿದ್ದಾರೆ.

ಬ್ಲಾಕ್ ಲಿಸ್ಟ್‌ಗೆ ಸೇರಿದ ಕಂಪನಿಗೆ ಟೆಂಡರ್: ಬ್ಲಾಕ್ ಲಿಸ್ಟ್‌ಗೆ ಸೇರಿಸಿರುವ ಕರ್ನಾಟಕ ಅರೋಮಾಸ್ ಎಂಬ ಕಂಪನಿಗೆ ಗಂಧದ ಎಣ್ಣೆ ಖರೀದಿಗೆ ಟೆಂಡರ್ ಕೊಡುತ್ತಾರೆ. ಟೆಂಡರ್‌ನಲ್ಲಿ ಪಾಲಿಸಬೇಕಾದ ನಿಯಮ ಪಾಲಿಸಿಲ್ಲ. ಹೊರಗಡೆಯಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ, ಆದರೆ ದಾಖಲೆ ನೀಡುತ್ತಿಲ್ಲ. ಇಲ್ಲಿನ ಎಣ್ಣೆಯನ್ನೇ ಖರೀದಿ ಮಾಡಿದ್ದಾರೆ. ಯಾವುದೇ ಜಿಎಸ್‌ಟಿ ಕಟ್ಟಿಲ್ಲ. 2025ರ ಮೇ ತಿಂಗಳಿನಲ್ಲಿ ನಾನು ಪತ್ರ ಬರೆದಿದ್ದೆ. ಆಗ 1ಕೆ.ಜಿ ಗಂಧದ ಎಣ್ಣೆಗೆ 2 ಲಕ್ಷ 24 ಸಾವಿರ ರೂ. ಕೊಟ್ಟು ಖರೀದಿಸಲಾಗಿದೆ. ನಾನು ಪತ್ರಕೊಟ್ಟ ನಂತರ ಈ ವರ್ಷ ಗಂಧದ ಎಣ್ಣೆಯ ದರ ಕೆ.ಜಿಗೆ 93 ಸಾವಿರ ರೂ ಮಾತ್ರ. ಅಷ್ಟು ವ್ಯತ್ಯಾಸ ಏಕೆ ಬರುತ್ತದೆ ಎಂದು ಶಾಸಕ ಹೆಚ್.ಟಿ ಮಂಜು ಪ್ರಶ್ನಿಸಿದ್ದಾರೆ.

ಆರ್‌ಬಿಐ ವಿತ್ತೀಯ ನೀತಿ ಪ್ರಕಟ
ರೆಪೊ ದರ ಶೇ.5.25ಕ್ಕೆ ಇಳಿಕೆ

ಗೃಹ, ವಾಹನ ಖರೀದಾರರಿಗೆ ಸಂತಸದ ಸುದ್ದಿ!

ಚೆನ್ನೈ, ಡಿ.5– ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ಬಹುನಿರೀಕ್ಷಿತ ನೀತಿ ಬದಲಾವಣೆಯನ್ನು ಪ್ರಕಟಿಸಿದ್ದು, ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು 25 ಬೇಸಿಸ್ ಪಾಯಿಂಟ್‌ಗಳಷ್ಟು ಸರ್ವಾನುಮತದಿಂದ ಕಡಿತಗೊಳಿಸಿ ತಟಸ್ಥ ನಿಲುವನ್ನು ಕಾಯ್ದುಕೊಂಡಿದೆ. ಮಾನದಂಡ ದರವು ಈಗ ಶೇ.5.25 ರಷ್ಟಿದ್ದು, ಈ ವರ್ಷಾಂತ್ಯದವರೆಗೆ 125 ಬೇಸಿಸ್ ಪಾಯಿಂಟ್‌ಗಳ ಸಂಚಿತ ಕಡಿತವನ್ನು ಸೂಚಿಸುತ್ತದೆ. ಹಾಗಾಗಿ ಗೃಹ, ವಾಹನ ಖರೀದಿದಾರರಿಗೆ ಹೆಚ್ಚು ಪ್ರಯೋಜನಕಾರಿ ಎಂದು ಹೇಳಲಾಗಿದೆ. ಹಣದುಬ್ಬರ ಇಳಿಕೆ ಮತ್ತು ನಿರೀಕ್ಷೆಗಿಂತ ಬಲವಾದ ಆರ್ಥಿಕ ವೇಗದ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಇತ್ತೀಚಿನ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರವು ಕನಿಷ್ಠ ಮಟ್ಟಕ್ಕೆ ಇಳಿದಿದ್ದು, ಬೆಲೆ ಸ್ಥಿರತೆಗೆ ಧಕ್ಕೆ ತರದೆ ■6ನೇ ಪುಟಕ್ಕೆ

ಸಕ್ಕರೆ ನಾಡಿನಲ್ಲಿ ಕೃಷಿ ಮೇಳ

ಮಂಡ್ಯ ಭಾಗದ ಕಬ್ಬಿನ ಇಳುವರಿ ಹೆಚ್ಚಿಸಿ

ಕೃಷಿ ತಜ್ಞರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಮಂಡ್ಯ, ಡಿ.5– ಮಂಡ್ಯ ಭಾಗದಲ್ಲಿ ಕಬ್ಬಿನ ಇಳುವರಿ ಶೇ.9.5 ಇದೆ. ಅದೇ ಮಹಾರಾಷ್ಟ್ರದಲ್ಲಿ ಶೇ.13ರಿಂದ 14 ಇದೆ. ಈ ವ್ಯತ್ಯಾಸಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಹಚ್ಚಿ ಎಂದು ಕೃಷಿ ತಜ್ಞರಿಗೆ ಸೂಚನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಮ್ಮ ರಾಜ್ಯದಲ್ಲಿ ಅತೀ ಹೆಚ್ಚು ಕಬ್ಬು ಬೆಳೆಯುವ ಮಂಡ್ಯದಲ್ಲಿ ಕಬ್ಬಿನ ಇಳುವರಿ ಇಲ್ಲ ಎಂಬುದು ಬೇಸರದ ವಿಚಾರ. ಮಣ್ಣಿನ ಪರೀಕ್ಷೆ ನಡೆಸಿ, ಅಗತ್ಯ ಕ್ರಮ ಕೈಗೊಂಡು ಇಳುವರಿ ಹೆಚ್ಚಿಸಬೇಕು ಎಂದು ಮಂಡ್ಯ ಕೃಷಿ ವಿವಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಲವು ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ತಾಲೂಕಿನ ವಿ.ಸಿ.ಫಾರಂನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಕೃಷಿ ಮೇಳವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ಕಬ್ಬಿಗೆ ಇಳುವರಿ ಸಿಕ್ಕಾಗ ರೈತರು ಹೆಚ್ಚಿನ ಲಾಭ ಕಾಣಬಹುದು. ಫಿಲಿಫೈನ್ಸ್‌ನ ತಳಿಗಳನ್ನು ತರಿಸಿ, ಇಲ್ಲಿ ಸಂಶೋಧನೆ ಮಾಡಬೇಕು. ಹೆಚ್ಚು ಇಳುವರಿ ನೀಡುವ

> ಮಂಡ್ಯ ಜಿಲ್ಲೆಯಲ್ಲಿ ಈವರೆಗೆ 18 ಕೋಟಿ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸಿದ್ದಾರೆ. 1.96 ಕೋಟಿ ಹಣ ಮಂಡ್ಯ ಜಿಲ್ಲೆಯಲ್ಲಿ ಈವರೆಗೆ ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ತಲುಪಿದೆ. ಗ್ಯಾರಂಟಿ ಯೋಜನೆಗಳಿಗೆ ಕೋಟಿ ಕೋಟಿ ಹಣವನ್ನು ನಾವು ಖರ್ಚು ಮಾಡಿದ್ದೇವೆ. ಮಂಡ್ಯ ಜಿಲ್ಲೆಯ 4.98 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ನೀಡಲಾಗಿದೆ.

ಕಬ್ಬನ್ನು ಬೆಳೆಯಬೇಕು. ಮಂಡ್ಯ ಜಿಲ್ಲೆಯಲ್ಲಿ ಕಬ್ಬಿನ ಇಳುವರಿ ಹೆಚ್ಚಿಸಲು, ಮೌಲ್ಯವರ್ಧನೆ ಹೆಚ್ಚಿಸಲು ಹಾಗೂ ಸಮಗ್ರ ಕೃಷಿ ಬಗ್ಗೆ ರೈತರಿಗೆ ಅರಿವು ಮೂಡಿಸಲು ಕಬ್ಬಿಗೆ ಹೆಚ್ಚಿನ ಇಳುವರಿ ಸಿಗುವ ಪ್ರದೇಶಕ್ಕೆ ಭೇಟಿ ನೀಡಿ, ಬಳಿಕ ಮಂಡ್ಯದಲ್ಲಿ ಅನುಷ್ಠಾನಗೊಳಿಸಿ, ರೈತರನ್ನು ಪ್ರೋತ್ಸಾಹಿಸಿ ಎಂದು ಸಲಹೆ ನೀಡಿದರು.

ಕೃಷಿ ಪ್ರಧಾನವಾದ ಭಾರತದಲ್ಲಿ ಶೇ.80 ರಷ್ಟು ಜನ ಸ್ವಾತಂತ್ರ್ಯ ಪೂರ್ವದಿಂದ ಕೃಷಿ ಅವಲಂಬಿತರು. ಆದರೆ ಇಂದು



ವಿಸಿ ಫಾರಂನಲ್ಲಿ ಏರ್ಪಡಿಸಿರುವ ಕೃಷಿ ಮೇಳದಲ್ಲಿ ರಾಗಿ ಪೈರಿನ ಬಗ್ಗೆ ಮಾಹಿತಿ ಪಡೆಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ.

60ರಷ್ಟು ಜನ ಮಾತ್ರ ಕೃಷಿ ಅವಲಂಬಿಸಿದ್ದಾರೆ. 20ರಷ್ಟು ಕೃಷಿಯಿಂದ ವಿಮುಖರಾಗಿದ್ದಾರೆ. ಇಲ್ಲಿ ಭತ್ತ, ಕಬ್ಬು, ಜೋಳ, ರಾಗಿ, ರೇಷ್ಮೆ ಸೇರಿ ಇನ್ನಿತರೆ ಬೆಳೆಗಳನ್ನು ಬೆಳೆಯುತ್ತಾರೆ. ರೇಷ್ಮೆ ಬೆಳೆ ಇತ್ತೀಚೆಗೆ ರಾಜ್ಯದಲ್ಲಿ ಕಡಿಮೆಯಾಗುತ್ತಿದೆ. ರೋಗಗಳ ಭಯದಿಂದ ಈ ಬೆಳೆ ಕಡಿಮೆಯಾಗುತ್ತಿದೆ. ನಾನು ಮೊದಲ ಬಾರಿಗೆ ಮಂತ್ರಿಯಾಗಿದ್ದು ರೇಷ್ಮೆ ಇಲಾಖೆಯಲ್ಲಿ. ಸುಮಾರು 45 ವರ್ಷ ರಾಜಕಾರಣದಲ್ಲಿದ್ದರೂ ಕೃಷಿ ಮೇಲೆ ಅವಲಂಬಿತನಾಗಿದ್ದೆ. ನಾನು ಊರಿಗೆ ಹೋದಾಗಲೆಲ್ಲಾ ಕೃಷಿಯಲ್ಲಿ ತೊಡಗಿಸಿಕೊಂಡು ಹಲವು ಬೆಳೆಗಳನ್ನು ಬೆಳೆದಿದ್ದೇನೆ ಎಂದು ಸ್ಮರಿಸಿಕೊಂಡರು.

ಉಪ ಬೆಳೆ ಅವಶ್ಯ: ಪ್ರಸ್ತುತ ಕೃಷಿ ಲಾಭದಾಯಕವೋ, ನಷ್ಟವೋ ಎಂಬ ಚರ್ಚೆ ನಡೆಯುತ್ತಿದೆ. ರೈತರು ತಾವು ಬೆಳೆದ ಬೆಳೆಗಳಾದ ಭತ್ತ, ಕಬ್ಬು ಇನ್ನಿತರೆ ಬೆಳೆ ಜೊತೆಗೆ ಮೌಲ್ಯವರ್ಧನೆಯುಳ್ಳ ಉಪಬೆಳೆಗಳನ್ನು ಬೆಳೆಯಬೇಕು. ನಾವು ಬೆಳೆದ ಬೆಳೆಗಳನ್ನು ಹಾಗೆಯೇ ಮಾರುವುದರಿಂದ ಲಾಭವಿಲ್ಲ, ಬದಲಾಗಿ ಮೌಲ್ಯವರ್ಧನೆ ಮಾಡಿದಾಗ ಮಾತ್ರ ಲಾಭ ನೋಡಲು ಸಾಧ್ಯ. ಹೊಸ ತಳಿಗಳನ್ನು ರೂಢಿಸಿಕೊಂಡು, ಕೂಲಿ ಕಾರ್ಮಿಕರು ಸಿಗದಿದ್ದಾಗ ಯಂತ್ರೋಪಕರಣಗಳನ್ನು ಬಳಸಿಕೊಂಡು ಸಮಯ ಮತ್ತು ಹಣವನ್ನು ಉಳಿಸಿ, ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ರೈತರು ಅಧಿಕ ಲಾಭ ಕಾಣಬೇಕು ಎಂದು ಕರೆ ನೀಡಿದರು.

> ವಿದ್ಯಾವಂತ ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಅನೇಕ ಪ್ರಗತಿಪರ ರೈತರು ರಾಜ್ಯದಲ್ಲಿದ್ದಾರೆ. ಪ್ರಗತಿಪರ ರೈತರು, ಯುವಕರಲ್ಲಿ ಕೃಷಿಯ ಆಕರ್ಷಣೆ ಮೂಡಿಸಬೇಕು. ಮೌಲ್ಯವರ್ಧಕ ಬೆಳೆಗಳ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸಬೇಕು. ಫಿಲಿಫೈನ್ಸ್ ದೇಶದಲ್ಲಿ ಒಂದೇ ಗಿಡದಲ್ಲಿ ಎರಡು ತಳಿಯ ಬೆಳೆಗಳ ಬೆಳೆಯುತ್ತಾರೆ. ಈ ಬಗ್ಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅಲ್ಲಿ ಹೋಗಿ ನೋಡಿದ್ದಾರೆ. ಅದನ್ನು ನಮ್ಮ ಕೃಷಿ ವಿವಿಗಳು ಅಳವಡಿಸಿಕೊಂಡು ಸಂಶೋಧನೆ ನಡೆಸಿ, ರೈತರಿಗೆ ಪ್ರಚುರಪಡಿಸಬೇಕು. ವಿಜ್ಞಾನ– ತಂತ್ರಜ್ಞಾನ ಬೆಳೆಯುತ್ತಿದ್ದು, ಜನ ಇದರ ಸದುಪಯೋಗ ಪಡೆದುಕೊಳ್ಳಬೇಕು. -ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರಿನಲ್ಲಿ ಕೃಷಿ ಉತ್ಪನ್ನಗಳ ರಫ್ತು ಹೆಚ್ಚಿಸಲು ಕೃಷಿ ಮಾರುಕಟ್ಟೆ ಬಗ್ಗೆ ಅಂತರರಾಷ್ಟ್ರೀಯ ಸ್ಯಾಂಡ್‌ವಿಚ್ ಸ್ನಾತಕೋತ್ತರ ಪದವಿ ಪ್ರಾರಂಭಿಸಲು ವಿ.ಸಿ.ಫಾರಂ ಕೃಷಿ ವಿಶೇಷಾಧಿಕಾರಿ ಹರಿಣಿಕುಮಾರ್ ಸಲಹೆ ನೀಡಿದ್ದು, ನಾನು ಇದನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಅದಕ್ಕೆ ಚಾಲನೆ ನೀಡಲು ಸಿದ್ಧನಿದ್ದೇನೆ.

ಕೃಷಿ ಜಿಡಿಪಿಗೆ ಪ್ರಧಾನವಾಗಿ ವಂತಿಕೆ ಕೊಡುವ ವಿಭಾಗವಾಗಿದೆ. ಆದ್ದರಿಂದ ಕೃಷಿ ನಮ್ಮ ರಾಜ್ಯದಲ್ಲಿ ಪ್ರಮುಖವಾಗಿದೆ. ಕಾರ್ಮಿಕರು ಸಹ ಕೃಷಿ ಮೇಲೆ ಅತೀ ಹೆಚ್ಚು ಅವಲಂಬಿತರಾಗಿದ್ದಾರೆ. ಆ ಎಲ್ಲಾ ಕಾರ್ಮಿಕರು ಸಹ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ಬಡವರು, ಹಿಂದುಳಿದವರು, ಮಹಿಳೆಯರು, ಅಲ್ಪಸಂಖ್ಯಾತರು ಸೇರಿ ಎಲ್ಲಾ ಜಾತಿ ವರ್ಗದಲ್ಲೂ ಕೃಷಿ ಕಾರ್ಮಿಕರಿದ್ದಾರೆ ಎಂದರು.

ಪುಟ್ಟಣ್ಣಯ್ಯ ಹೆಸರಲ್ಲಿ ಕೃಷಿ ಅಧ್ಯಯನ ಕೇಂದ್ರ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಅವರ ಹೆಸರಿನಲ್ಲಿ ಕೃಷಿ ಅಧ್ಯಯನ ಕೇಂದ್ರ ಸ್ಥಾಪನೆಗೆ ನಿರ್ಧಾರ ಮಾಡಿದ್ದೇವೆ. ಅಸಮಾನತೆ ಹೋಗಲಾಡಿಸಲು ಕೃಷಿ, ಕಾರ್ಮಿಕ ಕ್ಷೇತ್ರಗಳಲ್ಲಿನ ಜನರಿಗೆ ಅನೇಕ ಕಾರ್ಯಕ್ರಮ ರೂಪಿಸಿದ್ದೇವೆ. ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಗು : ಮಮ್ಮಿ ನಿನ್ನೆ ನೀನಿಲ್ಲದಿರುವಾಗ ಪಕ್ಕದ ಮನೆ ಆಂಟಿ ಮನೆಗೆ ಬಂದಿದ್ದರು. ಅವರಿಗೆ ನಾನು ಕುಳಿತಿದ್ದ ಸೀಟು ಬಿಟ್ಟುಕೊಟ್ಟೆ.
ತಾಯಿ : ಜಾಣ ಮರಿ, ದೊಡ್ಡವರು ಬಂದಾಗ ನಾವು ನಮ್ಮ ಸೀಟು ಬಿಟ್ಟು ಕೊಡಬೇಕು. ನೀನು ಎಲ್ಲಿ ಕುಳಿತ್ತಿದ್ದೆ ಹೇಳು?
ಮಗು : ಅಪ್ಪನ ತೊಡೆ ಮೇಲೆ!

ಮೈಸೂರು ಮಿತ್ರ

ಶನಿವಾರ, 6 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮನಸ್ಸು ಸಿರಿವಂತವಾದರೆ ನಮ್ಮಲ್ಲಿ ಸಂಪತ್ತು ಇಲ್ಲದಿದ್ದರೂ ನಾವು ಸಿರಿವಂತರೇ. ಮನಸ್ಸೇ ಬಡವಾಗಿದ್ದರೆ ನಮ್ಮಲ್ಲಿ ಸಂಪತ್ತು ಇದ್ದರೂ ನಾವು ಬಡವರೇ! ಸಂತೃಪ್ತಿಗಿಂತ ಮಿಗಿಲಾದ ಸಂಪತ್ತಿಲ್ಲ. –ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲಿಗೆ ಹುಳಿ ಹಿಂಡಿದರೆ ಮೊಸರು, ಮಣ್ಣಿಗೆ ನೀರು ಹಾಕಿದರೆ ಕೆಸರು.

ನಿಮ್ಮ ಪತ್ರಗಳು

ಶತಾಯುಷಿಗಳಿಗೆ ಜಯವಾಗಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ನೂರು ವರ್ಷಗಳಷ್ಟು ದೀರ್ಘಕಾಲ ಬಾಳಿ ಬದುಕಿದ ಕೆಲವು ವ್ಯಕ್ತಿಗಳು ನಿಧನರಾಗುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ. ಇವರ ಪೈಕಿ, ಮೈಸೂರಿನವರೇ ಆದ ಹಿರಿಯ ಲೇಖಕಿ ಮಂಗಳ ಗೌರಿ, ಎ.ಮೈತ್ರೇಯಿ ಮುಂತಾದವರನ್ನು ಹೆಸರಿಸಬಹುದು.

ಹಿಂದೆಲ್ಲಾ ಕಿರಿಯರಾದವರು ಶುಭ ಕಾರ್ಯಗಳಲ್ಲಿ ಸಭೆ ಸಮಾರಂಭಗಳಲ್ಲಿ ಹಿರಿಯರಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆಯುವ ಸಂದರ್ಭದಲ್ಲಿ "ಶತಮಾನಂ ಭವತಿ ಶತಾಯುಃ ಪುರುಷಃ ಶತೇಂದ್ರಿಯಃ ಆಯುಷ್ಯೇವೇನ್ದ್ರಿಯೇಃ ಪ್ರತಿಷ್ಠತಿ". ಇದರರ್ಥ, ಒಬ್ಬ ವ್ಯಕ್ತಿಯು ನೂರು ವರ್ಷಗಳ ಕಾಲ ಉತ್ತಮ ಆರೋಗ್ಯದಿಂದ, ನೂರು ಇಂದ್ರಿಯಗಳನ್ನು ಪೂರ್ಣವಾಗಿ ಬಳಸಿಕೊಂಡು, ಸಂತೋಷದಿಂದ ಬದುಕಬೇಕು ಎಂಬುದಾಗಿದೆ. ಆದರೆ ಸಾಮಾನ್ಯವಾಗಿ ನೂರು ವರ್ಷಗಳಷ್ಟು ದೀರ್ಘ ಕಾಲ ಬದುಕುವವರ ಸಂಖ್ಯೆ ತೀರಾ ಕಡಿಮೆ ಎನ್ನಬಹುದು. ಆದರೂ ಸಹ, ಶತಾಯುಷಿಗಳನ್ನು ಕಂಡಾಗ ಮನಸ್ಸಿಗೆ ಏನೋ ಒಂದು ರೀತಿಯ ಅವ್ಯಕ್ತ ಆನಂದ ಉಂಟಾಗುತ್ತದೆ. ಭಾರತರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯ ಸೇರಿದಂತೆ ಹಲವಾರು ಪ್ರಸಿದ್ಧ ಪುರುಷರು ಹಾಗೂ ಮಹಿಳೆಯರು ಶತಾಯುಷಿಗಳಾಗಿದ್ದಾರೆ. ಇತ್ತೀಚೆಗಷ್ಟೆ ನಿಧನ ಹೊಂದಿದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ 114 ವರ್ಷಗಳಷ್ಟು ಸುದೀರ್ಘ ಕಾಲ ಬದುಕಿದ್ದರು. ಸಿದ್ದಗಂಗಾ ಮಠಾಧೀಶ ರಾಗಿದ್ದ ಪರಮಪೂಜ್ಯ ಡಾ.ಶಿವಕುಮಾರ ಸ್ವಾಮಿಗಳು ಸಹಾ ಶತಾಯುಷಿ ಗಳಾಗಿದ್ದರು. ಒಟ್ಟಿನಲ್ಲಿ ನೂರು ವರ್ಷಗಳಷ್ಟು ದೀರ್ಘಕಾಲ ಬದುಕಿರುವ ವ್ಯಕ್ತಿಗಳು ಇತಿಹಾಸದ ಉದ್ದಕ್ಕೂ ಕಾಣ ಸಿಗುತ್ತಾರೆ. ಈ ಸಂದರ್ಭದಲ್ಲಿ ಶತಾಯುಷಿಗಳಿಗೆ ಶುಭಕೋರುತ್ತಾ ಅವರು ಇನ್ನೂ ಮತ್ತಷ್ಟು ದೀರ್ಘ ಕಾಲ ಬದುಕಿ ಬಾಳಲಿ ಎಂದು ಹಾರೈಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಇಂತಹ ಪ್ರಾರ್ಥನೆ ಕಾರ್ಯಕ್ರಮ ಏಕೆ?

ಮಾನ್ಯರೆ,

ಆಕಾಶವಾಣಿ ಮೈಸೂರು ನಿಲಯದವರು ಪ್ರತಿ ಶುಕ್ರವಾರ ಮಧ್ಯಾಹ್ನ 2.40 ಕ್ಕೆ ಫಿಬಾ(FEBA) ಇಂಡಿಯಾದವರ ದಾರಿದೀಪ ಎಂಬ ಪ್ರಾಯೋಜಿತ ಕಾರ್ಯಕ್ರಮ ಪ್ರಸಾರ ಮಾಡುತ್ತಾರೆ. ಈ ಕಾರ್ಯಕ್ರಮದಲ್ಲಿ ಕೆಲ ಹಿತವಚನಗಳನ್ನು ಹೇಳಿ, ಕೊನೆಯಲ್ಲಿ ನೀವು, ನಿಮ್ಮ ಬಗ್ಗೆ ಪ್ರಾರ್ಥನೆ ಕೋರುವುದಿದ್ದರೆ, ನಮಗೆ ಕರೆ ಮಾಡಿ ಅಥವಾ ಎಸ್‌ಎಂಎಸ್ ಸಂದೇಶ ಕಳುಹಿಸಿ ಎಂದು ದೂರವಾಣಿ ಸಂಖ್ಯೆಯನ್ನು ನೀಡುತ್ತಾರೆ. ಆದರೆ ಇದು far east broadcasting association (feba) ಆಗಿದ್ದು ಕ್ರಿಶ್ಚಿಯನ್ ರೇಡಿಯೋ ಸಚಿವಾಲಯವಾಗಿದೆ. ನೇರವಾಗಿ ಮತಾಂತರ ಉದ್ದೇಶ ಹೊಂದಿಲ್ಲದಿದ್ದರೂ, ಪ್ರಾರ್ಥನೆಗೆ ಆಹ್ವಾನಿಸಿ ಕ್ರಮೇಣ ಧರ್ಮಕ್ಕೆ ಆಮಿಷ ಒಡ್ಡುವ ಸಂಭವ ಹೆಚ್ಚಾಗಿದೆ. ಅವರು ತಮ್ಮದೇ ರೇಡಿಯೋ ಪ್ರಚಾರ ಕೇಂದ್ರ ಹೊಂದಿದ್ದರೂ ಆಯಾ ಪ್ರದೇಶದ ಸ್ಥಳೀಯ ರೇಡಿಯೋ ಕೇಂದ್ರಕ್ಕೆ ಪ್ರಾಯೋಜಕತ್ವ ನೀಡಿ ಪ್ರಾರ್ಥನೆ ಹೆಸರಿನಲ್ಲಿ ಪರೋಕ್ಷವಾಗಿ ಇದು ನಡೆಯುತ್ತಿದೆ. ಮೈಸೂರು ಆಕಾಶವಾಣಿ ಕೇಂದ್ರದವರಿಗೆ ಅವರು ನೀಡುವ ಪ್ರಾಯೋಜಕತ್ವವೇ ಮುಖ್ಯವಾಗಿದೆಯೋ ಅಥವಾ ಕೇಂದ್ರದಲ್ಲಿ ಇದಕ್ಕೆ ಸಂಬಂಧಿಸಿದವರು ಇದ್ದಾರೋ ಎನ್ನುವ ಅನುಮಾನವಿದೆ. ಈ ಬಗ್ಗೆ ತನಿಖೆಯ ಅವಶ್ಯವಿದೆ. ಕೇಂದ್ರ ಸರ್ಕಾರ ಅಥವಾ ಸಂಬಂಧಪಟ್ಟವರು ಗಮನ ಹರಿಸಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸ್ವಸ್ಥ್ಯ ಸಮಾಜ ನಿರ್ಮಾಣವಾಗಲಿ

ಮಾನ್ಯರೆ,

ರಾಜ್ಯದಲ್ಲಿ ಇನ್ನು ಮುಂದೆ, ಜಾತಿ, ಧರ್ಮ ಭಾಷೆ, ಧಾರ್ಮಿಕ ಮತ್ತು ಜನಾಂಗೀಯ ನಿಂದನೆ, ಲೈಂಗಿಕ ದೃಷ್ಟಿಕೋನ ಮತ್ತು ಜನ್ಮ ಸ್ಥಳದ ವಿಚಾರವಾಗಿ ಬಹಿರಂಗವಾಗಿ ದ್ವೇಷ ಭಾಷಣ ಮಾಡುವವರಿಗೆ ಮೂರು ವರ್ಷಗಳ ಕಾಲ ಜೈಲು ವಾಸ ಸೇರಿದಂತೆ 5 ಸಾವಿರ ದಂಡ ವಿಧಿಸುವ ಹಾಗೂ ಮೂಢನಂಬಿಕೆಯ ಆಚರಣೆ ಹೆಸರಿನಲ್ಲಿ ಸಾಮಾಜಿಕವಾಗಿ ಬಹಿಷ್ಕಾರ ಹಾಕುವ ಪ್ರಕರಣಗಳು ಸಾಬೀತಾದರೆ ಅಂತಹ ವ್ಯಕ್ತಿಗಳಿಗೆ ಮೂರು ವರ್ಷಗಳ ಕಾಲ ಜೈಲು ಮತ್ತು ಒಂದು ಲಕ್ಷ ರೂ. ದಂಡ ವಿಧಿಸುವ ಕಾನೂನನ್ನು ರೂಪಿಸಿದ್ದು, ಈ ವಿಧೇಯಕಗಳನ್ನು ಮುಂದಿನ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ನಿನ್ನೆ ನಡೆದ ಸಚಿವ ಸಂಪುಟ ಸಭೆ ನಂತರ ಮಾಧ್ಯಮಗಳಿಗೆ ತಿಳಿಸಿದ್ದಾರೆ. ರಾಜ್ಯ ಸರ್ಕಾರ ಇಂತಹ ಕಠಿಣ ಕಾನೂನು ತರಲು ನಿರ್ಧರಿಸಿರುವುದು ಸರ್ಕಾರದ ದಿಟ್ಟ ಕ್ರಮವೆಂದೇ ಹೇಳಬೇಕು. ಈ ಕಾನೂನು ಆದಷ್ಟೂ ಬೇಗ ಜಾರಿಗೆ ಬಂದು, ಬಹಿರಂಗವಾಗಿ ದ್ವೇಷ ಭಾಷಣ ಮಾಡುವ ರಾಜಕಾರಣಿಗಳಿಗೆ ಶಿಕ್ಷೆಯಾಗಿ ಸಾಮಾಜಿಕ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬೆಂಬಲ ಬೆಲೆ ಜಾರಿಗೆ ಬರಲಿ

ಮಾನ್ಯರೆ,

ರಾಜ್ಯದಲ್ಲಿ ಎಂಎಸ್‌ಪಿ ಹಾಗೂ ಎಫ್‌ಆರ್‌ಪಿ ಕುರಿತು ನಡೆಯುತ್ತಿರುವ ಗೊಂದಲವು ಸರ್ಕಾರಗಳ ಅಸಮರ್ಥತೆ ಮತ್ತು ಗಂಭೀರ ನಿರ್ಲಕ್ಷ್ಯವನ್ನು ಬಹಿರಂಗಪಡಿಸಿದೆ. ರೈತರು ಬೆಳೆದ ಬೆಳೆಗಳಿಗೆ ನ್ಯಾಯ ಸಮ್ಮತ ಬೆಲೆ ಸಿಗದಿರುವುದು ಹೊಸದೇನಲ್ಲ, ಆದರೆ ಇಂದು ಅವರ ಧ್ವನಿಯನ್ನೇ ಮೌನಗೊಳಿಸುವ ಪ್ರಯತ್ನ ನಡೆಯುತ್ತಿರುವುದು ಆತಂಕಕಾರಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಕೆಸರೆರಚಾಟದಲ್ಲಿ ತೊಡಗಿಕೊಂಡಿರುವುದು ದೌರ್ಭಾಗ್ಯ.

ಮೆಕ್ಕೆಜೋಳ, ಕಬ್ಬು ಮುಂತಾದ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾತಿನ ಮಟ್ಟದಲ್ಲೇ ಉಳಿದಿದೆ. ಮಾರುಕಟ್ಟೆ ದರ ಕುಸಿದರೂ, ರೈತರಿಗೆ ಶಾಶ್ವತ ಪರಿಹಾರ ನೀಡುವ ರಾಜಕೀಯ ಮನಸ್ಸು ಕಾಣಿಸುತ್ತಿಲ್ಲ. ರೈತ ನಾಯಕರು, ಕಾರ್ಖಾನೆ ಮಾಲೀಕರು, ಅಧಿಕಾರಿಗಳು ಎಲ್ಲರೂ ಚರ್ಚಿಸುತ್ತಾರೆ; ಆದರೆ ಈ ಚರ್ಚೆಗಳು ರೈತನ ಜೀವನದಲ್ಲಿ ಬೆಳಕು ತರದೆ, ಕೇವಲ ಸುದ್ದಿ ಶೀರ್ಷಿಕೆಗಳಾಗುಳಿದಿವೆ. ಬೆಂಬಲದ ಭರವಸೆ ಹೊರಡಿಸಿದರೂ, ಜಾರಿಗೆ ಬಾರದ ಕ್ರಮಗಳು ರೈತರನ್ನು ಸಾಲ, ನಷ್ಟ ಮತ್ತು ಮಾನಸಿಕ ಒತ್ತಡದ ಗರಡಿಯೊಳಗೆ ತಳ್ಳುತ್ತಿವೆ. ರೈತರ ಹೋರಾಟ ಪ್ರಶ್ನಿಸುವ ಬದಲು, ಹೋರಾಟಕ್ಕೆ ಕಾರಣವಾದ ಸ್ಥಿತಿಗತಿಗಳನ್ನು ಬದಲಾಯಿಸುವ ನೈತಿಕ ಬದ್ಧತೆ ಸರ್ಕಾರಗಳಿಗೆ ಬೇಕಿದೆ.ರೈತರಿಗೆ ನಿಜವಾದ ಬೆಂಬಲ ನೀಡುವ ದಿನ ಬಂದಾಗಲೇ ನಮ್ಮ ಕೃಷಿ ನೆಲ ಬಲವಾಗುತ್ತದೆ; ಇಲ್ಲವಾದರೆ ಅಭಿವೃದ್ಧಿ ಎಂಬುದು ಕೇವಲ ರಾಜಕೀಯ ನಾಟಕವೇ ಸರಿ.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಬಿಹಾರದಲ್ಲಿ ಎನ್‌ಡಿಎ ಪವಾಡ

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ವಿಜಯ ಸಾಧಿಸಿದೆ. ಮಹಾಘಟಬಂಧನ (ಎಂಜಿಬಿ) ಧೂಳಿಪಟವಾಗಿದೆ. ಉತ್ತಮ ರಾಜಕೀಯ ಸಮೀಕರಣ, ಜಾತೀಯ ಲೆಕ್ಕಾಚಾರ, ಸುಸೂತ್ರ ಸೀಟು ಹಂಚಿಕೆ, ಮೈತ್ರಿಕೂಟದಲ್ಲಿ ಉತ್ತಮ ಸಮನ್ವಯ ಮತದಾರರ ಮನಮುಟ್ಟುವ ಚುನಾವಣಾ ಪ್ರಚಾರ ವಿಷಯಗಳು, ಆರ್‌ಜೆಡಿಯ ಜಂಗಲ್ ರಾಜ್‌ನ ಕರಾಳತೆಗಳನ್ನು ಎನ್‌ಡಿಎ ನಾಯಕರು ಪುನಃಸ್ಮರಣೆ ಮಾಡುವ ಮೂಲಕ ಜನಸಾಮಾನ್ಯರ ವಿಶೇಷವಾಗಿ ಮಹಿಳಾ ಮತದಾರರನ್ನು ಸೆಳೆಯುವ ಮೂಲಕ ಭಾರೀ ವಿಜಯ ಗಳಿಸಿದರು. ನಿತೀಶರ ಸುಶಾಸನ ಬಾಬು ವ್ಯಕ್ತಿತ್ವ ಮೋದಿಯವರ ರಾಷ್ಟ್ರೀಯ ನಾಯಕತ್ವದ ವರ್ಚಸ್ಸು, ಅಮಿತ್ ಶಾರ ಚಾಣಾಕ್ಷ ಕಾರ್ಯತಂತ್ರ. ಬಿಜೆಪಿಯ ಬಲಿಷ್ಠ ಸಂಘಟನಾತ್ಮಕ ವ್ಯವಸ್ಥೆ ಅದ್ಭುತ ಫಲಿತಾಂಶ ನೀಡಿತು.

ಈ ಬಾರಿ ಮತದಾರರು ಜಾತಿಗಳನ್ನು ಮೀರಿ ಎನ್‌ಡಿಎಗೆ ಮತ ನೀಡಿದರು. ಇದು ಚುನಾವಣಾ ಘೋಷಣೆ ಮುನ್ನ ನಿತೀಶರು ಬಿಹಾರದ ಒಂದೂವರೆ ಕೋಟಿಯಷ್ಟು ಮಹಿಳೆಯರ ಖಾತೆಗೆ ಹತ್ತು ಸಾವಿರ ರೂ. ವರ್ಗಾಯಿಸಿದ ಕೇವಲ ಒಂದೇ ಕಾರಣದಿಂದಲ್ಲ. ಸಚ್ಚಾರಿತ್ರ್ಯ, ಸುಶಾಸನ, ಬಿಹಾರದ ಅಭಿವೃದ್ಧಿ ಬಗೆಗಿನ ಕಲ್ಪನೆ, ತುಡಿತಗಳಿಂದಾಗಿ ನಿತೀಶರು ಪಕ್ಷ ಬದಲಿಸುವ ಚಾಳಿಯ ನಡುವೆಯೂ ಬಿಹಾರದಲ್ಲಿ ವರ್ಚಸ್ವಿ ನಾಯಕರೆನಿಸಿಕೊಂಡಿದ್ದಾರೆ. ಇವರಿಂದಾಗಿ ಆಡಳಿತದಲ್ಲಿ ಕಂಡು ಬಂದ ನಿರಂತರ ಸ್ಥಿರತೆ, ಸುಧಾರಣೆಗಳಿಂದಾಗಿ ಮತದಾರರು ಅಭಿವೃದ್ಧಿ ಕಾರ್ಯಗಳಿಗೆ ಇನ್ನಷ್ಟು ವೇಗ ದೊರೆಯಬೇಕೆಂಬ ಉದ್ದೇಶದಿಂದ ಜನಾದೇಶ ನೀಡಿದ್ದಾರೆ.

ಎಂಜಿಬಿ ಸೋಲಿಗೆ ಕಾರಣಗಳು: ಚುನಾವಣಾ ಘೋಷಣೆಯಾಗುವ ಮುನ್ನ ಎಂಜಿಬಿ ಪಾಳೆಯದಲ್ಲಿ ಉತ್ಸಾಹದ ವಾತಾವರಣವಿತ್ತು. ಗೆಲ್ಲುವ ವಿಶ್ವಾಸವಿತ್ತು. ನಿತೀಶರಿಗೆ ವಯಸ್ಸಾಗಿದೆ, ಅವರ ಆರೋಗ್ಯ ಸರಿಯಿಲ್ಲ. ಇಪ್ಪತ್ತು ವರ್ಷಗಳ ನಿತೀಶರ ಆಡಳಿತದ ಬಗ್ಗೆ ಜನತೆ ಭ್ರಮನಿರಸನಗೊಂಡಿದ್ದಾರೆ. ವಿರೋಧಿ ಅಲೆ ಬಲವಾಗಿದೆ. ಪ್ರಧಾನಿ ಮೋದಿಯವರ ವರ್ಚಸ್ಸು ಹಿಂದಿನಂತಿಲ್ಲ. ಆದ್ದರಿಂದ ಈ ಬಾರಿ ತನ್ನ ಮತ್ತು ರಾಹುಲ್ ಗಾಂಧಿ ನೇತೃತ್ವದ ಉತ್ಸಾಹಿ ಯುವ ನಾಯಕತ್ವಕ್ಕೆ ಬಿಹಾರಿಗಳು ಜನಾದೇಶ ನೀಡುತ್ತಾರೆ ಎಂದು ತೇಜಸ್ವಿ ಯಾದವ್ ಅತೀ ವಿಶ್ವಾಸದಲ್ಲಿದ್ದರು. ತೇಜಸ್ವಿಯಾದವ್ ಮತ್ತು ರಾಹುಲ್ ಗಾಂಧಿಯವರು ಒಂದೇ ವಾಹನದಲ್ಲಿ, ಒಂದೇ ಬೈಕ್‌ನಲ್ಲಿ ಫೆವಿಕಾಲ್ ಜೋಡಿಯಂತೆ ಮತಗಳ್ಳತನ, ಮತಾಧಿಕಾರದ ಹೆಸರಿನಲ್ಲಿ ರಾಜ್ಯಾದ್ಯಂತ ಯಾತ್ರೆಗಳನ್ನು ನಡೆಸಿದರು. ಚುನಾವಣೆ ಘೋಷಣೆಯಾಗುತ್ತಿದ್ದಂತೆ ರಾಹುಲ್ ಗಾಂಧಿ ಬಿಹಾರದಿಂದ ಮಾಯವಾದರು. ಎಂಜಿಬಿ ಮಂಕಾಯಿತು. ಸೀಟು ಹಂಚಿಕೆ ವಿಚಾರದಲ್ಲಿ ಎಂಜಿಬಿ ಗೊಂದಲದ ಗೂಡಾಯಿತು. ಆರಂಭದಲ್ಲಿ ತೇಜಸ್ವಿ ಯಾದವ್ ಮುಖ್ಯಮಂತ್ರಿ ಅಭ್ಯರ್ಥಿಯಾಗುವುದಕ್ಕೆ ರಾಹುಲ್ ಗಾಂಧಿ ಸಮ್ಮತಿ ನೀಡಲಿಲ್ಲ. ದೇಶದ ವಿರೋಧ ಪಕ್ಷದ ನಾಯಕನಾಗಿರುವ ತನ್ನ ಪಕ್ಷಕ್ಕೆ ಕೇಳಿದಷ್ಟು ಕ್ಷೇತ್ರ ನೀಡಬೇಕೆಂದು ರಾಹುಲ್ ಗಾಂಧಿ ಅಹಂಕಾರ ತೋರಿದರು. ಇದಕ್ಕೆ ಪ್ರತಿಯಾಗಿ ತೇಜಸ್ವಿಯಾದವ್ ಬಿಹಾರದಲ್ಲಿ ನಾನೇ ರಾಜ, ನನ್ನ ನಾಯಕತ್ವಕ್ಕೆ ಒಪ್ಪುವವರೊಂದಿಗೆ ಸೀಟು ಹಂಚಿಕೆ, ಇಲ್ಲದಿದ್ದರೆ ಏಕಾಂಗಿಯಾಗಿ ಆರ್‌ಜೆಡಿ ಚುನಾವಣಾ ಕಣಕ್ಕೆ ಇಳಿಯುವುದಾಗಿ ಎಚ್ಚರಿಸಿದರು. ಕೊನೆ ಕ್ಷಣದಲ್ಲಿ ಕಾಂಗ್ರೆಸ್ ನಾಯಕ ಅಶೋಕ್ ಗೆಹ್ಲೋಟ್ ಪಾಟ್ನಾಗೆ ಆಗಮಿಸಿ ಸಂಧಾನ ಸೂತ್ರ ರಚಿಸಿದರು. ಆದರೆ ಒಡೆದ ಗಾಜು ಜೋಡಿಸಿದರೂ ಗೀರುಗಳು ಎದ್ದು ಕಾಣುವಂತೆ ಎಂಜಿಬಿಯಲ್ಲಿ ಅಪನಂಬಿಕೆ ಎದ್ದು ಕಾಣುತ್ತಿತ್ತು. ಈ ಬಾರಿ ತೇಜಸ್ವಿ ಯಾದವರ ಮುಸ್ಲಿಂ– ಯಾದವರ (ಎಂವೈ) ಸಮೀಕರಣ ಸಂಪೂರ್ಣ ವಿಫಲಗೊಂಡಿತು. ಈ ಸಮೀಕರಣದ ಭಯದಿಂದ ಬಿಹಾರದ ಇತರೇ ಜಾತಿಯ ಮತದಾರರು ಎನ್‌ಡಿಎ ಪರ ಮತಚಲಾಯಿಸಿದರು. ತೇಜಸ್ವಿಯವರು ಚುನಾವಣಾ ಸಭೆಯಿಂದ ನಿರ್ಗಮಿಸುತ್ತಿದ್ದಂತೆ ಆರ್‌ಜೆಡಿ ಕಾರ್ಯಕರ್ತರು, ಚೇಲಾಗಳು ಕಟ್ಟಾದಿಂದ (ಪಿಸ್ತೂಲು) ಗಾಳಿಯಲ್ಲಿ ಗುಂಡು ಹಾರಿಸುತ್ತಾ ಎಂವೈ ಹೊರತುಪಡಿಸಿ ಇತರ ಜಾತಿಯವರಿಗೆ ಬುದ್ಧಿ ಕಲಿಸಲಾಗುವುದೆಂಬ ಎಚ್ಚರಿಕೆ ನೀಡುತ್ತಿದ್ದುದು ಎಂಜಿಬಿಯ ಸೋಲನ್ನು ನಿಶ್ಚಿತಗೊಳಿಸಿತು. ಸೀಟು ಹಂಚಿಕೆಯ ವಿಚಾರದಲ್ಲೂ ಭೂಪಿಂದರ್ ಹೂಡಾ ಹರ್ಯಾಣದಲ್ಲಿ ಮಾಡಿದ ತಪ್ಪನ್ನೇ ತೇಜಸ್ವಿ ಯಾದವ್ ಬಿಹಾರದಲ್ಲಿ ಮಾಡಿದರು. ಹೂಡಾ ತನ್ನ ಜಾಟ್ ಸಮುದಾಯದ 38 ಮಂದಿಗೆ ಟಿಕೆಟ್ ನೀಡಿದರೆ, ತೇಜಸ್ವಿ ಯಾದವ್ 53 ಯಾದವ್‌ರಿಗೆ ಟಿಕೆಟ್ ನೀಡಿದ್ದು ಪಕ್ಷದ ದಯನೀಯ ಸೋಲಿಗೆ ಕಾರಣವಾಯಿತು. ಬಿಹಾರಿಗಳು ಭಕ್ತಿ, ಶ್ರದ್ಧೆ ಸಂಭ್ರಮದೊಂದಿಗೆ ಆಚರಿಸುವ ಛತ್ ಪೂಜೆಗೂ ತೇಜಸ್ವಿ ಯಾದವ್ ಅಪಮಾನಿಸಿದ್ದು, ಬಿಹಾರಿಗಳನ್ನು ಸಹಜವಾಗಿ ಕೆರಳಿಸಿತ್ತು. ಹಿಂದೂ ದೇವ–ದೇವತೆಗಳನ್ನು ಪರಸ್ಪರ ಸ್ಪರ್ಧೆಗೆ ಬಿದ್ದವರಂತೆ ತೇಜಸ್ವಿ ಯಾದವ್, ರಾಹುಲ್ ಗಾಂಧಿ ಅಪಹಾಸ್ಯ ಮಾಡುತ್ತಿರುವುದನ್ನು ಬಿಹಾರಿಗಳಿಗೆ ಸಹಿಸಲಾಗಲಿಲ್ಲ. ಪ್ರಧಾನಿ ಮೋದಿಯವರನ್ನು ಅತ್ಯಂತ ಕೆಟ್ಟದಾಗಿ ರಾಹುಲ್ ಗಾಂಧಿಯವರು ಟೀಕಿಸುವುದನ್ನು ಬಿಹಾರಿಗಳು ಒಪ್ಪಲಿಲ್ಲ. ಬಿಹಾರಿಗಳು ತಾವು ಅನಕ್ಷರಸ್ಥರಾದರೂ ಅಸಂಸ್ಕೃತರಲ್ಲ ಎಂಬುದನ್ನು ತೋರಿಸಿದರು. ಮಹಾಘಟಬಂಧನದ ಚುನಾವಣಾ ಪ್ರಣಾಳಿಕೆಯು ಬಿಹಾರ ಮತದಾರರ ಮೇಲೆ ಪರಿಣಾಮ ಬೀರಲಿಲ್ಲ. ಎಂಜಿಬಿಯು ಬಿಹಾರದ ಪ್ರತಿ ಕುಟುಂಬದ ಒಬ್ಬ ಸದಸ್ಯರಿಗೆ ಸರಕಾರಿ ಉದ್ಯೋಗ ನೀಡುವುದಾಗಿ ಘೋಷಿಸಿತು. ಅಮಿತ್ ಶಾ ಪ್ರಕಾರ ಬಿಹಾರದಲ್ಲಿ 2.6 ಕೋಟಿ ಪರಿವಾರಗಳಿದ್ದು, ಸಿ ಮತ್ತು ಡಿ ಗ್ರೇಡ್ ನೌಕರರಿಗೂ ಕನಿಷ್ಠ ವೇತನ ರೂ. 39,000/– ಆಗುತ್ತದೆ. ಅದಕ್ಕಾಗಿ ಪ್ರತಿವರ್ಷ 12 ಲಕ್ಷ ಕೋಟಿ ರೂ. ಬೇಕಾಗುತ್ತದೆ. ಬಿಹಾರದ ವಾರ್ಷಿಕ ಬಜೆಟ್‌ನ ಗಾತ್ರವೇ ಕೇವಲ 3.25 ಲಕ್ಷ ಕೋಟಿ ರೂ. ನಷ್ಟಿದೆ ಎಂದು ತಿಳಿಸಿದ್ದರು. ಆದ್ದರಿಂದ ಬಿಹಾರಿಗಳು ಇದೊಂದು ಬೋಗಸ್, ಈಡೇರಿಸಲಾಗದ ಆಶ್ವಾಸನೆ ಎಂದು ಅರ್ಥ ಮಾಡಿಕೊಂಡಿದ್ದರು. ನಿತೀಶರು ಜಾರಿಗೆ ತಂದ ಪಾನ ನಿಷೇಧಕ್ಕೆ ಸಂಬಂಧಿಸಿದಂತೆ ಶೇಂದಿ (ತಾರಿ) ಮೇಲಿನ ನಿಷೇಧ ತೆಗೆದು ಹಾಕುವುದಾಗಿ ತೇಜಸ್ವಿ ನೀಡಿದ ಭರವಸೆ ಸಹಜವಾಗಿ ಗ್ರಾಮೀಣ ಮಹಿಳಾ ಮತದಾರರನ್ನು ವಿಶೇಷವಾಗಿ ಕೆರಳಿಸಿತು. ಎಲ್ಲಾ ಗುತ್ತಿಗೆ ಸರಕಾರಿ ನೌಕರರು, ಜೀವಿಕಾ ದೀದಿಗಳಿಗೆ ಖಾಯಂ ಮಾಡಿ, ದೀದಿಗಳಿಗೆ ಮಾಸಿಕ ರೂ. 30,000 ವೇತನ ನೀಡಲಾಗುವುದೆಂಬ ಆಶ್ವಾಸನೆ ಮತದಾರರ ಮೇಲೆ ಪರಿಣಾಮ ಬೀರಲಿಲ್ಲ. ಮಹಾಘಟಬಂಧನ್‌ನ ಚುನಾವಣಾ ಪ್ರಚಾರಗಳು ಪರಿಣಾಮಕಾರಿಯಾಗಿರಲಿಲ್ಲ. ಇಪ್ಪತ್ತು ವರ್ಷಗಳ ಕಾಲ ಆಡಳಿತ ನಡೆಸಿದ ನಿತೀಶರ ಆಡಳಿತ ವೈಫಲ್ಯಗಳ ಬಗೆಯಾಗಲಿ, ಬಿಹಾರದ ಅಭಿವೃದ್ಧಿ ಬಗೆಯಾಗಲಿ ಯಾವುದೇ ವಿಚಾರಗಳನ್ನು ಜನರಿಗೆ ಮನವರಿಕೆ ಮಾಡುವಲ್ಲಿ ಎಂಜಿಬಿ ಸಂಪೂರ್ಣ ವಿಫಲವಾಯಿತು. ಚುನಾವಣಾ ಪ್ರಚಾರಗಳು ಕೇವಲ ಪ್ರಧಾನಿ ಮೋದಿಯವರನ್ನು ಕೆಟ್ಟದಾಗಿ ಟೀಕಿಸುವುದಕ್ಕೆ ಸೀಮಿತವಾಗಿತ್ತು. ರಾಜಕಾರಣದಲ್ಲಿ ನಕಾರಾತ್ಮಕ ರಾಜಕೀಯ ಕಾರ್ಯ ತಂತ್ರಗಳು, ಯೋಚನೆಗಳು, ವಿಚಾರಗಳು, ಟೀಕೆಗಳು ಕೇವಲ ವಿನಾಶಕಾರಿ ಫಲಿತಾಂಶ ನೀಡುವುದು ಎಂಬುದನ್ನು ಬಿಹಾರ ಚುನಾವಣೆ ತೋರಿಸಿದೆ.

ಎನ್‌ಡಿಎ ವಿಜಯಕ್ಕೆ ಪೂರಕವಾದ ಅಂಶಗಳು: ಬಿಹಾರ ವಿಧಾನಸಭೆಗೆ ಚುನಾವಣೆ ಘೋಷಣೆಯ ಒಂದೆರಡು ತಿಂಗಳ ಮೊದಲು ಎನ್‌ಡಿಎ ಮೈತ್ರಿಕೂಟದಲ್ಲಿ ಎಲ್ಲವೂ ಸರಿಯಾಗಿರಲಿಲ್ಲ. ಪಕ್ಷಗಳ ಕಾರ್ಯಕರ್ತರಲ್ಲಿ ಅಸಮಾಧಾನ, ಮೈತ್ರಿ ಪಕ್ಷಗಳಲ್ಲಿ ಸಮನ್ವಯವಿರಲಿಲ್ಲ. ಇದನ್ನು ಗಮನಿಸಿದ ಕೇಂದ್ರ ಗೃಹ ಸಚಿವರಾದ ಅಮಿತ್ ಶಾರವರು ಬಿಹಾರದ ಮೇಲೆ ನಿರಂತರ ಗಮನಹರಿಸಿದರು. ಎಲ್‌ಜೆಪಿಯ ಚಿರಾಗ್ ಪಾಸ್ವಾನ್‌ರವರು ಎನ್‌ಡಿಎಯಲ್ಲಿ ಉಳಿಯುವಂತೆ ಮಾಡಿದರು. ಉಪೇಂದ್ರ ಕುಶ್ವಹಾ ಹೆಚ್‌ಎಎಂನ ಜಿತನ್‌ರಾಂ ಮಾಂಝಿಯವರು ಗುಟುರು ಹಾಕುವುದನ್ನು ನಿಲ್ಲಿಸಿದರು. ಪಕ್ಷದ ಕಾರ್ಯಕರ್ತರಲ್ಲಿದ್ದ ಅಸಮಾಧಾನ ಶಮನಗೊಳಿಸಿ, ಮೈತ್ರಿಕೂಟದ ಪಕ್ಷಗಳೊಂದಿಗೆ ಸಮನ್ವಯ ಸಾಧಿಸಿ ಎನ್‌ಡಿಎಯನ್ನು ಚುನಾವಣೆಗೆ ಸಜ್ಜುಗೊಳಿಸಿದರು.

ನಿತೀಶಕುಮಾರರ ಇಪ್ಪತ್ತು ವರ್ಷಗಳ ಆಡಳಿತ ಎನ್‌ಡಿಎ ಮತ್ತೆ ಅಧಿಕಾರಕ್ಕೇರಲು ಕಾರಣೀಭೂತವಾಯಿತು. ಲಾಲೂ ಆಡಳಿತದಲ್ಲಿ ಮರೀಚಿಕೆಯಾಗಿದ್ದ ಉತ್ತಮ ರಸ್ತೆಗಳಂತಹ ಮೂಲ ಸೌಕರ್ಯಗಳು ನಿತೀಶರ ಆಡಳಿತದಲ್ಲಿ ಜನರು ಕಾಣುವಂತಾಯಿತು. ಲಾಲೂ ಆಡಳಿತದಲ್ಲಿ ಕಾಣಬರುತ್ತಿದ್ದ ರಸ್ತೆ ಕುರಿತಾದ ವ್ಯಂಗ್ಯ ಚಿತ್ರಗಳು ಮಾಯವಾದವು. ಲಾಲೂ ಕಾಲದಲ್ಲಿದ್ದ ಭಯಾನಕ ಜಂಗಲ್‌ರಾಜ್ ಅಂತ್ಯಗೊಂಡು ಕಾನೂನು, ಸುವ್ಯವಸ್ಥೆ ಹಳಿಗೆ ಬಂದವು. ವಿದ್ಯುತ್, ಕುಡಿಯುವ ನೀರು, ಹೆಣ್ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆಗಳು ಜನಸಾಮಾನ್ಯರಿಗೆ ತಲುಪಿದವು. ಪಕ್ಷ ಬದಲಿಸುವ ನಿತೀಶರ ಪದೇ ಪದೆ ಪಕ್ಷಕ್ಕೆ ಹಾರುವ ಧೋರಣೆಯಿಂದ ಬಿಹಾರದ ಅಭಿವೃದ್ಧಿ ಕುಂಠಿತಗೊಳ್ಳಲಿಲ್ಲ. ಆದ್ದರಿಂದ ಜನರು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ವಿಶೇಷವಾಗಿ ನಿತೀಶರ ಮಹಿಳಾ ಕೇಂದ್ರಿತ ಯೋಜನೆಗಳ ಪ್ರಯೋಜನ ರಾಜ್ಯದ ಮಹಿಳೆಯರ ಒಂದು ತಲೆಮಾರಿಗೆ ಲಭಿಸಿದೆ.

ನಿತೀಶ್‌ಕುಮಾರ್‌ರವರು 2005ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಹೆಣ್ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜಾರಿಗೊಳಿಸಿದ ಬೈಸಿಕಲ್ ಯೋಜನೆಯ ಫಲಾನುಭವಿ ಹೆಣ್ಮಕ್ಕಳು ಪ್ರಸ್ತುತ ನಿತೀಶರನ್ನು ಸಮರ್ಥಿಸುವ ಪ್ರಬುದ್ಧ ವಿದ್ಯಾವಂತ ಮತದಾರರಾಗಿದ್ದಾರೆ. ಪಾನ ನಿಷೇಧ ಗ್ರಾಮೀಣ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದರೊಂದಿಗೆ ಬದುಕಿಗೆ ನೆಮ್ಮದಿ ನೀಡಿದ ಪಾನ ನಿಷೇಧ ಇನ್ನೂ ಕೆಲವೆಡೆ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲವೆಂಬ ದೂರು ಇದೆ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಕುಡಿತದಿಂದ ಆಗುತ್ತಿದ್ದ ಅಸಭ್ಯ ವರ್ತನೆಗಳು, ಅಪರಾಧಗಳು ಕಾನೂನಿನ ಭಯದಿಂದ ಬಹುಪಾಲು ಕಡಿಮೆಯಾಗಿದೆ. ಮಹಿಳೆಯರಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ.35 ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಶೇ.50ರಷ್ಟು ಮೀಸಲಾತಿಯಂತಹ ಪ್ರಗತಿಪರ ಕ್ರಾಂತಿಕಾರಿ ನೀತಿಗಳನ್ನು ಜಾರಿಗೊಳಿಸಿದರು. ರಾಜ್ಯದ 11 ಲಕ್ಷಕ್ಕೂ ಹೆಚ್ಚು ಸ್ವ–ಸಹಾಯ ಗುಂಪುಗಳಲ್ಲಿ ನೋಂದಾಯಿಸಲ್ಪಟ್ಟ ಜೀವಿಕಾ ದೀದಿಗಳು ಎನ್‌ಡಿಎ ಸರಕಾರದ ಕಟ್ಟಾ ಬೆಂಬಲಿಗರಾಗಿರುವುದು ಉತ್ತಮ ಫಲಿತಾಂಶ ನೀಡಿತು.

ಚುನಾವಣಾ ಘೋಷಣೆಗೆ ಮುನ್ನ ನಿತೀಶ್ ಸರಕಾರವು ರಾಜ್ಯದ ಗ್ರಾಮೀಣ ಮಹಿಳೆಯರು ಆಡು ಭಾಷೆಯಲ್ಲಿ ಹೇಳಿದಂತೆ 'ದಸ್ ಹಜಾರಿಯಾ' ಅಂದರೆ ರೂ.10,000ವನ್ನು ರಾಜ್ಯದ 1.5 ಕೋಟಿ ಮಹಿಳೆಯರ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದು ಎನ್‌ಡಿಎ ವಿಜಯವನ್ನು ಖಚಿತಪಡಿಸಿತು. ಪುರುಷ ಮತದಾರರನ್ನು ಮೀರಿ ಮಹಿಳೆಯರು ಮತದಾನ ಮಾಡಿದರು. 2020 ರಲ್ಲಿ ಶೇ.59.69ರಷ್ಟು ಮಹಿಳೆಯರು ಮತದಾನ ಮಾಡಿದ್ದರೆ, ಈ ಬಾರಿ ದಾಖಲೆ ಶೇ.71ರಷ್ಟು ಮಹಿಳೆಯರು ಮತ ಚಲಾಯಿಸಿದರು. 2020ರಲ್ಲಿ ಶೇ.54.45 ರಷ್ಟು ಪುರುಷರು ಮತಚಲಾಯಿಸಿದರೆ ಈ ಬಾರಿ ಅದು ಶೇ.62.8ರಷ್ಟಿತ್ತು.



ನರೇಂದ್ರ ಮೋದಿ · ಅಮಿತ್ ಶಾ · ನಿತೀಶ್ ಕುಮಾರ್

> "ಚುನಾವಣಾ ಘೋಷಣೆಗೆ ಮುನ್ನ ನಿತೀಶ್ ಸರಕಾರವು ರಾಜ್ಯದ ಗ್ರಾಮೀಣ ಮಹಿಳೆಯರು ಆಡು ಭಾಷೆಯಲ್ಲಿ ಹೇಳಿದಂತೆ 'ದಸ್ ಹಜಾರಿಯಾ' ಅಂದರೆ ರೂ.10,000 ವನ್ನು ರಾಜ್ಯದ 1.5 ಕೋಟಿ ಮಹಿಳೆಯರ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದು ಎನ್‌ಡಿಎ ವಿಜಯವನ್ನು ಖಚಿತಪಡಿಸಿತು. ಪುರುಷ ಮತದಾರರನ್ನು ಮೀರಿ ಮಹಿಳೆಯರು ಮತದಾನ ಮಾಡಿದರು. 2020ರಲ್ಲಿ ಶೇ.59.69ರಷ್ಟು ಮಹಿಳೆಯರು ಮತದಾನ ಮಾಡಿದ್ದರೆ, ಈ ಬಾರಿ ದಾಖಲೆ ಶೇ.71ರಷ್ಟು ಮಹಿಳೆಯರು ಮತಚಲಾಯಿಸಿದರು. 2020ರಲ್ಲಿ ಶೇ.54.45ರಷ್ಟು ಪುರುಷರು ಮತಚಲಾಯಿಸಿದರೆ ಈ ಬಾರಿ ಅದು ಶೇ.62.8ರಷ್ಟಿತ್ತು.

ಪರಿಶಿಷ್ಟ ಜಾತಿ, ಪಂಗಡದವರ ಮೇಲೆ ದೌರ್ಜನ್ಯ ನಡೆದರೆ ತಕ್ಷಣ ಕಾನೂನು ರಕ್ಷಣೆ ನೀಡಿ

- ಪೊಲೀಸರಿಗೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಸದಸ್ಯ ವಡೆಪಲ್ಲಿ ರಾಮಚಂದರ್ ಸೂಚನೆ
- ಮೈಸೂರು ಜಿಲ್ಲಾಡಳಿತದಿಂದ ಈ ವರ್ಗದ ಜನರ ಶ್ರೇಯೋಭಿವೃದ್ಧಿಗೆ ಕೈಗೊಂಡ ಕ್ರಮಗಳ ಮಾಹಿತಿ



ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಸದಸ್ಯ ವಡೆಪಲ್ಲಿ ರಾಮಚಂದರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು, ಡಿ.5(ಎಂಕೆ)– ಪರಿಶಿಷ್ಟ ಜಾತಿ ಜನರ ಮೇಲೆ ದೌರ್ಜನ್ಯ ನಡೆದಲ್ಲಿ ಕೂಡಲೇ ಎಫ್‌ಐಆರ್ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಲ್ಲದೆ ಭದ್ರತೆ ಒದಗಿಸುವಂತೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಸದಸ್ಯ ವಡೆಪಲ್ಲಿ ರಾಮಚಂದರ್ ಪೊಲೀಸರಿಗೆ ಸೂಚನೆ ನೀಡಿದರು.

ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪರಿಶಿಷ್ಟ ಜಾತಿ, ಪಂಗಡದ ಜನರು ಹಾಗೂ ಎಲ್ಲಾ ವರ್ಗದವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮುದ್ರಾ ಯೋಜನೆ, ಎಂಎಸ್‌ಎಂಇ ಯೋಜನೆ, ಶೈಕ್ಷಣಿಕ ಶಾಲಾ ಯೋಜನೆಯಂತಹ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಅರ್ಹ ಫಲಾನುಭವಿಗಳಿಗೆ ಯೋಜನೆಗಳನ್ನು ತಲುಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬ್ಯಾಂಕುಗಳು ಸಾಲ ನೀಡುವಲ್ಲಿ ಸರಿಯಾಗಿ ಸ್ಪಂದಿಸುವುದಿಲ್ಲ ಎಂದು ದೂರುಗಳು ಬರುತ್ತಿವೆ. ಆಗಾಗಿ ಈ ಬಗ್ಗೆ ಕ್ರಮ ವಹಿಸಿ, ದೂರುಗಳಿಗೆ ಆಸ್ಪದ ನೀಡದಂತೆ ಕಾರ್ಯ ನಿರ್ವಹಿಸಬೇಕು ಎಂದು ಲೀಡ್ ಬ್ಯಾಂಕ್ ಮ್ಯಾನೇಜರ್‌ಗಳಿಗೆ ತಿಳಿಸಿದರು.

ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ನಿರ್ದೇಶಕ ಸುನಿಲ್ ಕುಮಾರ್ ಬಾಬು ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಕಳೆದ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.69 ರಷ್ಟು ಫಲಿತಾಂಶ ಬಂದಿದ್ದು, ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಫಲಿತಾಂಶ ಕಡಿಮೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಎಸ್‌ಎಸ್‌ಎಲ್‌ಸಿಯಲ್ಲಿ ಎಸ್‌ಸಿ ಹಾಗೂ ಎಸ್‌ಟಿ ವಿದ್ಯಾರ್ಥಿಗಳ ಉತ್ತೀರ್ಣ ಮಟ್ಟವನ್ನು ಹೆಚ್ಚಳ ಮಾಡಲು ಕೈಗೊಂಡಿರುವ ಕ್ರಮಗಳ ಕುರಿತು ಡಿಡಿಪಿಐ ಅವರಿಂದ ಮಾಹಿತಿ ಪಡೆದುಕೊಂಡರಲ್ಲದೆ ವಿದ್ಯಾರ್ಥಿಗಳಿಗೆ ಕಠಿಣವಾದ ವಿಷಯಗಳನ್ನು ಸುಲಭವಾಗಿ ವಿವಿಧ ಕ್ರಮಗಳ ಮೂಲಕ ಅರ್ಥ ಮಾಡಿಸಬೇಕು ಎಂದು ಸಲಹೆ ನೀಡಿದರು.

ಟ್ಯೂಷನ್ ಫೀಸ್ ದೂರು: ಕೆಲವು ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಂದ ಟ್ಯೂಷನ್ ಫೀಸ್ ಕಲೆಕ್ಟ್ ಮಾಡುತ್ತಿರುವ ಬಗ್ಗೆ ಹಲವು ದೂರುಗಳು ಬರುತ್ತಿವೆ. ಈ ಬಗ್ಗೆ ಪರಿಶೀಲನೆ ನಡೆಸಿ, ಕ್ರಮವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಿಗೆ ತಾಕೀತು ಮಾಡಿದರು.

ನಿವೇಶನ ಹಂಚಲು ಕ್ರಮ: ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಜಿಲ್ಲೆಯಲ್ಲಿ ಎಸ್‌ಸಿ ಹಾಗೂ ಎಸ್‌ಟಿ ನಿವೇಶನ ರಹಿತರ ಸರ್ವೇ ಮಾಡಲಾಗಿದ್ದು, ಇವರಿಗೆ ಹಂತ ಹಂತವಾಗಿ ನಿವೇಶನ ನೀಡಲು ಕ್ರಮ ವಹಿಸಲಾಗುತ್ತಿದೆ. ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ನಿವೇಶನ ರಹಿತರು ಹೆಚ್ಚು ಇದ್ದಾರೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಮಾತನಾಡಿ, ಜಿಲ್ಲೆಯಲ್ಲಿ 2011ರ ಜನಗಣತಿಯ ಪ್ರಕಾರ 30,01,127 ಜನಸಂಖ್ಯೆ ಇದ್ದು, ಇದರಲ್ಲಿ 5,36,643 ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ. ಜಿಲ್ಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ಹಾಗೂ ಕೊಲೆಯಾದ ಪರಿಶಿಷ್ಟ ಜಾತಿಯ ವ್ಯಕ್ತಿಯ ಕುಟುಂಬದ ಅವಲಂಭಿತರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಹಾಗೂ ಕೆಲವರಿಗೆ ಸರ್ಕಾರಿ ಉದ್ಯೋಗ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕಮಿಟಿ ಸಭೆ: ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶಿಷ್ಟ ಜಾತಿಗಳ ಮಾನಿಟರಿಂಗ್ ಕಮಿಟಿ ಸಮಿತಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತಿದೆ. ಜಿಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 45 ಮೆಟ್ರಿಕ್ ಪೂರ್ವ ಹಾಗೂ 36 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿವೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಸೂರಜ್ ಕುಮಾರ್ ಯಾದವ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ ಪಿ.ಶಿವರಾಜು ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮನುಷ್ಯನ ಹುಟ್ಟಿನಿಂದಲೇ ಆತ ಏನಾಗಬೇಕು ಎಂದು ಜಾತಿ ನಿರ್ಧರಿಸುತ್ತದೆ

● ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ವಿಷಾದ ● ಸಂವಿಧಾನದಿಂದ ಈಗ ಎಲ್ಲರಿಗೂ ಸೌಲಭ್ಯ ಲಭಿಸುತ್ತಿದೆ

ಮೈಸೂರು, ಡಿ.5(ವಿವಿಹೆಚ್)– ಅತ್ಯಂತ ಹೀನಾಯವಾಗಿ ಶೋಷಣೆಗೆ ದೂಡುವ ವ್ಯವಸ್ಥೆ ಎಂದರೆ ಅದು ಜಾತಿ ವ್ಯವಸ್ಥೆ. ಭಾರತೀಯ ಸಮಾಜಕ್ಕೆ ಇದು ದೊಡ್ಡ ಶಾಪವಾಗಿದೆ. ಇದನ್ನು ಹೊಗಲಾಡಿಸಲು ನಾವು ಕನಕದಾಸರು, ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ನಗರದ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನಕ ನೌಕರರ ಸಂಘ ವಿದ್ಯಾರ್ಥಿಗಳು ಮತ್ತು ಸಂಶೋಧಕರ ವತಿಯಿಂದ ಶುಕ್ರವಾರ ಏರ್ಪಡಿಸಿದ್ದ ಕನಕ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರು ವಿವಿಯಲ್ಲಿ ನಡೆದ ಕನಕ ಜಯಂತಿ ಕಾರ್ಯಕ್ರಮವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ಜಾತಿ ನಾವು ಹುಟ್ಟಿದ ನಂತರ ಸಾಯುವವರೆಗೂ ನಮ್ಮ ಕೊರಳಿಗೆ ಜೋತು ಬೀಳಲಿದೆ. ಬಹುಶಃ ಧರ್ಮವನ್ನು ಬದಲಾಯಿಸಬಹುದು. ಆದರೆ, ಜಾತಿ ಬದಲಾಯಿಸಲು ಸಾಧ್ಯವಿಲ್ಲ. ಹುಟ್ಟಿನಿಂದಲೇ ಯಾರು ಯಾವುದನ್ನು ಪಡೆಯಬೇಕು, ಆತನ ಅರ್ಹತೆಗಳೇನು ಎಂಬುದು ನಿರ್ಧಾರವಾಗಲಿದೆ. ಇದು ಸಮಾಜಕ್ಕೆ ಕಂಟಕ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹುಟ್ಟಿನಿಂದಲೇ ಯಾರು ಯಾವ ಅಧಿಕಾರ, ವಿದ್ಯೆ, ಅಂತಸ್ತು ಗಳಿಸಬೇಕು ಎನ್ನುವುದನ್ನು ಜಾತಿ ವ್ಯವಸ್ಥೆ ನಿರ್ಧಾರ ಮಾಡಲಿದೆ. ಮೇಲ್ವರ್ಗದಲ್ಲಿ ಹುಟ್ಟಿದವರು ಮಾತ್ರ ಪ್ರತಿಭಾವಂತರು, ತಳ ಸಮುದಾಯದವರು ಯೋಗ್ಯತೆ ಇಲ್ಲದವರು ಎಂದು ಅದು ನಿರ್ಧಾರ ಮಾಡಲಿದೆ. ಸ್ವತಃ ಕನಕದಾಸರೇ ಜಾತಿ ಶೋಷಣೆ ಅನುಭವಿಸಿ ಕೊನೆಗೆ ಅದರ ವಿರುದ್ಧ ಧ್ವನಿ ಎತ್ತಿದರು. ಜಾತಿ ವ್ಯವಸ್ಥೆಯಿಂದ ನೊಂದವರ ಪರವಾಗಿ ಕೀರ್ತನೆಗಳನ್ನು ರಚಿಸಿದರು. ಹೀಗಾಗಿ ಕನಕದಾಸರು ಇಂದಿಗೂ ಪ್ರಸ್ತುತರಾಗಿದ್ದಾರೆ ಎಂದು ಹೇಳಿದರು.

ಕನಕದಾಸರ ಜಯಂತಿ ಕೇವಲ ಆಚರಣೆಗೆ ಸೀಮಿತವಾಗಬಾರದು. ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು. ಸಮಾಜದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಕನಕದಾಸರು ಹಾಕಿಕೊಟ್ಟ ದಾರಿಯಲ್ಲಿ ನಡೆಯಬೇಕು. ನಾವು ವೈಯಕ್ತಿಕ ಮಟ್ಟದಲ್ಲಿ ಜಾತೀಯತೆ ಆಚರಣೆ ಮಾಡಬಾರದು. ಯಾರನ್ನು ಕೂಡ ಜಾತಿ ಭೇದದಿಂದ ಅಳೆಯಬಾರದು. ಯಾವ ಜಾತಿಯಾದರೂ ಮಾನವೀಯತೆಯಿಂದ ನೋಡಬೇಕು. ಆಗ ಮಾತ್ರ ಕನಕದಾಸರ ಜಯಂತಿ ಆಚರಣೆ ಸಾರ್ಥಕವಾಗಲಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳುವಂತೆ, ಜಾತಿ ವ್ಯವಸ್ಥೆ ಎಂಬುದು ಜಡ ವ್ಯವಸ್ಥೆ. ಬಾವಿಯಲ್ಲಿರುವ ನೀರಿನ ಹಾಗೆ, ನೀರಿನ ಮೇಲ್ಭಾಗದ ಕಸವನ್ನು ನಯವಾಗಿ ಬೇರ್ಪಡಿಸಿ ನೀರನ್ನು ಪಡೆಯುತ್ತೇವೆ. ಸ್ವಲ್ಪ ಸಮಯದ ಬಳಿಕ ಮತ್ತೆ ಕಸ ಹರಡಿಕೊಳ್ಳುತ್ತದೆ. ಜಾತಿ ವ್ಯವಸ್ಥೆಯೂ ಹಾಗೆಯೇ ಕನಕದಾಸರು, ಬುದ್ಧ, ಬಸವ ಆದಿಯಾಗಿ ಸಾಕಷ್ಟು ಪ್ರಬುದ್ಧ ಜ್ಞಾನಿಗಳು ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದರೂ, ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸಾಧ್ಯವಾಗಿಲ್ಲ ಎಂದು ವಿವರಿಸಿದರು.

ಪ್ರಸ್ತುತ ಸಂವಿಧಾನವನ್ನು ವಿರೋಧಿಸುವ ಮನಸ್ಥಿತಿಗಳು ಜಾಸ್ತಿಯಾಗಿವೆ. ಕನಕದಾಸರನ್ನು ಆರಾಧಿಸುವ ನಾವು ಸಂವಿಧಾನ ವಿರೋಧಿ ಶಕ್ತಿಗಳನ್ನು ಎದುರಿಸಬೇಕು. ಸಂವಿಧಾನ ಇಲ್ಲದಿದ್ದರೆ ಮನುಸ್ಮೃತಿ ಶಾಸನ ಮತ್ತೆ ಬರಲಿದ್ದು, ನಾವು ಮತ್ತೆ ಅವಕಾಶ ವಂಚಿತರಾಗುತ್ತೇವೆ. ಮತ್ತೆ ಮೇಲ್ವರ್ಗಗಳ ಅಡಿಯಾಳುಗಳಾಗಿ ಬದುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಉಪಾಧ್ಯಕ್ಷ ನಿಕೇತ್‌ರಾಜ್ ಮೌರ್ಯ ಮಾತನಾಡಿ, ಕರ್ನಾಟಕದ ಇತಿಹಾಸದಲ್ಲಿ ಕನಕದಾಸರನ್ನು ಮರೆಯಲು ಸಾಧ್ಯವಿಲ್ಲ. ಅವರ ವೈಚಾರಿಕ ಪ್ರಜ್ಞೆ, ವಿಚಾರವಂತಿಕೆ, ಎಲ್ಲಾ ಕಾಲಘಟ್ಟಕ್ಕೂ ಸಲ್ಲುವ ಕೀರ್ತನೆಗಳ ಮೂಲಕ 500 ವರ್ಷಗಳಿಂದ ಇಂದಿನವರೆಗೂ ಅವರು ಪ್ರಸ್ತುತವಾಗಿದ್ದಾರೆ. ಕನಕದಾಸರ ಸಾಹಿತ್ಯ ಮತ್ತು ಬದುಕು ಆದರ್ಶವಾದದ್ದು. ಕಾಗಿನೆಲೆ ಗುರುಪೀಠದ ಸ್ಥಾಪಿಸಿದಾಗ ಇದೊಂದು ಜಾತಿ ಮಠವಾಗಬಾರದು ಎಂದು ಸಿದ್ದರಾಮಯ್ಯ ಅವರ ಆಶಯವಾಗಿತ್ತು ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮೈಸೂರು ವಿವಿ ಆರ್‌ಇ ನಾಗರಾಜು, ಮೈಸೂರು ವಿವಿ ಎಫ್‌ಓ ರೇಖಾ ಹರೀಶ್ ವೊಗಣ್ಣ, ಅರುಣ್ ಕುಮಾರ್, ಎಂ.ಶಂಕರ್, ಡಾ. ಜೆ.ಶಿಲ್ಪ, ಉಪಾಧ್ಯಕ್ಷ ಸಿ.ಪುರುಷೋತ್ತಮ್, ಕಾರ್ಯದರ್ಶಿ ಎಂ.ಯಾದವ, ಜಂಟಿ ಕಾರ್ಯದರ್ಶಿ ಡಾ.ಹರೀಶ್ ರಂಗೇಗೌಡ, ಖಜಾಂಚಿ ಎಂ.ಮಹೇಶ್, ಡಾ.ಎಂ ಮಹೇಶ್ ದಳಪತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮದುವೆಯಾಗುವುದಾಗಿ ನಂಬಿಸಿ ವಕೀಲೆಗೆ ವಂಚನೆ; ವಕೀಲ ಸೇರಿ ಕುಟುಂಬದ 6 ಮಂದಿ ವಿರುದ್ಧ ಕೇಸ್

ಮೈಸೂರು, ಡಿ.5–ಮದುವೆಯಾಗುವುದಾಗಿ ನಂಬಿಸಿ, ದೈಹಿಕ ಸಂಪರ್ಕ ಹೊಂದಿ ಮದುವೆ ದಿನಾಂಕ ನಿಗದಿಪಡಿಸಿದ ನಂತರ ವಕೀಲೆಯನ್ನು ವಂಚಿಸಿದ ಆರೋಪದ ಮೇರೆಗೆ ಮೈಸೂರಿನ ವಿವಾಹಿತ ವಕೀಲ ಸೇರಿ 6 ಮಂದಿ ವಿರುದ್ಧ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಕೀಲ ನವೀನ್ ಪೊನ್ನಯ್ಯ, ಆತನ ತಂದೆ ಪಿ.ಕೆ. ಪೊನ್ನಯ್ಯ, ತಾಯಿ ಎಂ.ಬಿ.ಕುಮಾರಿ, ಪತ್ನಿ ಲಕ್ಷಿತಾ ಚಿನ್ನಪ್ಪ, ಆತನ ದೊಡ್ಡಪ್ಪನ ಮಗಳು ಸುಮಿ ಮತ್ತು ಬೆಳ್ಳಿಯಪ್ಪ ಎಂಬುವರು ಆರೋಪಕ್ಕೆ ಗುರಿಯಾಗಿರುವವರು.

ವಿವರ: ವಕೀಲ ನವೀನ್ ಪೊನ್ನಯ್ಯ ವಿವಾಹಿತರಾಗಿದ್ದು, ತಾವು ಪತ್ನಿ ಲಕ್ಷಿತಾ ಚಿನ್ನಪ್ಪ ಅವರಿಂದ ವಿಚ್ಛೇದನ ಪಡೆದಿರುವುದಾಗಿ ಖಾಸಗಿ ಸಂಸ್ಥೆಯ ಕಾನೂನು ಸಲಹೆಗಾರರಾದ ವಕೀಲೆಗೆ ತಿಳಿಸಿ, ಅವರನ್ನು ಮದುವೆಯಾಗುವ ಪ್ರಸ್ತಾವನೆ ಮುಂದಿಟ್ಟಿದ್ದಾರೆ.

ಹಲವು ವರ್ಷಗಳಿಂದ ಪರಿಚಯವಿದ್ದ ವಕೀಲೆ ಮದುವೆಗೆ ಒಪ್ಪಿದ್ದು, ಅಕ್ಟೋಬರ್ 2ರಂದು ಅವರ ಮನೆಗೆ ತೆರಳಿದ ನವೀನ್ ಪೊನ್ನಯ್ಯ ತಾಯಿ ಎಂ.ಬಿ.ಕುಮಾರಿ ಅವರು ವಕೀಲೆಗೆ ಹೂ ಮುಡಿಸುವ ಶಾಸ್ತ್ರ ಮತ್ತು ತಾಂಬೂಲ ಬದಲಾಯಿಸುವ ಶಾಸ್ತ್ರವನ್ನು ನೆರವೇರಿಸಿದ್ದಾರೆ.

> ವಕೀಲೆ ಡಿಸೆಂಬರ್ 1ರಂದು ನೀಡಿದ ದೂರು ಎಫ್‌ಐಆರ್ ಆಗಿದೆ. ಬಿಎಸ್‌ಎನ್ ಸೆಕ್ಷನ್‌ಗಳಡಿ ದಾಖಲಾಗಿರುವ ಪ್ರಕರಣದ ತನಿಖೆ ಮುಂದುವರೆದಿದೆ.
> - ಸುರೇಶ್ ಕುಮಾರ್.
> ವಿಜಯನಗರ ಠಾಣೆ ಇನ್ಸ್‌ಪೆಕ್ಟರ್

ಅಲ್ಲದೇ ನವೀನ್ ಪೊನ್ನಯ್ಯ ಮತ್ತು ವಕೀಲೆ ನಡುವೆ ಡಿಸೆಂಬರ್ 7ರಂದು ಮೈಸೂರಿನ ರೆಸಾರ್ಟ್‌ನಲ್ಲಿ ಶಾಸ್ತ್ರೋಕ್ತವಾಗಿ ಮದುವೆ ನಡೆಸಲು ಹಿರಿಯರ ಸಮ್ಮುಖದಲ್ಲಿ ನಿಶ್ಚಯವಾಗಿದ್ದು, ಆಹ್ವಾನ ಪತ್ರಿಕೆಗಳನ್ನು ಹಂಚುವ ಕಾರ್ಯ ನಡೆಯುತ್ತಿತ್ತು.

ಇಬ್ಬರೂ ಮದುವೆಯಾಗುವುದು ಖಾತ್ರಿಯಾಗಿದ್ದ ಹಿನ್ನೆಲೆಯಲ್ಲಿ ನವೀನ್ ಪೊನ್ನಯ್ಯ ತನ್ನ ಮನೆಗೆ ವಕೀಲೆಯನ್ನು ಕರೆಸಿಕೊಂಡು ಹಲವು ಬಾರಿ ದೈಹಿಕ ಸಂಪರ್ಕವನ್ನು ಹೊಂದಿದ್ದಾರೆ. ಈ ಮಧ್ಯೆ ನವೆಂಬರ್ 21ರಂದು ಬೆಳಗ್ಗೆ ವಕೀಲೆಯ ಮೊಬೈಲ್‌ಗೆ ವಾಟ್ಸಾಪ್ ಮೆಸೇಜ್ ಮಾಡಿರುವ ನವೀನ್ ಪೊನ್ನಯ್ಯ, ತಾನು ಪತ್ನಿಯಿಂದ ಇನ್ನೂ ವಿಚ್ಛೇದನ ಪಡೆದಿಲ್ಲ ಎಂದು ತಿಳಿಸಿರುವುದಲ್ಲದೆ, ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಾಗಿಯೂ, ನಿಶ್ಚಯಿಸಿರುವಂತೆ ತಮ್ಮಿಬ್ಬರ ಮದುವೆ ನಡೆಯುತ್ತದೆ ಎಂದು ತಿಳಿಸಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ.

ನಂತರ ವಕೀಲೆಯ ಸಂಪರ್ಕಕ್ಕೂ ನವೀನ್ ಪೊನ್ನಯ್ಯ ಸಿಕ್ಕಿಲ್ಲ. ಈ ಸಂಬಂಧ ಅವರ ಕುಟುಂಬಸ್ಥರ ಜೊತೆ ವಿಚಾರಿಸಿದ ವೇಳೆ ಅವರು ತಮಗೆ ಸ್ಪಂದಿಸದೇ ಅವಾಚ್ಯ ಪದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾರೆ. ತನ್ನನ್ನು ಮದುವೆಯಾಗಲು ಇಚ್ಛೆ ಇಲ್ಲದಿದ್ದರೂ ನವೀನ್ ಪೊನ್ನಯ್ಯ ಸುಳ್ಳು ಕೋರ್ಟ್ ಡಿಕ್ರಿ ಪಡೆದುಕೊಂಡು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಹೊಂದಿದ್ದಲ್ಲದೇ ಮದುವೆ ತಯಾರಿ ಮಾಡಿಸಿ ಸಂಬಂಧಿಕರಿಗೆ ಆಹ್ವಾನ ಪತ್ರಿಕೆ ಹಂಚುವ ಪ್ರಕ್ರಿಯೆ ನಡೆಯುತ್ತಿರುವಾಗ ಮೋಸ ಮಾಡಿದ್ದಾರೆ. ಅವರಿಗೆ ಅವರ ಕುಟುಂಬದವರು ಸಹಕರಿಸಿದ್ದಾರೆ ಎಂದು ವಕೀಲೆ ನೀಡಿದ ದೂರನ್ನು, ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ಬಿಎಸ್‌ಎನ್ ಸೆಕ್ಷನ್‌ಗಳಾದ 69, 79, 318(2), 335, 336(3), 337, 352, 351(2), 351(3), 3(5)ರಡಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.





ಮೈಸೂರು ಮಿತ್ರ






ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ವಿ.ಸಿ.ಫಾರಂನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಕೃಷಿ ಮೇಳವನ್ನು ಶುಕ್ರವಾರ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೃಷಿ ಬೆಳೆ ಕ್ಷೇತ್ರೋತ್ಸವ, ಕೃಷಿ ವಸ್ತು ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಶಾಸಕರು, ಕೃಷಿ ವಿಜ್ಞಾನಿಗಳು ಪಾಲ್ಗೊಂಡಿದ್ದರು.

ಮಂಡ್ಯ ಭಾಗದ ರೈತರ ಅಭಿವೃದ್ಧಿಗೆ ಕೃಷಿ ವಿವಿ ಸ್ಥಾಪನೆ

ಮಂಡ್ಯ,ಡಿ.5– ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ ಭಾಗದ ರೈತರನ್ನು ಆರ್ಥಿಕವಾಗಿ ಅಭಿವೃದ್ಧಿ ಮಾಡುವ ಸಲುವಾಗಿ ಮಂಡ್ಯದ ವಿ.ಸಿ ಫಾರಂನಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಮಂಡ್ಯ ಸೇರಿದಂತೆ ಹಲವು ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ತಾಲೂಕಿನ ವಿ.ಸಿ. ಫಾರಂನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಕೃಷಿ ಮೇಳದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿ ವರ್ಷ ವಿ.ಸಿ ಫಾರಂನಲ್ಲಿ ಕೃಷಿ ಮೇಳ ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಸುವರ್ಣ ಮಂಡ್ಯ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಮೊದಲ ಬೃಹತ್ ಕೃಷಿ ಮೇಳವನ್ನು ಆಯೋಜಿಸಲಾಗಿದೆ. ಕೃಷಿ ಮೇಳ 2025 ರಲ್ಲಿ ಹೆಚ್ಚಿನ ಕೃಷಿ ತಳಿಗಳು, ತಂತ್ರಜ್ಞಾನಗಳನ್ನು ಆಧುನಿಕ ಯಂತ್ರೋಪಕರಣಗಳನ್ನು ಮೇಳದಲ್ಲಿ ಇರಿಸಲಾಗಿದೆ. ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಕೃಷಿ ಮೇಳದಲ್ಲಿ ಸುಮಾರು 50 ಲಕ್ಷಕ್ಕೂ ಹೆಚ್ಚು ಜನ ಭಾಗಿಯಾಗಿ ಯಶಸ್ವಿಗೊಳಿಸಿದರು. ಮುಂದಿನ ದಿನಗಳಲ್ಲಿ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಕೃಷಿ ಮೇಳದಲ್ಲಿ ದೊಡ್ಡ ಮಟ್ಟದಲ್ಲಿ ಜನರು ಭಾಗಿಯಾಗುತ್ತಾರೆ ಎಂದು ಹೇಳಿದರು.

1939ರಲ್ಲಿ ಮೊದಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 630 ಎಕರೆ ಜಾಗದಲ್ಲಿ ಮಂಡ್ಯದಲ್ಲಿ ಕೃಷಿ ವಿಜ್ಞಾನಗಳ ಸಂಶೋಧನಾ ಕೇಂದ್ರವನ್ನು ತೆರೆದರು. ನಂತರ ರಾಜ್ಯದ 4 ಭಾಗದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. ರಾಜ್ಯದ ಎಲ್ಲಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉತ್ತಮ ಕೊಡುಗೆ ಹಾಗೂ ಕೃಷಿ ಮೇಳ ಮಾಡುತ್ತ ಮುಂದೆ ಸಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ರಾಜ್ಯದ 5ನೇ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ. ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆಯಾದ ಮೊದಲ ವರ್ಷದಲ್ಲೇ ಯು.ಜಿ.ಸಿ ಮಾನ್ಯತೆ ಪಡೆದಿದೆ. ಶಿವಮೊಗ್ಗ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 2008ರಲ್ಲಿ ಅನುಮತಿ ದೊರೆತ್ತು ಅಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ 2013ರ ಅವಧಿಯಲ್ಲಿ ಶಿವಮೊಗ್ಗ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು ಎಂದು ಹೇಳಿದರು.

ಬೆಳಗಾವಿಯಲ್ಲಿ ಆದ ಬೆಳೆ ನಾಶಕ್ಕೆ ಎನ್‌ಡಿಆರ್‌ಎಫ್ ಪರಿಹಾರದ ಮೊತ್ತದ ಜೊತೆಗೆ ರಾಜ್ಯ ಸರ್ಕಾರ ಪರಿಹಾರವನ್ನು ನೀಡಿತು. ರಾಜ್ಯ ಕಬ್ಬು ಬೆಳೆಗಾರರ ಆರ್ಥಿಕ ಅಭಿವೃದ್ಧಿಗಾಗಿ ಟನ್ ಕಬ್ಬಿಗೆ ರೂ.50 ಅನ್ನು ಸರ್ಕಾರ ನೀಡುತ್ತಿದೆ. ರಾಜ್ಯ ಸರ್ಕಾರ ಬಡವರು, ರೈತರು, ಶ್ರಮಿಕರು, ಮಹಿಳೆಯರ ಮತ್ತು ಶೋಷಿತ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದರು.

ರಾಜ್ಯ ಸರ್ಕಾರ ರಾಜ್ಯದ ಜನರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸದೃಢರನ್ನಾಗಿ ಮಾಡಲು ಅನೇಕ ಯೋಜನೆಗಳನ್ನು ನೀಡಿಕೊಂಡು ಬರುತ್ತಿದೆ. ರೈತರನ್ನು ಆರ್ಥಿಕವಾಗಿ ಸಫಲರನ್ನಾಗಿಸಲು ಕೃಷಿ ಮೇಳವನ್ನು ಆಯೋಜಿಸಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮಾತ್ರ ಎಲ್ಲರಿಗೂ ಮುಂದಿನ ದಿನಗಳಲ್ಲಿ ತಿಳಿಯುತ್ತದೆ ಎಂದು ತಿಳಿಸಿದರು.

ಫಿಲಿಪ್ಪೈನ್ ಅಂತರಾಷ್ಟ್ರೀಯ ರೈಸ್ ರಿಸರ್ಚ್ ಸೆಂಟರ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ರೋಗನಿರೋಧಕ ಭತ್ತದ ತಳಗಳನ್ನು ನಮ್ಮಲ್ಲಿ ಬೆಳೆಯಲಾಗುವುದು. ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಶೀತೋಪಕರಣಗಳ ಅಭಿವೃದ್ಧಿಗಾಗಿ ರೂ 100 ಕೋಟಿ ಮಾನ್ಯ ಮುಖ್ಯಮಂತ್ರಿಗಳು ಮಂಜೂರು ಮಾಡಿದ್ದಾರೆ. ಜಿಲ್ಲೆಯ ಜನತೆ ಹೇಗೆ ಕೃಷಿಯನ್ನು ಲಾಭದಾಯಕವಾಗಿ ಮಾಡಬೇಕು ಎಂಬುದರ ಕುರಿತಾಗಿ ಕೃಷಿ ಮೇಳ ಆಯೋಜಿಸಲಾಗಿದೆ ರೈತರು ಇದರಲ್ಲಿ ಭಾಗವಹಿಸಿ ಕೃಷಿ ಮೇಳದ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಈ ಭಾಗಕ್ಕೆ ವಿಶ್ವವಿದ್ಯಾಲಯ ನೀಡಿರುವುದಕ್ಕೆ ಮುಖ್ಯಮಂತ್ರಿಗಳಿಗೆ ಕೃತಜ್ಞತೆ ತಿಳಿಸಿದರು.

ಮಣ್ಣಿನ ಗುಣಮಟ್ಟವನ್ನು ಕಾಪಾಡುವ ಹಾಗೂ ಕಡಿಮೆ ನೀರು ಬಳಕೆ ಮಾಡಿ ಹೆಚ್ಚು ಇಳುವರಿ ಪಡೆಯಬಹುದು. ಕೃಷಿ ಮೇಳದಲ್ಲಿ ಅನೇಕ ಹೊಸ ತಳಿಯ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ ಇದನ್ನು ರೈತರು ತಮ್ಮ ಬೇಸಾಯದಲ್ಲಿ ಅಳವಡಿಸಿಕೊಳ್ಳಬೇಕು. ರೈತರ ಜೀವನವನ್ನು ಸುಧಾರಿಸುವುದು ಬಹಳ ಮುಖ್ಯ. ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹೆಚ್ಚಿನ ಪ್ರಶಸ್ತ್ಯ ನೀಡಬೇಕು. ರೈತರು ಸಮಗ್ರ ಕೃಷಿ ಜೊತೆಗೆ ಉಪ ಉತ್ಪನ್ನ ಮಾಡುವುದು ತಾವು ಉತ್ಪಾದಿಸಿದ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡಿ ಹೆಚ್ಚಿನ ಲಾಭ ಗಳಿಸಬೇಕು ಎಂದು ಸಚಿವರು ತಿಳಿಸಿದರು.

ಆಕಸ್ಮಿಕ ಬೆಂಕಿ: ಸುಟ್ಟು ಕರಕಲಾದ ಮಂಗಳೂರು ಹೆಂಚಿನ ಮನೆ

ಪಾಂಡವಪುರ: ಆಕಸ್ಮಿಕ ಬೆಂಕಿ ತಗುಲಿ ಮಂಗಳೂರು ಹಂಚಿನ ಮನೆ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ಅರಳಕುಪ್ಪೆ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ.



ಗ್ರಾಮದ ಸಾಹುಕರ್ ಮರಣ್ಣಗೌಡರ ಮಗ ವೆಂಕಟೇಶ್ ಮೂರ್ತಿ ಎಂಬುವರಿಗೆ ಸೇರಿದ ಮನೆಯೇ ಬೆಂಕಿಗೆ ಆಹುತಿಯಾಗಿದ್ದು ಘಟನೆಯಿಂದ ಮನೆಯಲ್ಲಿದ್ದ ಗೃಹ ಬಳಕೆ ವಸ್ತು ಸೇರಿದಂತೆ ದಿನಸಿ ಸಾಮಾಗ್ರಿಗಳು ಸುಟ್ಟು ಕರಕಲಾಗಿವೆ. ಮನೆಯವರೆಲ್ಲ ಸಂಬಂಧಿಕ ಸಾವಿಗೆ ತೆರಳಿದ್ದ ಕಾರಣ ಮನೆಯಲ್ಲಿ ಹಾಗಾಗಿ ಅದೃಷ್ಟವಾಸಾತ್ ಸಾವು ನೋವುಗಳು ಸಂಭವಿಸಿಲ್ಲ.

ಶುಕ್ರವಾರ ಬೆಳಗ್ಗೆ ಮನೆಗೆ ಬೆಂಕಿ ತಗಲಿರುವುದು ಕಂಡು ಬಂದಿದೆ. ಅಕ್ಕಪಕ್ಕದ ಮನೆಯವರು ಬೆಂಕಿಯನ್ನು ನಂಧಿಸಲು ಸಾಕಷ್ಟು ಪ್ರಯತ್ನಪಟ್ಟಿದ್ದಾರೆ. ಆದರೆ ಬೆಂಕಿಯ ರಬಸ ಹೆಚ್ಚಾದ ಹಿನ್ನೆಲೆಯಲ್ಲಿ ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ಮುಟ್ಟಿಸಿದ್ದಾರೆ. ಬಳಿಕ ಸ್ಥಳಕ್ಕೆ ಎರಡು ಅಗ್ನಿ ಶಾಮಕ ದಳದ ಸಿಬ್ಬಂದಿಗಳ ತಂಡ ಆಗಮಿಸಿ ಬೆಂಕಿ ನಂದಿಸಲು ಹರಸಾಹಸಪಟ್ಟು ಕೊನೆಗೆ ನಂದಿಸುವಲ್ಲಿ ಯಶಸ್ವಿಯಾದರು.

ಮನೆ ಬೆಂಕಿಗೆ ಆಹುತಿಯಾಗಿರುವುದರಿಂದ ಮನೆ ಕಳೆದುಕೊಂಡ ಮಾಲೀಕರು ಕಂಗಾಲಾಗಿದ್ದಾರೆ. ಇವರ ಮನೆ ಅರಳಕುಪ್ಪೆ ಗ್ರಾಮದಲ್ಲಿಯೇ ಅತಿದೊಡ್ಡ ಮನೆಯಾಗಿತ್ತು ಎನ್ನಲಾಗಿದ್ದು, ಮನೆ ಕಳೆದುಕೊಂಡ ಮನೆ ಮಾಲೀಕ ವೆಂಕಟೇಶ್ ಮೂರ್ತಿ ಅವರು ಸರಕಾರ ಪರಿಹಾರ ನೀಡುವ ಮೂಲಕ ನೆರವಿಗೆ ದಾವಿಸಬೇಕು ಎಂದು ಮನವಿ ಮಾಡಿದ್ದಾರೆ.

ಕರ್ನಾಟಕ ಪ್ರಾಂತ ಕೃಷಿ, ಗ್ರಾಮೀಣ ನರೇಗಾ ಕೂಲಿ ಕಾರ್ಮಿಕರ ಪ್ರತಿಭಟನೆ

ಕೆ.ಆರ್.ಪೇಟೆ: ತಾಲೂಕು ಕರ್ನಾಟಕ ಪ್ರಾಂತ ಕೃಷಿ ಮತ್ತು ಗ್ರಾಮೀಣ ಕೂಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟವಾದು, ತಾಲೂಕು ಘಟಕದ ಅಧ್ಯಕ್ಷ ಗಂಗೇನಹಳ್ಳಿ ಗಿರೀಶ್ ನೇತೃತ್ವದಲ್ಲಿ ಪಟ್ಟಣದ ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.



ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿ ಮತ್ತು ಗ್ರಾಮೀಣ ನರೇಗಾ ಕೂಲಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ದಿನಕ್ಕೆ ಕನಿಷ್ಠ 600 ರೂ. ಕೂಲಿ ನಿಗದಿ ಮಾಡಬೇಕು. ವಾರ್ಷಿಕ 200ಮಾನವ ದಿನಗಳ ಕಾಲ ಕೂಲಿ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ಬೆಳಿಗ್ಗೆ ಸಂಜೆ ಎಂಎಂಎಸ್ ಹಾಜರಾತಿಯನ್ನು ರದ್ದು ಮಾಡಬೇಕು. ನರೇಗಾ ಕೂಲಿ ಮಾಡುವ ಕಾರ್ಮಿಕರಿಗೆ ಸ್ಥಳದಲ್ಲಿ ಕುಡಿಯುವ ನೀರು, ಪ್ರಥಮ ಚಿಕಿತ್ಸೆ ಪ್ರಯಾಣ ಭತ್ಯೆ ನೀಡಬೇಕು ಎಂದು ಆಗ್ರಹಿಸಿದರು.

ಹಿರಿಯ ನಾಗರೀಕರಿಗೆ ಹಾಗೂ ಮಹಿಳೆಯರಿಗೆ ಕಾಮಗಾರಿ ರಿಯಾಯಿತಿ ನೀಡಬೇಕು. ಕೂಲಿ ಕಾರ್ಮಿಕರಿಗೆ ಸೂಕ್ತ ರಕ್ಷಣೆ ನೀಡಬೇಕು. ಕಡಿಮೆ ಕೂಲಿ ಹಾಕಿರುವ ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಪಿಡಿಓ ಮತ್ತು ಇಂಜಿನಿಯರ್ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಜೆಸಿಬಿ ಯಂತ್ರಗಳಿಂದ ಕೆಲಸ ಮಾಡುವುದನ್ನು ರದ್ದು ಮಾಡಬೇಕು. ಜಾಬ್ ಕಾರ್ಡ್ ಹೊಂದಿರುವ ಎಲ್ಲರಿಗೂ ಕೆಲಸ ನೀಡಿ ಕೂಲಿ ಹಣವನ್ನು ಸಕಾಲಕ್ಕೆ ಖಾತೆ ಜಮಾ ಮಾಡಬೇಕು ಎಂದು ಒತ್ತಾಯಿಸಿದರು.

ಕಡಿಮೆ ಕೂಲಿ ಹಾಕಿರುವ ನರೇಗಾ ಇಂಜಿನಿಯರ್ ಪಾರ್ಥ, ಲಕ್ಷ್ಮೀಪುರ ಪಿಡಿಓ ಸುರೇಶ್ ಬಾಬು ಅವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು ಎಂದು ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ಕೆ.ವಿನೋದ್ ಕುಮಾರ್ ಅವರನ್ನು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಾಂತ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಎಂ.ಶಿವಮಲ್ಲು, ಜಿಲ್ಲಾ ಕಾರ್ಯದರ್ಶಿ ಹಮುಮೇಶ್, ಜಿಲ್ಲಾ ಉಪಾಧ್ಯಕ್ಷ ಎನ್.ಸುರೇಂದ್ರ, ತಾಲೂಕು ಅಧ್ಯಕ್ಷ ಹೆಚ್.ಗಿರೀಶ್, ಕಾರ್ಯದರ್ಶಿ ಗೋಪಾಲ್, ಉಪಾಧ್ಯಕ್ಷ ಸುರೇಶ್, ಸಂಘಟನಾ ಕಾರ್ಯದರ್ಶಿ ಜಾಹೀರ್ , ಮಂಡ್ಯ ತಾಲ್ಲೂಕು ಅಧ್ಯಕ್ಷ ಅಮಾಸಣ್ಣ, ಮದ್ದೂರು ಅರುಣ್‌ಕುಮಾರ್, ಅಬ್ದುಲ್, ನಂದೀಶ್, ಸಿದ್ದಯ್ಯ ಮತ್ತಿತರರು ಭಾಗವಹಿಸಿದ್ದರು.

ಕೆ.ಶೆಟ್ಟಹಳ್ಳಿ ಗ್ರಾಪಂನ ನೂತನ ಕಟ್ಟಡ ಉದ್ಘಾಟನೆ



ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಗ್ರಾಪಂನ ಕಟ್ಟಡವನ್ನು ಉದ್ಘಾಟಿಸಿದರು.

ಶ್ರೀರಂಗಪಟ್ಟಣ: ಬಹಳ ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ಕೆ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿ ಕಟ್ಟಡದಲ್ಲಿ ಕೆಲಸ ನಿರ್ವಹಿಸುವರ ಮನಸು ಕೂಡ ನೊಂದು ಬಂದವರ ಮೇಲೆ ದಯೆ ತೋರಿಸಲಿ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಹೇಳಿದರು.

ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಗ್ರಾಪಂನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತಾಲೂಕಿನಲ್ಲಿ 21 ಗ್ರಾಮ ಪಂಚಾಯಿತಿಗಳಿದ್ದು, ಕೆಲವು ಗ್ರಾಪಂನ ಕಟ್ಟಡಗಳು ಸುಸ್ಥಿತಿ ಮತ್ತು ಜಾಗವಿಲ್ಲದೆ ಚಿಕ್ಕದಾಗಿದೆ. ಆದರಂತೆ ಕೆ.ಶೆಟ್ಟಹಳ್ಳಿ ಗ್ರಾಪಂ ಕೂಡ ಹೆದ್ದಾರಿಯಲ್ಲಿದ್ದರೂ ಚಿಕ್ಕ ಕಟ್ಟಡದಂತೆ ಇತ್ತು. ಇದೀಗ ಹೊಸದಾಗಿ ನಿರ್ಮಾಣಗೊಂಡಿರುವ ಈ ನೂತನ ಕಟ್ಟಡ ಬಹಳ ಚೆನ್ನಾಗಿ ನಿರ್ಮಾಣವಾಗಿದೆ ಎಂದರು.

15ನೇ ಹಣಕಾಸು ಯೋಜನೆಯ ಹಣವನ್ನು ಬಳಸಿಕೊಳ್ಳಾಗಿದ್ದು, ಉಳಿದ ಹಣವನ್ನು ಶಾಸಕರ ಅನುದಾನದಲ್ಲಿ ಬಳಸಿಕೊಳ್ಳಲಾಗಿದೆ. ಸುಸಜ್ಜಿತವಾದ ಕಟ್ಟಡದಲ್ಲಿ ಕಚೇರಿ ಕೆಲಸಕ್ಕಾಗಿ ಬರುವ ಸಾರ್ವಜನಿಕರನ್ನು ಅಷ್ಟೆ ಚೆನ್ನಾಗಿ ನೋಡಿಕೊಳ್ಳುವ ಮನಸುಗಳು ಕಚೇರಿಯಲ್ಲಿ ಇರಬೇಕು. ಅವರಿಗೆ ಸಬೂಬು ಹೇಳದೆ ಬರುವ ಜನರ ಕೆಲಸ ಮಾಡಿಕೊಡಬೇಕು ಗೊತ್ತಿಲ್ಲದಿದ್ದರೆ ತಿಳಿ ಹೇಳಬೇಕು ಎಂದರು.

ತಹಸೀಲ್ದಾರ್ ಚೇತನಯಾದವ್, ತಾಪಂ ಇಒ ವೇಣು, ಪಿಡಿಒ ಡಾ.ಶೋಭಾರಾಣಿ ಇದ್ದರು.

ಮೂರನೇ ಪುಟದಿಂದ

ವಿಶೇಷ ಕಾರ್ಯಪಡೆ

ನೇಮಕ ಮಾಡಲಾಗಿದೆ. ಈ ಸ್ಪೆಷಲ್ ಆ್ಯಕ್ಷನ್ ಫೋರ್ಸ್ ನೇಮಕ ಮಾಡಿದ ಬಳಿಕ ಕರಾವಳಿ ಭಾಗದಲ್ಲಿ ಯಾವುದೇ ರೀತಿಯ ಕೊಲೆ, ಗಲಭೆಗಳಾಗಿಲ್ಲ ಸಂಪೂರ್ಣ ನಿಯಂತ್ರಿಸಲಾಗಿದೆ. ಮೂರು ದಿನಗಳ ಹಿಂದೆ ಮಂಗಳೂರಿಗೆ ಭೇಟಿ ನೀಡಿದ್ದ ವೇಳೆ ಸರ್ಕಾರದ ಕಾರ್ಯವೈಖರಿ ಬಗ್ಗೆ ಸ್ಥಳೀಯರಿಂದ ಪ್ರಶಂಸೆ ವ್ಯಕ್ತವಾಯಿತು ಎಂದು ಹೇಳಿದರು.

ಎಮರ್ಜೆನ್ಸಿ ರೆಸ್ಪಾನ್ಸ್ ಸಪೋರ್ಟ್ ಸಿಸ್ಟಮ್ 112 ಸಹಾಯವಾಣಿಗೆ ಪ್ರತಿದಿನ ರಾಜ್ಯದಾದ್ಯಂತ 24 ಸಾವಿರ ಕರೆಗಳು ಬರುತ್ತಿವೆ. 1400 ದೂರುಗಳಿಗೆ ನಮ್ಮ ಸಿಬ್ಬಂದಿಗಳು ಸ್ಪಂದಿಸಿ ಮುಂದಿನ ಕ್ರಮ ಕೈಗೊಳ್ಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ 112 ಸಹಾಯವಾಣಿ ದೂರುಗಳಿಗೆ 6.59 ನಿಮಿಷದಲ್ಲಿ ಸ್ಪಂದಿಸುತ್ತಾರೆ. ಗ್ರಾಮೀಣ ಭಾಗದಲ್ಲಿ 13.58 ನಿಮಿಷದಲ್ಲಿ ಘಟನಾ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದರು.

ಪೊಲೀಸ್ ಗೃಹ: ಇಲಾಖೆಯ ಪೊಲೀಸ್ ಸಿಬ್ಬಂದಿಗೆ ಪೊಲೀಸ್ ಗೃಹ ಯೋಜನೆಯಡಿ 10,034 ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ಶೇ. 33ರಷ್ಟು ಸಿಬ್ಬಂದಿಗೆ ಪೊಲೀಸ್ ವಸತಿ ಲಭ್ಯವಾಗಿದೆ. ಶೇ.60 ರಿಂದ 80ರಷ್ಟು ಸಿಬ್ಬಂದಿಗೆ ವಸತಿ ಕಲ್ಪಿಸುವ ಗುರಿ ಹೊಂದಲಾಗಿದ್ದು, ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ತಿಳಿಸಿದರು.

ಮನೆಮನೆಗೆ ಪೊಲೀಸ್ ಸಹಕಾರಿ: ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮನೆಮನೆಗೆ ಪೊಲೀಸ್ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕ ವಲಯದಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಮನೆಮನೆಗೆ ಪೊಲೀಸ್ ಕಾರ್ಯಕ್ರಮ ಶೇ. 95ರಷ್ಟು ಪೂರ್ಣಗೊಂಡಿದೆ. ಪೊಲೀಸ್ ಸುರಕ್ಷತೆ ಮತ್ತು ಪಾರದರ್ಶಕತೆಯ ನಿಟ್ಟಿನಲ್ಲಿ ಬಾಡಿವೋರ್ನ್ ಕ್ಯಾಮೆರಾಗಳನ್ನು ಒದಗಿಸಲಾಗಿದೆ ಎಂದರು.

ಡ್ರಗ್ಸ್ ವಿಚಾರದಲ್ಲಿ ರಾಜೀ ಇಲ್ಲ: ಮಾದಕ ದ್ರವ್ಯ ಮುಕ್ತ ಕರ್ನಾಟಕ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಯನ್ನು (ಎಎನ್‌ಟಿಎಫ್) ಸ್ಥಾಪಿಸಲಾಗಿದ್ದು, ಈಗಾಗಲೇ ಕಾರ್ಯಾರಂಭಿಸಿದೆ.

ಸೈಬರ್ ಕ್ರೈಂ ನಿಯಂತ್ರಣಕ್ಕೆ ಬಲವರ್ಧನೆ: ರಾಜ್ಯದಲ್ಲಿ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು, ಇಡೀ ದೇಶದಲ್ಲಿ ಮೊದಲ ಬಾರಿಗೆ ಸೈಬರ್ ಕ್ರೈಮ್‌ಗೆ ಡಿಜಿಪಿಯನ್ನು ನೇಮಿಸಲಾಗಿದೆ. ಜಿಲ್ಲೆಗೊಂದು ಸೈಬರ್ ಕ್ರೈಮ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದ ಬಳಿಕ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. 2022ರಲ್ಲಿ 12550 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಸೈಬರ್ ಕ್ರೈಮ್‌ಗೆ ಪ್ರತ್ಯೇಕ ಪೊಲೀಸ್ ಠಾಣೆಗಳು ಸ್ಥಾಪನೆಯಾದ ಬಳಿಕ 2023ರಲ್ಲಿ 21903 ಪ್ರಕರಣಗಳು, 2024ರಲ್ಲಿ 21995 ಪ್ರಕರಣಗಳು ದಾಖಲಾಗಿವೆ. 2025ರಲ್ಲಿ 1300 ಪ್ರಕರಣಗಳು ವರದಿಯಾಗಿವೆ ಅಮೆರಿಕಾದಲ್ಲಿದ್ದವರಿಗೆ ಬೆಂಗಳೂರಿನಿಂದ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದ ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ. ರಾಜ್ಯದಲ್ಲಿ ಸೈಬರ್ ಕ್ರೈಮ್ ನಿಯಂತ್ರಣಕ್ಕೆ ಇಲಾಖೆಯಲ್ಲಿ ಬಲವರ್ಧನೆಗೊಳಿಸಲಾಗಿದೆ ಎಂದು ತಿಳಿಸಿದರು.

ಕಾರಾಗೃಹ ಕಮಾಂಡ್ ಸೆಂಟರ್: ರಾಜ್ಯದ ವಿವಿಧ ಕಾರಾಗೃಹಗಳಲ್ಲಿನ ಚಟುವಟಿಕೆಯ ಮೇಲೆ ನಿಗಾವಹಿಸಲು ಕಮಾಂಡ್ ಸೆಂಟರ್ ಮಾಡಲಾಗುವುದು. ಕಾರಾಗೃಹ ಗಳಲ್ಲಿ ಜಾಮರ್ ಅಳವಡಿಕೆಯಿಂದ ಕಾರಾಗೃಹ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಗುವುದು ಎಂದು ಮಾಹಿತಿ ನೀಡಿದರು.

600 ಪಿಎಸ್‌ಐ ನೇಮಕಾತಿ: ಹಿಂದಿನ ಸರ್ಕಾರ ಅವಧಿಯಲ್ಲಿ 545 ಪಿಎಸ್‌ಐ ನೇಮಕಾತಿಯಲ್ಲಿನ ಅಕ್ರಮದಿಂದ ಪೊಲೀಸ್ ನೇಮಕಾತಿಗೆ ತೊಂದರೆ ಉಂಟಾಯಿತು. ಸಾವಿರಾರು ಹುದ್ದೆಗಳು ಖಾಲಿ ಉಳಿದಿದ್ದವು. ರೂಲ್ 32ರ ಅಡಿ ಬಡ್ತಿ ನೀಡಲಾಯಿತು. 545 ಪಿಎಸ್‌ಐ ನೇಮಕಾತಿ ಸಮಸ್ಯೆಯನ್ನು ಬಗೆಹರಿಸಿ ತರಬೇತಿಗೆ ಕಳುಹಿಸಲಾಗಿದೆ. 402 ಪಿಎಸ್‌ಐ ನೇಮಕಾತಿಯು ಪೂರ್ಣಗೊಂಡಿದ್ದು ತರಬೇತಿಗೆ ಕಳುಹಿಸಲಾಗುತ್ತಿದೆ. ಇನ್ನೂ 600 ಪಿಎಸ್‌ಐ ಹುದ್ದೆಗಳು ಖಾಲಿ ಇದ್ದು, ಅಧಿಸೂಚನೆ ಹೊರಡಿಸಲಾಗುವುದು.

4500 ಪಿಸಿ ನೇಮಕಾತಿ: 4500 ಪೊಲೀಸ್ ಕಾನ್‌ಸ್ಟೇಬಲ್ ಗಳ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮತಿ ನೀಡಿದೆ ಒಳಮೀಸಲಾತಿ ಪ್ರಕ್ರಿಯೆಯಿಂದ ಒಟ್ಟು 75 ಸಾವಿರ ಹುದ್ದೆಗಳ ಭರ್ತಿಗೆ ಸಾಧ್ಯವಾಗಿಲ್ಲ. ನಾಳೆ ಸಂಜೆ ಸಿಎಂ ಅವರು ಸಭೆ ಕರೆದಿದ್ದಾರೆ. ಇದು ಬಗೆಹರಿದರೆ, ಇಲಾಖೆ ಯಲ್ಲಿನ ಒಟ್ಟು 8 ಸಾವಿರ ನೇಮಕಾತಿಗೂ ಅಧಿಸೂಚನೆ ಹೊರಡಿಸಲಾಗುವುದು ಎಂದು ಮಾಹಿತಿ ನೀಡಿದರು. ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಚಾರ, ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬಂದರೆ ಅಮಾನತು ಅಥವಾ ಸೇವೆಯಿಂದ ವಜಾ ಮಾಡಲಾಗುತ್ತಿದೆ ಎಂದು ತಿಳಿಸಿದರು. ಭ್ರಷ್ಟಚಾರವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ ಎಂದರು.

ಪ್ರಕರಣ: ಮೂವರು ವಶಕ್ಕೆ

ಕಸಿದು, ಮೈಸೂರಿನ ರಿಂಗ್ ರಸ್ತೆಯಲ್ಲಿ ಬಿಟ್ಟು ಪರಾರಿಯಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಗುಂಡ್ಲುಪೇಟೆ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್ ಅವರು ತನಿಖೆ ಕೈಗೊಂಡಿದ್ದರು. ಪ್ರಕರಣ ಬೇಧಿಸಲು ಚಾಮರಾಜನಗರ ಅಸ್ಪಿ ಕವಿತಾ ಅವರು 4 ತಂಡಗಳನ್ನು ರಚಿಸಿದ್ದರು. ದರೋಡೆ ನಡೆದ ದಿನ ಆ ಮಾರ್ಗದಲ್ಲಿ ಸಂಚರಿಸಿ ವಾಹನಗಳನ್ನು ಸಿಸಿ ಕ್ಯಾಮರಾಗಳ ದೃಶ್ಯಾವಳಿಗಳ ಮೂಲಕ ಸುಳಿವು ಪಡೆದುಕೊಂಡಿದ್ದ ಪೊಲೀಸರು ಕೇರಳದಲ್ಲಿ ಶೋಧ ಕಾರ್ಯ ನಡೆಸಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ ಮೂವರನ್ನು ವಶಕ್ಕೆ ಪಡೆದು ಗುಂಡ್ಲುಪೇಟೆ ಠಾಣೆಯಲ್ಲಿ ತೀವ್ರ ವಿಚಾರಣೆಗೊಳಪಡಿಸಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ!

ನಾನು ಹಾಗೂ ಎಂ.ಬಿ.ಪಾಟೀಲ್ ಸುಮಾರು ಒಂದು ಗಂಟೆ ಮಾತನಾಡಿದ್ದೇವೆ. ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರ ಆಕರ್ಷಣೆ, ಆಂಧ್ರ ಪ್ರದೇಶ, ತಮಿಳುನಾಡಿನಿಂದ ಎದುರಾಗಿರುವ ಸ್ಪರ್ಧೆ, ತೆಲಂಗಾಣ ಜಾಗತಿಕ ಸಮಾವೇಶ ಇತ್ಯಾದಿ ಚರ್ಚೆ ಮಾಡಿದ್ದೇವೆ. ರಾಜ್ಯದ ಪ್ರಗತಿ ಬಗ್ಗೆ ಚರ್ಚೆ ಸಹಜ ಎಂದರು.

ಶೇ.5.25ಕ್ಕೆ ಇಳಿಕೆ

ಬೇಡಿಕೆಯನ್ನು ಬೆಂಬಲಿಸಲು ಆರ್‌ಬಿಐಗೆ ಸಾಕಷ್ಟು ಅವಕಾಶವನ್ನು ನೀಡಿತು. ಅದೇ ಸಮಯದಲ್ಲಿ, ಆರ್ಥಿಕತೆಯು ಉತ್ತಮವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದೆ. ಎರಡನೇ ತ್ರೈಮಾಸಿಕದ ಜಿಡಿಪಿ ಬೆಳವಣಿಗೆಯು ಶೇ.8.2 ರಷ್ಟು ಪ್ರಭಾವಶಾಲಿ ವಿಸ್ತರಣೆಯನ್ನು ದಾಖಲಿಸಿದೆ.

ಗ್ರಾಹಕರಿಗೆ ಅನುಕೂಲ: ಮುಂಬರುವ ವಾರಗಳಲ್ಲಿ ಬ್ಯಾಂಕುಗಳು ತಮ್ಮ ಬಾಹ್ಯ ಮಾನದಂಡ–ಸಂಬಂಧಿತ ಸಾಲ ದರಗಳನ್ನು ಸರಿಹೊಂದಿಸುವ ಸಾಧ್ಯತೆಯಿರುವುದರಿಂದ ಗೃಹ, ವಾಹನ ಮತ್ತು ವೈಯಕ್ತಿಕ ಸಾಲದ ಸಾಲಗಾರರು ಹೆಚ್ಚು ಪ್ರಯೋಜನ ಪಡೆಯುತ್ತಾರೆ. ಮತ್ತೊಂದೆಡೆ ಬ್ಯಾಂಕುಗಳು ತಮ್ಮ ನಿಧಿಯ ವೆಚ್ಚವನ್ನು ಮರುಮಾಪನ ಮಾಡುವುದರಿಂದ ಠೇವಣಿದಾರರು ಮತ್ತೊಂದು ಸುತ್ತಿನ ಸ್ಥಿರ ಠೇವಣಿದಾರರ ಆದಾಯ ಕಡಿಮೆಯಾಗಬಹುದು.

ರೂಪಾಯಿ–ರುಬೆಲ್‌ನಲ್ಲೇ ವ್ಯವಹಾರ

ಆಧುನೀಕರಿಸಲು ಸಹಾಯ ಮಾಡುತ್ತಿದೆ. ಇದೀಗ ನಡೆಸಿದ ಮಾತುಕತೆಯ ಫಲಿತಾಂಶಗಳಿಂದ ನಾವು ನಿಸ್ಸಂದೇಹವಾಗಿ ತೃಪ್ತರಾಗಿದ್ದೇವೆ. ಭಾರತ ಮತ್ತು ರಷ್ಯಾ ಜನರ ಪ್ರಯೋಜನಕ್ಕಾಗಿ ರಷ್ಯಾ–ಭಾರತೀಯ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಗಾಢಗೊಳಿಸಲು ಪ್ರಸ್ತುತ ಭೇಟಿ ಮತ್ತು ಒಪ್ಪಂದಗಳು ಸಹಾಯ ಮಾಡುತ್ತದೆ ಎಂದು ನಾನು ನನ್ನ ವಿಶ್ವಾಸವನ್ನು ವ್ಯಕ್ತಪಡಿಸಬಲ್ಲೆ ಎಂದು ಪುಟಿನ್ ಹೇಳಿದ್ದಾರೆ. ರಷ್ಯಾ ಮತ್ತು ಭಾರತ ಬ್ರಿಕ್ಸ್, ಎಸ್‌ಸಿಒ ಮತ್ತು ಜಾಗತಿಕ ಬಹುಮತದ ಇತರ ದೇಶಗಳಲ್ಲಿ ಸಮಾನ ಮನಸ್ಸಿನ ದೇಶಗಳೊಂದಿಗೆ ಸ್ವತಂತ್ರ ಮತ್ತು ಸ್ವಾವಲಂಬಿ ವಿದೇಶಾಂಗ ನೀತಿಯನ್ನು ನಡೆಸುತ್ತಿವೆ. ನಾವು ಯುಎನ್‌ನಲ್ಲಿ ಪ್ರತಿಪಾದಿಸಲಾದ ಕಾನೂನಿನ ಮುಖ್ಯ ತತ್ವವನ್ನು ಸಮರ್ಥಿಸುತ್ತಿದ್ದೇವೆ ಎಂದು ಹೇಳಿದರು. ಜಾಗತಿಕ ಮೈತ್ರಿಗಳು ಗಮನಾರ್ಹ ಬದಲಾವಣೆಗಳಿಗೆ ಒಳಗಾಗುತ್ತಿರುವ ಸಮಯದಲ್ಲಿ ಪ್ರಮುಖ ಉದಯೋನ್ಮುಖ ರಾಷ್ಟ್ರಗಳಲ್ಲಿ ಸಹಯೋಗದ ರಾಜತಾಂತ್ರಿಕತೆಗೆ ಹೊಸ ಒತ್ತುವನ್ನು ಅವರ ಹೇಳಿಕೆಗಳು ಸೂಚಿಸುತ್ತವೆ

ಪ್ರಮುಖ ಪರಮಾಣು ಇಂಧನ ಚಾಲನೆ ನಡೆಯುತ್ತಿದೆ: ನಾವು ಅತಿದೊಡ್ಡ ಭಾರತೀಯ ಪರಮಾಣು ಸ್ಥಾವರವನ್ನು ನಿರ್ಮಿಸುವ ಯೋಜನೆಯಲ್ಲಿಯೂ ಕೆಲಸ ಮಾಡುತ್ತಿದ್ದೇವೆ. ಆರು ರಿಯಾಕ್ಟರ್‌ಗಳಲ್ಲಿ ಮೂರು ಈಗಾಗಲೇ ಇಂಧನ ಜಾಲಕ್ಕೆ ಸಂಪರ್ಕ ಹೊಂದಿವೆ ಎಂದು ಪುಟಿನ್ ಹೇಳಿದರು. ಈ ಯೋಜನೆಯು ಪೂರ್ಣಗೊಂಡ ನಂತರ ಭಾರತದ ಭವಿಷ್ಯದ ಶುದ್ಧ ಇಂಧನ ಮೂಲ ಸೌಕರ್ಯದ ಮೂಲಾಧಾರವಾಗಲಿದೆ ಮತ್ತು ಇಂಡೋ–ರಷ್ಯಾದ ತಾಂತ್ರಿಕ ಸಹಯೋಗದ ಪ್ರಮುಖ ಸಂಕೇತವಾಗಲಿದೆ ಎಂದು ತಿಳಿಸಿದ್ದಾರೆ.

ಭಯೋತ್ಪಾದನೆ ವಿರುದ್ಧ ಒಟ್ಟಾಗಿ ಹೋರಾಟ

ಜಂಟಿ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ಮೋದಿ, ಪುಟಿನ್ ಘೋಷಣೆ

ನವದೆಹಲಿ, ಡಿ.5– ಭಾರತ ಮತ್ತು ರಷ್ಯಾ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಒಟ್ಟಾಗಿ ನಡೆಯುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಮಧ್ಯಾಹ್ನ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ದ್ವಿಪಕ್ಷೀಯ ಸಭೆ ನಂತರ ಇಂದು ಮಧ್ಯಾಹ್ನ ಹೈದರಾಬಾದ್ ಹೌಸ್‌ನಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದ ನಾಯಕರು, ಭಯೋತ್ಪಾದನೆಯನ್ನು ಎದುರಿಸಲು ಭಾರತದ ಪ್ರಯತ್ನಗಳಿಗೆ ಮಾಸ್ಕೋ ಬಲವಾದ ಬೆಂಬಲ ನೀಡುತ್ತಿದೆ ಮತ್ತು ಏ.22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಜೈಶ್–ಎ–ಮೊಹಮ್ಮದ್‌ನ ನಂಟಿದೆ ಎಂಬ ಆರೋಪದ ನಂತರ ಭಾರತದ ಪರವಾಗಿ ರಷ್ಯಾ ಬಲವಾಗಿ ಪ್ರತಿಕ್ರಿಯಿಸಿದೆ. ಭಯೋತ್ಪಾದಕ ದಾಳಿಯನ್ನು ಖಂಡಿಸಿದ ಪುಟಿನ್, ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಭಾರತದೊಂದಿಗೆ ಕೈಜೋಡಿಸುವುದಾಗಿ ಹೇಳಿದರು.

ಕಳೆದ ಎಂಟು ದಶಕಗಳಲ್ಲಿ ಜಗತ್ತು ಹಲವಾರು ಏರಿಳಿತಗಳನ್ನು ಕಂಡಿದೆ ಅನೇಕ ಸವಾಲುಗಳು ಮತ್ತು ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತು. ಇದೆಲ್ಲದರ ನಡುವೆಯೂ ಭಾರತ–ರಷ್ಯಾ ಸ್ನೇಹವು ಧ್ರುವ ನಕ್ಷತ್ರದಂತೆ ಸ್ಥಿರವಾಗಿ ಉಳಿದಿದೆ. ಪರಸ್ಪರ ಗೌರವ ಮತ್ತು ಆಳವಾದ ನಂಬಿಕೆಯಲ್ಲಿ ಬೇರೂರಿರುವ ಈ ಸಂಬಂಧಗಳು ಯಾವಾಗಲೂ ಕಾಲದ ಪರೀಕ್ಷೆಯಲ್ಲಿ ನಿಂತಿವೆ ಎಂದು ಮೋದಿ ಹೇಳಿದರು. ರಷ್ಯಾ ನಿಯೋಗಕ್ಕೆ ಆತ್ಮೀಯ ಮತ್ತು ಆತಿಥ್ಯದ ಸ್ವಾಗತಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ನನ್ನ ಆತ್ಮೀಯ ಸ್ನೇಹಿತ ಪ್ರಧಾನಿ ಮೋದಿ ಹಾಗೂ ಭಾರತದ ಜನರಿಗೆ ನಾನು ಧನ್ಯವಾದ ಹೇಳುತ್ತೇನೆ.

ಮಂಡ್ಯ ಭಾಗದ ಕಬ್ಬಿನ ಇಳುವರಿ ಹೆಚ್ಚಿಸಿ

ಈ ಹಿಂದೆ ನಾನು ಸಿಎಂ ಇದ್ದಾಗ ಮತ್ತು ಪ್ರಸ್ತುತ ಅವಧಿಯಲ್ಲಿ ಅನೇಕ ಯೋಜನೆ ನೀಡಿದ್ದು, ರೈತರು, ಕಾರ್ಮಿಕರ ಶ್ರೇಯೋಭಿ ವೃದ್ಧಿ, ಆರ್ಥಿಕ, ಸಾಮಾಜಿಕ ಶಕ್ತಿ ನೀಡಲು ನಾವು ಶ್ರಮಿಸುತ್ತಿದ್ದು, ಅಸಮಾನತೆ ತೊಲಗಿಸಲು, ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ನೀಡುವ ಸಲುವಾಗಿ ಡಾ.ಬಿ.ಆರ್.ಅಂಬೇಡ್ಕರ್ ಆಶಯದಂತೆ ನಮ್ಮ ಸರ್ಕಾರ ನಡೆಯುತ್ತಿದೆ ಎಂದು ಹೇಳಿದರು.

ಮೆಕ್ಕೆ ಜೋಕ್ಕೆ ಬೆಂಬಲ ಬೆಲೆ: ಕೇಂದ್ರ ಸರ್ಕಾರ ಮೆಕ್ಕೆ ಜೋಳದ ಬಗ್ಗೆ ತಮಗೇನು ಸಂಬಂಧವಿಲ್ಲ ಎಂದು ಕೈತೊಳೆದುಕೊಂಡಿದ್ದಾರೆ. ಇದೀಗ ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ನಿಗದಿ ಮಾಡಲು ಕೇಂದ್ರ ಸರ್ಕಾರ ಮೀನಾಮೇಷ ಎಣಿಸುತ್ತಿದ್ದು, ನಾನು ಮತ್ತು ಕೃಷಿ ಸಚಿವರು ಈ ಬಗ್ಗೆ ಚರ್ಚಿಸಿ ಶೀಘ್ರವೇ ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ನಿಗದಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮೈಷುಗರ್ ಉಳಿಸಲು ನಿರ್ಧಾರ: ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ 60ಕ್ಕೂ ಹೆಚ್ಚು ಕೋಟಿ ಹಣ ನೀಡಿದ್ದು, ವಿದ್ಯುತ್ ಬಿಲ್ ಸಹ ಮನ್ನಾ ಮಾಡಿದ್ದೆ. ಇವೆಲ್ಲವನ್ನು ನೀಡಿದ್ದು, ಕಾರ್ಖಾನೆ ಉಳಿಸುವ ಸಲುವಾಗಿ. ಜೊತೆಗೆ ಸರ್ಕಾರಿ ಸ್ವಾಮ್ಯದ ರಾಜ್ಯದ ಏಕೈಕ ಸಕ್ಕರೆ ಕಾರ್ಖಾನೆಯನ್ನು ಮತ್ತಷ್ಟು ಅಭಿವೃದ್ಧಿ ಮಾಡಲು ನಾನು ಬದ್ಧನಾಗಿದ್ದೇನೆ ಎಂದರು.

ಕೃಷಿ ವಿವಿ ಸ್ಥಾಪನೆಗೆ ಪಟ್ಟು: ವಿ.ಸಿ.ಫಾರಂನಲ್ಲಿ ಬಹಳಷ್ಟು ಜಮೀನಿದೆ. ಸಾಕಷ್ಟು ಸಂಶೋಧನೆ ನಡೆಯುತ್ತಿದೆ. ಕೃಷಿ ವಿಶ್ವವಿದ್ಯಾನಿಲಯವಾಗಿ ಪರಿವರ್ತನೆ ಮಾಡಬೇಕೆಂಬ ಮಾತುಗಳನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದರು. ಬೆಂಗಳೂರಿನಲ್ಲಿರುವ ಕೃಷಿ ವಿವಿಯಿಂದ ಬೇರ್ಪಡಿಸಿ ಮಂಡ್ಯದಲ್ಲಿ ಕೃಷಿ ವಿವಿ ಸ್ಥಾಪನೆ ಮಾಡುವುದು ಅಗತ್ಯ ಎಂದು ಚಿಂತಿಸಿ, ಮಂಡ್ಯ ಕೃಷಿ ವಿವಿಯ ಬಗ್ಗೆ ಕ್ಯಾಬಿನೆಟ್‌ನಲ್ಲಿ ಮಂಡಿಸಿದೆ. ಆದರೆ ಕೆಲ ಸಚಿವರು ಇದಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರಾದರೂ ಆದರೆ ನಾನು ಮಂಡ್ಯದಲ್ಲಿ ಕೃಷಿ ವಿವಿ ಆಗಲೇಬೇಕೆಂದು ಒತ್ತಾಯಪೂರ್ವಕವಾಗಿ ಹೇಳಿದ್ದರಿಂದ ಅವರೆಲ್ಲರೂ ಒಪ್ಪಿದರು. ಮಂಡ್ಯ ಜಿಲ್ಲೆಗೆ ಕೃಷಿ ವಿವಿ ಮಂಜೂರಾಯಿತು ಎಂದು ವಿವರಿಸಿದರು.

ಮಂಡ್ಯ ಕೃಷಿ ವಿಶ್ವವಿದ್ಯಾನಿಲಯ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು ಸೇರಿ ಐದು ಜಿಲ್ಲೆಯನ್ನು ಒಳಗೊಂಡಿದ್ದು, ಇಲ್ಲಿನ ರೈತರು ಬೆಳೆಯುವ ಬೆಳೆಗಳ ಪ್ರದರ್ಶನ ವಾಗುತ್ತಿದೆ. ಕೃಷಿ ವಿಶ್ವವಿದ್ಯಾನಿಲಯಗಳು ವಿವಿಧ ಬೆಳೆಗಳ ಬಗ್ಗೆ ನಡೆಸುವ ಸಂಶೋಧನೆಗಳು ರಾಜ್ಯ ಪ್ರತಿಯೊಬ್ಬ ರೈತನಿಗೂ ತಲುಪಬೇಕೆಂಬುದೇ ನಮ್ಮ ಉದ್ದೇಶವಾಗಿದೆ ಎಂದರು.

ವಿವಿಧ ತಳಿ ಲೋಕಾರ್ಪಣೆ: ಇದೇ ಸಂದರ್ಭದಲ್ಲಿ ಮಂಡ್ಯ ಕೃಷಿ ವಿಶ್ವವಿದ್ಯಾನಿಲಯವು ಸಂಶೋಧಿಸಿರುವ ಹಲವು ಹೊಸ ತಳಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಕೃಷಿ ಮೇಳದಲ್ಲಿ ವಿವಿಧ ತಳಿಗಳು, ಕೃಷಿ ಸಂಶೋಧನೆ, ಆಧುನಿಕ ಕೃಷಿ ಪದ್ಧತಿ, ಯಂತ್ರೋಪಕರಣಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಮಂಡ್ಯ ಸೇರಿದಂತೆ ಅಕ್ಕಪಕ್ಕ ಜಿಲ್ಲೆಗಳಿಂದ ಸಾವಿರಾರು ರೈತರು ಮೇಳಕ್ಕೆ ಆಗಮಿಸಿದ್ದರು. ಜೊತೆಗೆ ಸಿಎಂ ಸಿದ್ದರಾಮಯ್ಯ ಸಹ ಅನೇಕ ಬೆಳೆಗಳ ತಳಿಗಳನ್ನು ವೀಕ್ಷಣೆ ಮಾಡಿದರು.

ವೇದಿಕೆಯಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ, ಮಧು ಜಿ.ಮಾದೇಗೌಡ, ಮಂಡ್ಯ ಕೃಷಿ ವಿಜ್ಞಾನಗಳ ವಿವಿಯ ವಿಶೇಷಾಧಿಕಾರಿ ಡಾ.ಕೆ.ಎಂ.ಹರಿಣಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಇನ್ನಿತರರಿದ್ದರು.

ಉಕ್ರೇನ್ ಯುದ್ಧದ ವಿಚಾರದಲ್ಲಿ ಭಾರತ ತಟಸ್ಥವಾಗಿಲ್ಲ, ಶಾಂತಿಯ ಪರವಾಗಿದೆ

ಪುಟಿನ್ ಜೊತೆಗಿನ ಮಾತುಕತೆ ವೇಳೆ ಮೋದಿ ಸಂದೇಶ

ನವದೆಹಲಿ, ಡಿ.5– ರಷ್ಯಾ–ಉಕ್ರೇನ್ ಯುದ್ಧ ವಿಚಾರದಲ್ಲಿ ಭಾರತ ತಟಸ್ಥವಾಗಿಲ್ಲ. ಶಾಂತಿಯ ಪರವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಹೈದರಾಬಾದ್ ಹೌಸ್‌ನಲ್ಲಿ ಪ್ರಧಾನಿ ಮೋದಿಯವರ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಮಯದಲ್ಲಿ ಉಕ್ರೇನ್ ಸಂಘರ್ಷವನ್ನು ಉಲ್ಲೇಖಿಸಿ ಮಾತನಾಡಿರುವ ಮೋದಿ, ಭಾರತ ಯಾವಾಗಲೂ ಶಾಂತಿಯನ್ನು ಬೆಂಬಲಿಸುತ್ತದೆ ಮತ್ತು ಶಾಂತಿಯ ಪರವಾಗಿ ದೃಢವಾಗಿ ನಿಲ್ಲುತ್ತದೆ ಎಂದು ಹೇಳಿದ್ದಾರೆ.

ಉಕ್ರೇನ್ ಬಿಕ್ಕಟ್ಟು ಆರಂಭವಾದಾಗಿನಿಂದ ನಾವು ನಿರಂತರ ಚರ್ಚೆ ನಡೆಸಿದ್ದೇವೆ. ಕಾಲಕಾಲಕ್ಕೆ ನೀವು ಕೂಡ ನಿಜವಾದ ಸ್ನೇಹಿತರಾಗಿ ಎಲ್ಲದರ ಬಗ್ಗೆ ನಮಗೆ ಮಾಹಿತಿ ನೀಡುತ್ತಿದ್ದೀರಿ. ನಂಬಿಕೆ ಒಂದು ದೊಡ್ಡ ಶಕ್ತಿ ಎಂದು ನಾನು ನಂಬುತ್ತೇನೆ. ನಾನು ಈ ವಿಷಯವನ್ನು ನಿಮ್ಮೊಂದಿಗೆ ಹಲವು ಬಾರಿ ಚರ್ಚಿಸಿದ್ದೇನೆ. ಅದನ್ನು ಪ್ರಪಂಚದ ಮುಂದೆ ಇರಿಸಿದ್ದೇನೆ.

ಪುಟಿನ್ ಅವರ ಈ ಭೇಟಿಯು ಐತಿಹಾಸಿಕವಾಗಿದೆ. ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ನಾವು ನಿರಂತರವಾಗಿ ಚರ್ಚಿಸುತ್ತಿದ್ದೇವೆ. ರಷ್ಯಾ ಶಾಂತಿ ಮಾರ್ಗ ಕಂಡುಕೊಳ್ಳಬೇಕಿದೆ. ಯಾಕೆಂದರೆ ಶಾಂತಿಯ ಮಾರ್ಗದಲ್ಲಿ ಪ್ರಯಾಣಿಸಿದರೆ ಮಾತ್ರ ವಿಶ್ವಕ್ಕೆ ಪ್ರಯೋಜನವಾಗುತ್ತದೆ. ಶಾಂತಿಗಾಗಿ ನಾವು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇವೆ. ಉಕ್ರೇನ್–ರಷ್ಯಾ ಸಂಘರ್ಷ ವಿಚಾರದಲ್ಲಿ ಭಾರತ ತಟಸ್ಥವಾಗಿಲ್ಲ, ಶಾಂತಿಯ ಪರವಾಗಿದ್ದೇವೆ ಎಂದರು.



ಪುಟಿನ್‌ಗೆ ಭಗವದ್ಗೀತೆ ಉಡುಗೊರೆ ಕೊಟ್ಟ ಪ್ರಧಾನಿ ಮೋದಿ

ನವದೆಹಲಿ, ಡಿ.5– 2 ದಿನಗಳ ಪ್ರವಾಸ ನಿಮಿತ್ತ ಭಾರತಕ್ಕೆ ಆಗಮಿಸಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್‌ರನ್ನು ಆತ್ಮೀಯವಾಗಿ ಸ್ವಾಗತಿಸಿದ ಪ್ರಧಾನಿ ನರೇಂದ್ರ ಮೋದಿ ಭಗವದ್ಗೀತೆಯ ರಷ್ಯನ್ ಆವೃತ್ತಿಯನ್ನು ಉಡುಗೊರೆಯಾಗಿ ನೀಡಿದರು. ಪ್ರಧಾನಿ ಮೋದಿ ಅವರು ಎಕ್ಸ್ ನಲ್ಲಿ ಆ ಕ್ಷಣದ ಛಾಯಾಚಿತ್ರವನ್ನು ಹಂಚಿಕೊಂಡಿದ್ದು, ಅಧ್ಯಕ್ಷ ಪುಟಿನ್ ಅವರಿಗೆ ರಷ್ಯನ್ ಭಾಷೆಯಲ್ಲಿ ಗೀತೆಯ ಪ್ರತಿಯನ್ನು ನೀಡಲಾಯಿತು. ಗೀತೆಯ ಬೋಧನೆಗಳು ಪ್ರಪಂಚದಾದ್ಯಂತ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡುತ್ತವೆ ಎಂದು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಜಿಐ ಟ್ಯಾಗ್‌ವುಳ್ಳ ಭಾರತದ ಪದಾರ್ಥಗಳಿಗೆ ವಿದೇಶದಲ್ಲಿ ಬಹು ಬೇಡಿಕೆ

ಸಿಎಫ್‌ಟಿಆರ್‌ಐ ನಿರ್ದೇಶಕ ಡಾ|| ಗಿರಿಧರ್ ಪರ್ವತಂ ಮಾಹಿತಿ



ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ನಡೆದ 'ಜಿಐ ಮಹೋತ್ಸವ-3' ಕಾರ್ಯಕ್ರಮದಲ್ಲಿ ವಿವಿಧ ಸಂಸ್ಥೆಗಳು ಹೊಸದಾಗಿ ತಯಾರಿಸಿರುವ ವಿವಿಧ ಉತ್ಪನ್ನಗಳನ್ನು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಬಿಡುಗಡೆ ಮಾಡಿದರು.

ಮೈಸೂರು,ಡಿ.5(ಎಂಟಿವೈ)– ಭಾರತದ ಜಿ.ಐ ಟ್ಯಾಗ್ ಹೊಂದಿರುವ ವಸ್ತುಗಳಿಗೆ ಇಂಗ್ಲೆಂಡ್, ಯುಎಇ ಸೇರಿದಂತೆ ವಿವಿಧ ದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ ಎಂದು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ತಿಳಿಸಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಮಧುರೈ ಅಗ್ರಿ ಬಿಸಿನೆಸ್ ಇನ್ಕ್ಯುಬೇಷನ್ ಫೋರಂ(ಎಂಎಬಿಐಎಫ್), ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿರುವ 4 ದಿನಗಳ ಜಿಐ ಮಹೋತ್ಸವದಲ್ಲಿ ಮಾತನಾಡಿದ ಅವರು, ಭೌಗೋಳಿಕ ಮಾನ್ಯತೆ(ಜಿಯೋಗ್ರಾಫಿಕಲ್ ಇಂಡಿಕೇಶನ್–ಜಿಐ ಟ್ಯಾಗ್) ಪಡೆದ ಉತ್ಪನ್ನಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಉತ್ತೇಜನ ಮತ್ತು ಪ್ರಚಾರ ನೀಡಬೇಕಾಗಿದೆ. ಭಾರತದಲ್ಲಿ ತಯಾರಾಗುವ ಜಿಐ ಟ್ಯಾಗ್ ಹೊಂದಿರುವ ಉತ್ಪನ್ನಗಳಿಗೆ ಹೊರ ದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ. ಜಿಐ ಮಾನ್ಯತೆ ಪಡೆದ ವಸ್ತುಗಳ ಕುರಿತು ಜಾಗತಿಕ ಮಟ್ಟದಲ್ಲಿ ಪ್ರಚಾರ ಮಾಡಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ಇಂಗ್ಲೆಂಡ್, ಯುಎಇ, ಗಲ್ಫ್ ರಾಷ್ಟ್ರಗಳು, ಇಟಲಿ, ಜರ್ಮನಿ ದೇಶದಲ್ಲಿ ಭೌಗೋಳಿಕ ಸೂಚ್ಯಂಕ ಉತ್ಪನ್ನಗಳ ಪ್ರದರ್ಶನ ಏರ್ಪಡಿಸಲಾಗುತ್ತಿದೆ ಎಂದರು.

ಜಿಐ ಟ್ಯಾಗ್ ಒಂದು ಪ್ರದೇಶದ ವಿಶಿಷ್ಟ ಉತ್ಪನ್ನಕ್ಕೆ ಸಿಗುವ ಗುರುತು ಆಗಿದ್ದು, ಅದು ಆ ಉತ್ಪನ್ನದ ನಿಜವಾದ ಮೂಲ ಮತ್ತು ಗುಣಮಟ್ಟವನ್ನು ಖಚಿತಪಡಿಸುತ್ತದೆ. ವಿಶೇಷ ಉತ್ಪನ್ನಗಳ ಗುಣಲಕ್ಷಣವನ್ನೂ ಪ್ರಮಾಣೀಕರಿಸುತ್ತದೆ. ನಿರ್ದಿಷ್ಟ ಪ್ರದೇಶದ ಸಂಕೇತವಾಗಿರುವ ಜಿಐ ಟ್ಯಾಗ್ ಉತ್ಪನ್ನಗಳು ವಿಶೇಷ ಗುಣ, ವೈಶಿಷ್ಟತೆ ಹೊಂದಿರುತ್ತವೆ. ಭೌಗೋಳಿಕ ಮೂಲವನ್ನು ಸೂಚಿಸುವ ಆ ಉತ್ಪನ್ನದ ನಕಲಿ ಉತ್ಪನ್ನಗಳ ಮಾರಾಟ ತಡೆಯುತ್ತದೆ. ಸ್ಥಳೀಯ ಕುಶಲಕರ್ಮಿಗಳು, ರೈತರಿಗೆ ಕಾನೂನು ರಕ್ಷಣೆ ನೀಡಿ ಅವರ ಆರ್ಥಿಕತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಜಿಐ ಟ್ಯಾಗ್ ಪ್ರೋತ್ಸಾಹಿಸುತ್ತದೆ ಎಂದು ತಿಳಿಸಿದರು.

ಜಿಐ ಉತ್ಪನ್ನಗಳ ಬೆಳವಣಿಗೆಯಿಂದ ಸ್ಥಳೀಯ ಉದ್ಯೋಗ, ಸಾಂಪ್ರದಾಯಿಕ ಜ್ಞಾನದ ರಕ್ಷಣೆ, ಕೌಶಲ ಸಂರಕ್ಷಣೆಗೂ ಸಹಕಾರಿಯಾಗಲಿದೆ. ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಹ ಅನುಕೂಲವಾಗಲಿದೆ. ಭಾರತದಲ್ಲಿ ನೋಂದಾಯಿಸಲಾದ ಜಿಐ ಉತ್ಪನ್ನಗಳ ಸಂಖ್ಯೆ 650 ಆಗಿದೆ. ಅವುಗಳಲ್ಲಿ 340 ಕರಕುಶಲ ಉತ್ಪನ್ನಗಳು, 18 ಉತ್ಪಾದನಾ ವಸ್ತುಗಳು, 45 ಆಹಾರ ಉತ್ಪನ್ನಗಳು, 190 ಕೃಷಿ ಸಂಬಂಧಿಸಿದ ಉತ್ಪನ್ನಗಳಾಗಿವೆ. 74 ಜಿಐ ಟ್ಯಾಗ್ ಉತ್ಪನ್ನಗಳೊಂದಿಗೆ ಉತ್ತರ ಪ್ರದೇಶ ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದರೆ, ತಮಿಳುನಾಡು 60 ಉತ್ಪನ್ನಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದೆ. ನಂತರ ಸ್ಥಾನದಲ್ಲಿರುವ ಕರ್ನಾಟಕದಲ್ಲಿ 46 ಭೌಗೋಳಿಕ ಸೂಚ್ಯಂಕ ಉತ್ಪನ್ನಗಳಿವೆ ಎಂದು ತಿಳಿಸಿದರು.

ಕೊಯಮತ್ತೂರಿನ ತಮಿಳುನಾಡು ಕೃಷಿ ವಿಶ್ವವಿದ್ಯಾಲಯದ ಕೃಷಿ ವ್ಯಾಪಾರ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ.ಈ. ಸೋಮಸುಂದರಂ ಮಾತನಾಡಿ, ಜಿಐ ಉತ್ಪನ್ನಗಳ ಮೂಲಕ ಆಹಾರ ಪ್ರವಾಸೋದ್ಯಮವನ್ನೂ ಸಹ ಉತ್ತೇಜಿಸಬಹುದಾಗಿದೆ. ವಿದೇಶಿಯರಿಗೆ ಭಾರತೀಯ ಆಹಾರ ಪದಾರ್ಥಗಳು ಬಹಳ ಅಚ್ಚುಮೆಚ್ಚು. ಜಿಐ ಖಾದ್ಯಗಳು ಬೇರೆ ದೇಶಗಳಲ್ಲಿ ಸಿಗಲ್ಲ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಇಂತಹ ಆಹಾರ ಪದಾರ್ಥಗಳ ರುಚಿ ಸವಿಯಲು ಅವಕಾಶ ಕಲ್ಪಿಸಿಕೊಡುವ ಮೂಲಕ ಆರ್ಥಿಕ ಮೂಲವನ್ನು ಕಂಡುಕೊಳ್ಳಬೇಕಿದೆ. ಧಾರವಾಡದ ಪೇಡಾ, ತಿರುವಲ್ಲಿ ಹಲ್ವಾ, ತಿರುಪತಿ ಲಾಡು ಇವುಗಳೆಲ್ಲ ವಿಶಿಷ್ಟ ರುಚಿಕರ ಆಹಾರ ಪದಾರ್ಥಗಳು. ಬಿರಿಯಾನಿ ಸೇರಿದಂತೆ ಇನ್ನಿತರ ಸ್ಥಳೀಯ ಆಹಾರ ಪದಾರ್ಥಗಳ ಕುರಿತು ಹೆಚ್ಚು ಪ್ರಚಾರ, ಬೆಂಬಲ ಕೊಡಬೇಕು. ಭೌಗೋಳಿಕ ಮಾನ್ಯತೆ ಪಡೆಯುವಲ್ಲಿ ಚೀನಾ ದೇಶವೇ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ ಎಂದರು.

ಮಧುರೈ ಕೃಷಿ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಡಾ.ಪಿ.ಪಿ.ಮಹೇಂದ್ರನ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಿಎಫ್‌ಟಿಆರ್‌ಐ ಮುಖ್ಯ ವಿಜ್ಞಾನಿಗಳಾದ ಡಾ.ಆಶಿತೋಷ ಇನಾಮ್ದಾರ್, ಡಾ.ಡಿ.ಉಷಾರಾಣಿ, ನಬಾರ್ಡ್‌ನ ಸಿಇಒ ಕೆ.ಗಣೇಶ್ ಮೂರ್ತಿ, ಸಿಜಿಎಂ(ಕರ್ನಾಟಕ) ಸುರೇಂದ್ರ ಬಾಬು, ಡಾ.ಎಸ್.ಸೆಂಥಿಲ್ ವಿನಾಯರಂ ಇನ್ನಿತರರು ಉಪಸ್ಥಿತರಿದ್ದರು.



ಚನ್ನಪಟ್ಟಣದ ಗೊಂಬೆ ಮಳಿಗೆ ವೀಕ್ಷಿಸುತ್ತಿರುವ ಸಾರ್ವಜನಿಕರು.

ಮೈಸೂರು ಸಿಎಫ್‌ಟಿಆರ್‌ಐ ಆವರಣದಲ್ಲಿ

ಜಿಐ ಟ್ಯಾಗ್ ಹೊಂದಿದ ಆಹಾರ ಪದಾರ್ಥ, ಕರಕುಶಲ ವಸ್ತುಗಳ ಪ್ರದರ್ಶನ ಮಾರಾಟ

54 ಮಳಿಗೆಗಳಲ್ಲಿ ಒಂದಕ್ಕಿಂತ ಒಂದು ಆಕರ್ಷಕ ಪದಾರ್ಥ; ಡಿ.8ರವರೆಗೆ ವೀಕ್ಷಿಸುವ ಅವಕಾಶ



ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಇಂದಿನಿಂದ ಆರಂಭವಾದ ನಾಲ್ಕು ದಿನಗಳ ಜಿ.ಐ ಮಹೋತ್ಸವ ಮೇಳದಲ್ಲಿ ನಂಜನಗೂಡು ರಸಬಾಳೆ ಮಳಿಗೆಯಲ್ಲಿ ಸಿಎಫ್‌ಟಿಆರ್‌ಐ ಡಾ.ಗಿರಿಧರ್ ಪರ್ವತಂ, ಮಧುರೈ ಅಗ್ರಿ ಬಿಸಿನೆಸ್ ಇನ್ಕ್ಯುಬೇಷನ್ ಫೋರಮ್ ಡೀನ್ ಡಾ.ಪಿ.ಪಿ.ಮಹೇಂದ್ರನ್, ಕೊಯಮತ್ತೂರಿನ ಡಿಎಬಿಡಿ, ಟಿಎನ್‌ಎಯು ನಿರ್ದೇಶಕ ಡಾ.ಈ.ಸೋಮಸುಂದರಂ ಹಾಗೂ ಇನ್ನಿತರರು ರಸಬಾಳೆ ಗೊನೆ ಪ್ರದರ್ಶಿಸಿದರು.

ಮೈಸೂರು,ಡಿ.5(ಎಂಟಿವೈ)–ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಇಂದಿನಿಂದ ಆರಂಭವಾದ ನಾಲ್ಕು ದಿನಗಳ ಜಿ.ಐ ಟ್ಯಾಗ್ ಹೊಂದಿರುವ ಆಹಾರ ಪದಾರ್ಥ ಹಾಗೂ ಕರಕುಶಲ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಮೇಳ ಗಮನ ಸೆಳೆಯುತ್ತಿದೆ.

ಮಧುರೈ ಅಗ್ರಿ ಬಿಸಿನೆಸ್ ಇನ್ಕ್ಯುಬೇಷನ್ ಫೋರಮ್, ಸಿಎಫ್‌ಟಿಆರ್‌ಐ ಸಹಯೋಗದಲ್ಲಿ ಆಯೋಜಿಸಿರುವ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ರಾಜ್ಯದ ವಿವಿಧ ಜಿಲ್ಲೆ ಹಾಗೂ ರಾಜ್ಯಗಳಿಂದ ಕರಕುಶಲ ಕರ್ಮಿಗಳು ತಯಾರಿಸಿದ 'ಜಿಐ' ಟ್ಯಾಗ್ ಹೊಂದಿರುವ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಗಿದೆ. ಸಿಎಫ್‌ಟಿಆರ್‌ಐ ಆವರಣದಲ್ಲಿ ಆಯೋಜಿಸಿರುವ ಮೇಳದಲ್ಲಿ 54 ಮಳಿಗೆಗಳಿದ್ದು, ಅಲಂಕಾರಿಕ ವಸ್ತುಗಳು, ಕೈಮಗ್ಗದಿಂದ ತಯಾರಿಸಿರುವ ವಸ್ತುಗಳು, ಕುಶಲಕರ್ಮಿಗಳು ತಯಾರಿಸಿರುವ ಲೋಹದ ಅಲಂಕಾರಿಕ ವಸ್ತು, ಕಸೂತಿ ಕಲೆ, ಚೆನ್ನಪಟ್ಟಣದ ಬೊಂಬೆ, ಲಂಬಾಣಿ ಸಾಂಪ್ರದಾಯಿಕ ಉಡುಪು ಮಾರಾಟಕ್ಕಿಡಲಾಗಿದೆ.

ಅಲ್ಲದೆ, ಮೈಸೂರು ಮಲ್ಲಿಗೆ, ಮೈಸೂರು ವಿಳ್ಯದೆಲೆ, ನಂಜನಗೂಡು ರಸಬಾಳೆ, ಬ್ಯಾಡಗಿ ಮೆಣಸಿನಕಾಯಿ, ಮೈಸೂರು ಸ್ಯಾಂಡಲ್ ಸೋಪ್, ಕರ್ನಾಟಕ ಕೈಮಗ್ಗ ಇಲಾಖೆ, ಲಿಡ್ಕರ್, ಕುಶಲ ಕಲಾ ಕೇಂದ್ರ, ಮೈಸೂರು ಸಾಂಪ್ರದಾಯಿಕ ಚಿತ್ರಕಲೆ, ಗಂಜೀಫ ಕಾರ್ಡ್, ಚೆನ್ನಪಟ್ಟಣ ಗೊಂಬೆ, ಮೈಸೂರು ರೋಜ್ ವುಡ್ ಇನ್ಲೆ, ಮೈಸೂರು ಅಗರಬತ್ತಿ, ಧಾರವಾಡ ಪೇಡ, ನವರ ಅಕ್ಕಿ, ನೀಲಗಿರಿ ಟೀ, ಕೊಡೆಕೆನಲ್ ಬೆಳ್ಳುಳ್ಳಿ, ಊಟಿ ತೊಡವ ಬುಡಕಟ್ಟು ಜನರಿಂದ ತಯಾರಿಸಿದ ಸಾಂಪ್ರದಾಯಿಕ ಕಸೂತಿ ಉಡುಪು ಸೇರಿದಂತೆ ವಿವಿಧೆಡೆ ತಯಾರಿಸಿದ ಜಿಐ ಟ್ಯಾಗ್ ಹೊಂದಿರುವ ವಸ್ತುಗಳನ್ನು ಮಾರಾಟ ಮತ್ತು ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ.

ಉತ್ಪಾದಕರು ಹಾಗೂ ರೈತರನ್ನು ಜಿಐ ಟ್ಯಾಗ್ ಹೊಂದಿರುವ ಹೊಸ ಉತ್ಪನ್ನಗಳ ತಯಾರಿಕೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್(ನಬಾರ್ಡ್) ಹಾಗೂ ಇನ್ನಿತರ ಸಂಸ್ಥೆಗಳ ನೆರವಿನಿಂದ ಕಳೆದ 3 ವರ್ಷದಿಂದ 'ಜಿ.ಐ ಮಹೋತ್ಸವ' ಆಯೋಜಿಸಲಾಗುತ್ತಿದ್ದು, ಈ ಹಿಂದೆ ಮಧುರೈ ಹಾಗೂ ಕನ್ಯಾಕುಮಾರಿಯಲ್ಲಿ ಜಿ.ಐ ಮಹೋತ್ಸವ ನಡೆದಿತ್ತು. ಇದೀಗ ಮೂರನೇ ಮಹೋತ್ಸವ ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ನಡೆಯುತ್ತಿದೆ. ಡಿ.8ರವರೆಗೂ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೂ ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಿಎಫ್‌ಟಿಆರ್‌ಐಗೆ ಬಂದು ಜಿ.ಐ ಮಹೋತ್ಸವ ಮೇಳ ವೀಕ್ಷಿಸಬಹುದಾಗಿದೆ.

ಹೊಯ್ಸಳ ಕರ್ನಾಟಕ ಸಂಘದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ

ಗಣಪತಿ ಸಚ್ಚಿದಾನಂದ ಶ್ರೀಗಳಿಂದ 9 ಲಕ್ಷ ದೇಣಿಗೆ



ಮೈಸೂರು, ಡಿ.5– ಮೈಸೂರಿನ ಕೆ.ಆರ್.ವನಂನಲ್ಲಿರುವ ಹೊಯ್ಸಳ ಕರ್ನಾಟಕ ಸಂಘದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸೋಲಾರ್ ಗ್ರಿಡ್ ಅಳವಡಿಕೆಗಾಗಿ ದತ್ತ ಜಯಂತಿ ಅಂಗವಾಗಿ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳವರು ಕೊಡುಗೆಯಾಗಿ 9 ಲಕ್ಷ ರೂ.ಗಳ ಚೆಕ್ ಅನ್ನು ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ. ಆರ್. ಸತ್ಯನಾರಾಯಣ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಆರ್. ಸತ್ಯನಾರಾಯಣ, ಸ್ವಾಮೀಜಿಯವರು ಮೊದಲಿನಿಂದಲೂ ಸಂಘವನ್ನು ಪೋಷಿಸುತ್ತಾ ಬಂದಿದ್ದಾರೆ. ಶ್ರೀಗಳ ಮಾತೃಶ್ರೀ ಮಾತಾ ಜಯಲಕ್ಷ್ಮಿ ಅಮ್ಮನವರ ಸ್ಮರಣಾರ್ಥ ಅನ್ನಪೂರ್ಣ ಮಂದಿರ ಕೊಡುಗೆ ನೀಡಿದ್ದಾರೆ. ಈಗ ಆಶೀರ್ವಾದ ಪೂರ್ವಕವಾಗಿ ಸೋಲಾರ್ ಗ್ರಿಡ್ ನೀಡುತ್ತಿರುವುದು ವಿದ್ಯಾರ್ಥಿಗಳಿಗೆ ಬಹಳ ಸಹಕಾರಿಯಾಗಲಿದೆ ಎಂದರು. ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ, ಆಶ್ರಮದ ವಿನಯ್ ಬಾಬು, ಸಂಘದ ಕಾರ್ಯದರ್ಶಿ ಎನ್.ಎಸ್.ಜಯಸಿಂಹ, ಸಹ ಕಾರ್ಯದರ್ಶಿ ಎಚ್.ಎ.ವಿಜಯ ಕುಮಾರ್, ಸಂಘದ ನಿರ್ದೇಶಕರಾದ ಬಿ.ಕೆ.ವೆಂಕಟೇಶ ಪ್ರಸಾದ್, ವೀಣಾ ಜಿ.ಆರ್, ಲಕ್ಷ್ಮಿ ಎಂ.ಆರ್. ಹಾಸ್ಟೆಲ್‌ನ ವಾರ್ಡನ್ ಎಚ್.ಕೆ. ನಾಗೇಶ್, ವಿಶ್ವಜಿತ್ ಮತ್ತಿತರರು ಹಾಜರಿದ್ದರು.

ಮಕ್ಕಳಾಗಿಲ್ಲವೆಂದು ಪತ್ನಿಗೆ ಕಿರುಕುಳ ನೀಡಿ ಸಾವಿಗೆ ಕಾರಣನಾದ ಪತಿಗೆ 10 ವರ್ಷ ಸಜೆ

ಮೈಸೂರು,ಡಿ.5– ನಿತ್ಯ ಕುಡಿದು ಬಂದು ಮಕ್ಕಳಾಗಿಲ್ಲವೆಂದು ಪತ್ನಿಗೆ ಚಿತ್ರಹಿಂಸೆ ನೀಡಿ, ಆಕೆಯ ಆತ್ಮಹತ್ಯೆಗೆ ಕಾರಣನಾದ ವ್ಯಕ್ತಿಗೆ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 10 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ಜಿಲ್ಲೆಯ ಸರಗೂರು ತಾಲೂಕು ತೆರಣಿಮುಂಟಿ ಗ್ರಾಮದ ಶಂಕರ, ತನ್ನ ಪತ್ನಿ ಪವಿತ್ರಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿ, ಆಕೆಯ ಆತ್ಮಹತ್ಯೆಗೆ ಕಾರಣವಾಗಿದ್ದು ಸಾಕ್ಷ್ಯಾಧಾರಗಳಿಂದ ಸಾಭೀತಾದ ಹಿನ್ನೆಲೆಯಲ್ಲಿ ಆತನಿಗೆ ಶಿಕ್ಷೆ ವಿಧಿಸಲಾಗಿದೆ.

ಮುಳ್ಳೂರು ಗ್ರಾಮದ ಮಲ್ಲೇಶ್ ಹಾಗೂ ಮಂಜುಳಾ ದಂಪತಿಯ ಮೂರನೇ ಪುತ್ರಿ ಪವಿತ್ರಾ ಅವರನ್ನು ತೆರಣಿಮುಂಟಿ ಗ್ರಾಮದ ಲಿಂಗಪ್ಪ ಅವರ ಪುತ್ರ ಶಂಕರನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ವಿವಾಹವಾಗಿ ಒಂದೂವರೆ ವರ್ಷ ದಂಪತಿ ಅನ್ಯೂನ್ಯವಾಗಿದ್ದರು. ನಂತರ ಶಂಕರ, ನಿತ್ಯ ಕುಡಿದು ಬಂದು ಪತ್ನಿ ಪವಿತ್ರಳೊಂದಿಗೆ ಗಲಾಟೆ ಮಾಡಲಾರಂಭಿಸಿದ್ದ. ಮದುವೆಯಾಗಿ ಎರಡು ವರ್ಷವಾದರೂ ಮಕ್ಕಳಾಗಲಿಲ್ಲ ಎಂದು ಮಾನಸಿಕ ಹಾಗೂ ದೈಹಿಕವಾಗಿ ಚಿತ್ರಹಿಂಸೆ ನೀಡುತ್ತಿದ್ದ. ಈ ವಿಚಾರವಾಗಿ ಹಿರಿಯರು ಬುದ್ಧಿವಾದ ಹೇಳಿದ್ದರೂ ತನ್ನ ಚಾಳಿ ನಿಲ್ಲಿಸದೆ ನೀನು ಚೆನ್ನಾಗಿಲ್ಲ, ನಿನಗೆ ಮಕ್ಕಳಾಗುವುದಿಲ್ಲ, ನೀನು ಇರುವುದಕ್ಕಿಂತ ಆತ್ಮಹತ್ಯೆ ಮಾಡಿಕೊಂಡು ಸಾಯಿ ಎಂದು ನಿಂದಿಸುತ್ತಿದ್ದ.

ಇದರಿಂದ ತೀವ್ರ ಮನನೊಂದಿದ್ದ ಪವಿತ್ರಾ, 2022ರ ಫೆ.24ರಂದು ಮನೆಯಲ್ಲಿದ್ದ ಲುಂಗಿಯಿಂದ ತೊಲೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಆ ವೇಳೆ ನನ್ನ ಸಾವಿಗೆ ಗಂಡನೇ ಕಾರಣ ಎಂದು ಆಕೆ ಬರೆದಿದ್ದ ಚೀಟಿ ಸಿಕ್ಕಿತ್ತು. ಈ ಸಂಬಂಧ ಪವಿತ್ರಳ ತಾಯಿ ನೀಡಿದ್ದ ದೂರಿನನ್ವಯ ಸರಗೂರು ಪೊಲೀಸ್ ಠಾಣೆಯ ಅಂದಿನ ಸಬ್‌ಇನ್ಸ್‌ಪೆಕ್ಟರ್ ಶ್ರವಣ್ ಎಸ್.ದಾಸರಡ್ಡಿ, ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಎನ್.ರೂಪಾ, ಶಂಕರ್ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ 10 ವರ್ಷ ಕಾರಾಗೃಹ ಶಿಕ್ಷೆ ಹಾಗೂ 75 ಸಾವಿರ ರೂ. ದಂಡ ವಿಧಿಸಿ, ತೀರ್ಪು ಪ್ರಕಟಿಸಿದ್ದಾರೆ.

ಸರ್ಕಾರದ ಪರವಾಗಿ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಹಿಂದಿನ ಸರ್ಕಾರಿ ಅಭಿಯೋಜಕ ಬಿ.ಈ. ಯೋಗೇಶ್ವರ ವಾದ ಮಂಡಿಸಿದ್ದರು ಎಂದು ಪ್ರಸ್ತುತ ಸರ್ಕಾರಿ ಅಭಿಯೋಜಕರಾಗಿರುವ ಎ.ಎನ್. ಮಧು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ 63ರಷ್ಟು ಭ್ರಷ್ಟಾಚಾರ ಹೇಳಿಕೆ ವಿವಾದ: ಸ್ಪಷ್ಟನೆ ಕೊಟ್ಟು ಬೇಸರ ವ್ಯಕ್ತಪಡಿಸಿದ ನ್ಯಾ. ಬಿ. ವೀರಪ್ಪ



ಬೆಂಗಳೂರು, ಡಿ.5– ಕರ್ನಾಟಕ ರಾಜ್ಯದಲ್ಲಿ ಶೇ. 63ರಷ್ಟು ಭ್ರಷ್ಟಾಚಾರವಿದೆ ಎಂಬ ಹೇಳಿಕೆ ಭಾರೀ ರಾಜಕೀಯ ವಿವಾದಕ್ಕೆ ಕಾರಣವಾದ ಬೆನ್ನಲ್ಲೇ ಈ ಹೇಳಿಕೆ ಬಗ್ಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಇಂದು ಸ್ಪಷ್ಟೀಕರಣ ನೀಡಿದ್ದಾರೆ.

ನಾನು ಯಾವ ಸರ್ಕಾರವನ್ನೂ ಗಮನದಲ್ಲಿಟ್ಟುಕೊಂಡು ಹೇಳಿಕೆ ನೀಡಿಲ್ಲ. ಇಂಡಿಯಾ ಕರೆಪ್ಷನ್ ಸರ್ವೆಯಲ್ಲಿ ಇದ್ದ ಮಾಹಿತಿಯನ್ನು ಮಾತ್ರ ಹೇಳಿದ್ದೇನೆ. 2019 ರಲ್ಲಿ ನಡೆದಿದ್ದ ಸರ್ವೆಯ ಪ್ರಕಾರ ಆಗ ಶೇ. 63ರಷ್ಟು ಭ್ರಷ್ಟಾಚಾರ ಇದೆ ಎಂದು ವರದಿಯಾಗಿತ್ತು. ನಾನು ಅದನ್ನು ಮಾತ್ರ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ನನ್ನ ಹೇಳಿಕೆಯನ್ನು ತಿರುಚಲಾಗಿದೆ. ರಾಜಕೀಯ ನಾಯಕರು ಇದನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ. ನನ್ನ ಹೇಳಿಕೆಯನ್ನು ಈ ರೀತಿ ಬಳಕೆ ಮಾಡಿಕೊಂಡಿರುವುದು ನನಗೆ ನಿಜಕ್ಕೂ ನೋವು ತಂದಿದೆ. ಆರಂಭದಿಂದಲೂ ಎಲ್ಲಾ ಸರ್ಕಾರಗಳೂ ಭ್ರಷ್ಟಾಚಾರದಲ್ಲಿ ಇವೆ. ನಾನು ಯಾವುದೇ ಒಂದು ನಿರ್ದಿಷ್ಟ ಸರ್ಕಾರ ಎಂದು ಗುರಿಯಾಗಿಸಿ ಹೇಳಿಲ್ಲ. ನನ್ನ ಹೇಳಿಕೆಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಬೇಡಿ ಎಂದು ರಾಜಕಾರಣಿಗಳಲ್ಲಿ ಕೇಳಿಕೊಳ್ಳುತ್ತೇನೆ ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಮನವಿ ಮಾಡಿದ್ದಾರೆ.

ಕೋರ್ಟ್ ಕಟಕಟೆಯಲ್ಲೇ ಕುಸಿದ ಕಕ್ಷಿದಾರ; ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದ ನ್ಯಾಯಾಧೀಶರು!

ಮೈಸೂರಿನ ಕೋರ್ಟ್‌ನಲ್ಲಿ ನಡೆದ ಘಟನೆ



ಹರೀಶ್ ಸಿಂಗ್

ಮೈಸೂರು ಡಿ.5(ಆರ್‌ಕೆ)– ಪ್ರಕರಣವೊಂದರ ವಿಚಾರಣೆ ವೇಳೆ ಕಟಕಟೆಯಲ್ಲೇ ಕುಸಿದು ಬಿದ್ದ ಕಕ್ಷಿದಾರರೊಬ್ಬರನ್ನು ನ್ಯಾಯಾಧೀಶರೇ ತಮ್ಮ ಕಾರಿನಲ್ಲಿ ಕರೆದೊಯ್ದು ಆಸ್ಪತ್ರೆಗೆ ಸೇರಿಸಿ ಮಾನವೀಯತೆ ಮೆರೆದ ಘಟನೆ ಗುರುವಾರ ಮೈಸೂರು ಕೋರ್ಟ್‌ನಲ್ಲಿ ನಡೆದಿದೆ.

ಮೈಸೂರಿನ ಚಾಮರಾಜಪುರಂನ ಕೃಷ್ಣರಾಜ ಬುಲೇವಾರ್ಡ್ ನ್ಯಾಯಾಲಯ ಸಂಕೀರ್ಣದ 6ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಹೆಚ್.ಜಿ. ಹರೀಶ್‌ಸಿಂಗ್, ಕಕ್ಷಿದಾರರ ಆಸ್ಪತ್ರೆಗೆ ದಾಖಲಿಸಲು ನೆರವಾದವರು. ಅವರ ಈ ಕಾರ್ಯಕ್ಕೆ ಇತರ ನ್ಯಾಯಾಧೀಶರು, ನ್ಯಾಯವಾದಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಶ್ಲಾಘಿಸಿದ್ದಾರೆ.

ವಿವರ: ಗುರುವಾರ ಮಧ್ಯಾಹ್ನ ಸುಮಾರು 1 ಗಂಟೆಯಲ್ಲಿ ಸಾಕ್ಷಿ ವಿಚಾರಣೆ ವೇಳೆ ಕಟಕಟೆಯಲ್ಲಿ ನಿಂತಿದ್ದ ವ್ಯಕ್ತಿ ದಿಢೀರ್ ಕುಸಿದು ಬಿದ್ದರು. ಆ ಕ್ಷಣ ಅಲ್ಲಿದ್ದವರೆಲ್ಲರೂ ಗಾಬರಿಗೊಳಗಾದರು. ಅದನ್ನು ಗಮನಿಸಿದ ನ್ಯಾಯಾಧೀಶರಾದ ಹರೀಶ್ ಸಿಂಗ್, ನ್ಯಾಯಾಲಯದ ಆರೋಗ್ಯ ಕೇಂದ್ರ ವೈದ್ಯರನ್ನು ಕರೆಸಿ ತಪಾಸಣೆ ಮಾಡಿಸಿದಾಗ ಆತನಿಗೆ ವಿದುಳು ಪಾರ್ಶ್ವವಾಯು ಉಂಟಾಗಿರುವ ಸಾಧ್ಯತೆಯಿದೆ ಎಂಬುದು ತಿಳಿದು ಬಂದಿದೆ. ಸಮಯ ಪ್ರಜ್ಞೆ ಮೆರೆದ ನ್ಯಾಯಾಧೀಶರು ತಕ್ಷಣವೇ ಕೆಲ ವಕೀಲರು ಹಾಗೂ ಸಿಬ್ಬಂದಿಯ ನೆರವಿನಿಂದ ತಮ್ಮ ಕಾರಿನಲ್ಲೇ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿ, ತುರ್ತು ಚಿಕಿತ್ಸೆಗೆ ನೆರವಾದರು.

ನ್ಯಾಯಾಧೀಶ ಹರೀಶ್‌ಸಿಂಗ್ ಅವರ ಈ ಮಾನವೀಯ ನಡೆ ಹಾಗೂ ಸಮಯ ಪ್ರಜ್ಞೆಗೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ವಕೀಲ ಪ್ರತಾಪ್ ಮೂರ್ತಿ ಹಾಗೂ ಇತರರು ಪ್ರಶಂಸೆ ವ್ಯಕ್ತಪಡಿಸಿ, ಅವರ ಗುಣಗಾನ ಮಾಡಿದ್ದಾರೆ.


ಕೆಲ ವರ್ಷಗಳ ಹಿಂದೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಬಂದಿದ್ದ ವ್ಯಕ್ತಿಯೋರ್ವ ಹೀಗೆ ಕುಸಿದು ಬಿದ್ದು ಅವರ ಕಿವಿ, ಮೂಗಿನಿಂದ ರಕ್ತಸ್ರಾವವಾಗಿ ಪ್ರಜ್ಞಾಹೀನರಾಗಿದ್ದ ವೇಳೆ ವಕೀಲರು ತಕ್ಷಣ 108 ಆಂಬುಲೆನ್ಸ್ ಕರೆಸಿ, ಆಸ್ಪತ್ರೆಗೆ ಕರೆದೊಯ್ಯುವಲ್ಲಿ ನೆರವಾಗಿದ್ದರು. ಮತ್ತೊಂದು ಪ್ರಕರಣದಲ್ಲಿ 3ನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಆರೋಪಿಯೋರ್ವ ಕುಸಿದು ಬಿದ್ದಾಗ ನ್ಯಾಯಾಧೀಶರಾದ ದಮಯಂತಿ ಅವರು ವಕೀಲರ ನೆರವಿನೊಂದಿಗೆ ಆತನನ್ನು ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಚಾಮರಾಜ ಕ್ಷೇತ್ರದ ಆಶ್ರಯ ಯೋಜನೆಗೆ ಕಾಯ್ದಿಟ್ಟ ಭೂಮಿ ಶೀಘ್ರ ಪಾಲಿಕೆಗೆ ಹಸ್ತಾಂತರಿಸಿ

● ಅಧಿಕಾರಿಗಳಿಗೆ ಶಾಸಕ ಹರೀಶ್‌ಗೌಡರ ಸೂಚನೆ ● ಎರಡು ದಶಕದಿಂದಲೂ ನೆನೆಗುದಿಗೆ ಬಿದ್ದಿರುವ ಯೋಜನೆಗೆ ಜೀವ ತುಂಬಿದ ಶಾಸಕರು

ಮೈಸೂರು,ಡಿ.5– ಚಾಮರಾಜ ಕ್ಷೇತ್ರ ಆಶ್ರಯ ಯೋಜನೆಗಳಿಗೆ ವಿವಿಧೆಡೆ ಕಾಯ್ದಿರಿಸಿರುವ ಭೂಮಿ, ಶೀಘ್ರ ಪಾಲಿಕೆಗೆ ಹಸ್ತಾಂತರವಾಗಬೇಕು ಎಂದು ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಶುಕ್ರವಾರ ಚಾಮರಾಜ ಕ್ಷೇತ್ರದ ಆಶ್ರಯ ವಸತಿ ಸಮಿತಿ ಸಭೆ ನಡೆಸಿದ ಅವರು, ಹಂಚ್ಯಾ ಗ್ರಾಮ, ಬಂಡೀಪಾಳ್ಯ, ಹೆಬ್ಬಾಳು, ಶ್ರೀರಾಂಪುರ ಸರ್ವೆ ನಂಬರ್ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಗಳಿಗೆ ಕಾಯ್ದಿರಿಸಿರುವ ಭೂಮಿಯನ್ನು ಪಾಲಿಕೆಗೆ ಹಸ್ತಾಂತರಿಸುವ ಪ್ರಕ್ರಿಯೆ ವಿಳಂಬವಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರು: ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಅಧ್ಯಕ್ಷತೆಯಲ್ಲಿ ಕ್ಷೇತ್ರದ ಆಶ್ರಯ ವಸತಿ ಸಮಿತಿ ಸಭೆ ನಡೆಯಿತು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ತಹಶೀಲ್ದಾರ್ ಮಹೇಶ್, ಪಾಲಿಕೆ ಉಪ ಆಯುಕ್ತ ದಾಸೇಗೌಡ, ಸಮಿತಿ ಸದಸ್ಯರು ಇನ್ನಿತರ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮೈಸೂರು ತಾಲೂಕು ಹಂಚ್ಯಾ ಗ್ರಾಮದ ಸರ್ವೆ ನಂಬರ್ 65ರ ವ್ಯಾಪ್ತಿಯ 23 ಎಕರೆ ಜಮೀನನ್ನು ಚಾಮರಾಜ ಕ್ಷೇತ್ರದ ಆಶ್ರಯ ವಸತಿ ಯೋಜನೆಗೆ ಕಾಯ್ದಿರಿಸಲಾಗಿದೆ. ಅಲ್ಲಿ ಜಿ+3 ಮಾದರಿಯ (1704) ಗುಂಪು ಮನೆಗಳನ್ನು ನಿರ್ಮಿಸಲು ಪರಿಷ್ಕೃತ ಡಿಪಿಆರ್ ಸಿದ್ದಪಡಿಸಲು 2024ರ ಅಕ್ಟೋಬರ್ 28ರ ಆಶ್ರಯ ವಸತಿ ಸಮಿತಿ ಸಭೆಯಲ್ಲಿ ಸೂಚಿಸಲಾಗಿತ್ತು. ಆದರೆ ವರ್ಷ ಕಳೆದರೂ ಈ ಬಗ್ಗೆ ಯಾವುದೇ ಕ್ರಮ ವಹಿಸಿಲ್ಲ ಎಂದು ಪಾಲಿಕೆ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಶಾಸಕರು, ಪ್ರಸಕ್ತ ತಿಂಗಳಾಂತ್ಯದೊಳಗೆ ಡಿಪಿಆರ್ ಸಿದ್ಧಪಡಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ತಾಕೀತು ಮಾಡಿದರು.

ಕಸಬಾ ಹೋಬಳಿ, ಬಂಡಿಪಾಳ್ಯ ಸರ್ವೆ ನಂಬರ್ 7ರಲ್ಲಿ ಲಭ್ಯವಿರುವ 6 ಎಕರೆ ಸರ್ಕಾರಿ ಜಮೀನನ್ನು ಆಶ್ರಯ ವಸತಿ ಯೋಜನೆಯಡಿ ಮಂಜೂರು ಮಾಡಿ, ಹಸ್ತಾಂತರಿಸುವಲ್ಲಿ ವಿಳಂಬ ಮಾಡಬಾರದು. ಹೆಬ್ಬಾಳು ಸ.ನಂ.201 ಹಾಗೂ ಶ್ರೀರಾಂಪುರ ಸ.ನಂ. 181 ರಲ್ಲಿ ಲಭ್ಯವಿರುವ ಜಮೀನನ್ನೂ ಅಳತೆ ಮಾಡಿಸಿ, ನಕ್ಷೆ ಹಾಗೂ ಅಗತ್ಯ ಕಂದಾಯ ದಾಖಲೆಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ವಸತಿ ಯೋಜನೆಗಾಗಿ ಕಾಯ್ದಿರಿಸಿ, ಈ ತಿಂಗಳ ಅಂತ್ಯದೊಳಗೆ ಹಸ್ತಾಂತರಿಸಬೇಕು ಎಂದು ತಹಶೀಲ್ದಾರ್ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸೂಚನೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್, ಬಂಡೀಪಾಳ್ಯ ಸರ್ವೆ ನಂಬರ್ 7ರ ಭೂಮಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ಈಗಾಗಲೇ ಸರಿಪಡಿಸಿದ್ದು, ಎರಡು ದಿನದಲ್ಲೇ ಪಾಲಿಕೆಗೆ ಹಸ್ತಾಂತರ ಮಾಡಲಾಗುವುದೆಂದು ತಿಳಿಸಿದರು. ಈ ವೇಳೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರೂ, ಆಶ್ರಯ ವಸತಿ ಯೋಜನೆಗೆ ಮಂಜೂರಾಗಿರುವ ಭೂಮಿಯನ್ನು ಪಾಲಿಕೆಗೆ ಹಸ್ತಾಂತರಿಸುವಲ್ಲಿ ವಿಳಂಬವಾಗದಂತೆ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನ್ಯೂ ಕಾಂತರಾಜ ಅರಸು ರಸ್ತೆ ಅಗಲೀಕರಣಕ್ಕಾಗಿ ಬೋಗಾದಿ ಆಶ್ರಯ ಬಡಾವಣೆಯ 33 ಮನೆ/ನಿವೇಶನವನ್ನು ಬಳಸಿಕೊಂಡಿದ್ದು, ಆ ಫಲಾನುಭವಿಗಳಿಗೆ 20 ವರ್ಷಗಳಿಂದ ಪ್ರಾಧಿಕಾರದಿಂದ ಪರಿಹಾರವಾಗಿ ನಿವೇಶನ ಹಂಚಿಕೆ ಮಾಡದಿರುವುದು ವಿಷಾಧನೀಯ. ಈ ಬಗ್ಗೆ ಪ್ರಾಧಿಕಾರದ ಕಾರ್ಯದರ್ಶಿ ಗಮನಕ್ಕೆ ತಂದು, ಶೀಘ್ರ ಸಮಸ್ಯೆ ಬಗೆಹರಿಸಬೇಕು ಎಂದು ತಿಳಿಸಿದರು.

2002–2003ನೇ ಸಾಲಿನಲ್ಲಿ ಅಯ್ಯಜಯ್ಯನಹುಂಡಿ ಸರ್ವೆ ನಂಬರ್ 17ರ 10 ಎಕರೆ ಜಮೀನಲ್ಲಿ 264 ನಿವೇಶನ ಮತ್ತು ಕೇರ್ಗಳ್ಳಿ ಸರ್ವೆ ನಂ.58ರ 5 ಎಕರೆ ಜಮೀನಲ್ಲಿ 214 ನಿವೇಶನ ರಚಿಸಿ ಒಟ್ಟು 478 ಫಲಾನುಭವಿಗಳನ್ನು ಆಯ್ಕೆ ಮಾಡಿ, ಲಾಟರಿ ಮೂಲಕ ನಿವೇಶನಗಳ ನಂಬರ್ ನೀಡಲಾಗಿದೆ. ಆದರೆ ಆ ಜಾಗವು ಕೆರೆಯ ಸ್ವರೂಪವಾಗಿರುವುದರಿಂದ ಮನೆ ನಿರ್ಮಿಸಿಕೊಂಡು ವಾಸಿಸಲು ಯೋಗ್ಯವಾಗಿ ಉಳಿದಿಲ್ಲ. ಹಾಗಾಗಿ ಆ 478 ಫಲಾನುಭವಿಗಳು ಹಾಗೂ ಶ್ರೀರಾಂಪುರ ಸ.ನಂ.181 ರ ಆಶ್ರಯ ಬಡಾವಣೆಯಲ್ಲಿ 102 ನಿರಾಶ್ರಿತರನ್ನು ಹಂಚ್ಯ ಗ್ರಾಮದಲ್ಲಿ ನಿರ್ಮಿಸಲಾಗುವ ಜಿ+3 ಮಾದರಿಯ(1704) ಗುಂಪು ಮನೆಗಳ ಹಂಚಿಕೆ ವೇಳೆ ಪರಿಗಣಿಸಲಾಗುವುದು ಎಂದು ಭರವಸೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕುಕ್ಕರಹಳ್ಳಿಯಲ್ಲಿ 94–95ನೇ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ಶತಾಬ್ದಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದ್ದು, ಸ್ಥಳ ಪರಿಶೀಲಿಸಿ, ಸಮಗ್ರ ಮಾಹಿತಿ ಪಡೆದು, ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿತ್ತಾದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಸಂಬಂಧ ಪಾಲಿಕೆಯಲ್ಲಿ ದಾಖಲೆಗಳು ಲಭ್ಯವಿಲ್ಲ, ಹಂಚಿಕೆ ಪ್ರಕ್ರಿಯೆ ಆಶ್ರಯ ವಸತಿ ಯೋಜನೆಯಡಿ ನಡೆದಿರುವುದಿಲ್ಲವಾದರೂ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, 13 ದಲಿತ ಕುಟುಂಬಗಳಿಗೆ ಹಕ್ಕುಪತ್ರ ನೀಡಲು ಅಗತ್ಯ ಕ್ರಮವಹಿಸುವಂತೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರಿಗೆ ಸೂಚಿಸಿದರು.

ಸಿಎನ್‌ಸಿಯಿಂದ ಪುತ್ತರಿ ನಮ್ಮೆ ಆಚರಣೆ



ಸಿಎನ್‌ಸಿ ಅಧ್ಯಕ್ಷ ನಾಚಪ್ಪ ನೇತೃತ್ವದಲ್ಲಿ ಪುತ್ತರಿ ನಮ್ಮೆಯನ್ನು ಸಂಭ್ರಮದಿಂದ ಆಚರಿಸಲಾಯಿತು

ಮಡಿಕೇರಿ, ಡಿ.5–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ವತಿಯಿಂದ 32ನೇ ಸಾರ್ವತ್ರಿಕ 'ಪುತ್ತರಿನಮ್ಮೆ'ಯನ್ನು ಬಿಳೂರು ಗ್ರಾಮದಲ್ಲಿ ಆಚರಿಸಲಾಯಿತು. ಬಿಳೂರು ಗ್ರಾಮದ ಕಾಂಡೇರ ಸುರೇಶ್ ಭತ್ತದ ಗದ್ದೆಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ನೇತೃತ್ವದಲ್ಲಿ ಕದಿರು ತೆಗೆಯುವ ಮೂಲಕ ಪುತ್ತರಿ ನಮ್ಮೆಯನ್ನು ಸಂಭ್ರಮದಿಂದ ಆಚರಿಸಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು.

ದುಡಿಕೊಟ್ಟ್–ಪಾಟ್ ಮೂಲಕ ಗದ್ದೆಗೆ ಮೆರವಣಿಗೆಯಲ್ಲಿ ತೆರಳಿ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಕದಿರು ತೆಗೆಯಲಾಯಿತು. ಕೊಡವ ಆಟ್–ಪಾಟ್ ನಡೆಯಿತು. ಅಂತಿಮವಾಗಿ ಮಾನವ ಸರಪಳಿ ಮೂಲಕ ಕೊಡವ ಲ್ಯಾಂಡ್, ವಿಶ್ವ ರಾಷ್ಟ್ರ ಸಂಸ್ಥೆಯ ಘೋಷಣೆಯ ಪ್ರಕಾರ ಅತ್ಯಂತ ಸಣ್ಣ ಪ್ರಾಚೀನ ಬುಡಕಟ್ಟಾದ ಕೊಡವರಿಗೆ ಅಂತಾರಾಷ್ಟ್ರೀಯ ಕಾನೂನಿನಡಿಯಲ್ಲಿ ಭದ್ರತೆ ಮತ್ತು ರಾಜ್ಯಾಂಗ ಖಾತ್ರಿಗಾಗಿ ಸೂರ್ಯ–ಚಂದ್ರ, ಜಲದೇವಿ ಕಾವೇರಿ, ಸಂವಿಧಾನ ಮತ್ತು ಗುರು–ಕಾರೋಣರ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಎನ್.ಯು.ನಾಚಪ್ಪ ಮಾತನಾಡಿ, ನಮ್ಮ ಪೂರ್ವಜರು ಈಗಾಗಲೇ ಅಲಿಖಿತ, ಮೌಖಿಕ ಕೊಡವ ಜಾನಪದ, ಕಾನೂನು ವ್ಯವಸ್ಥೆಗಳು ಮತ್ತು ನಮ್ಮ ಆಚರಣೆಗಳನ್ನು ಬಹಳ ಹಿಂದೆಯೇ ರೂಪಿಸಿದ್ದಾರೆ. ಇದು ಪೀಳಿಗೆಯಿಂದ ಇಂದಿನವರೆಗೆ ನಮಗೆ ರವಾನಿಸಲ್ಪಟ್ಟಿದೆ. ಅದರಂತೆ ನಮ್ಮ ಹಿರಿಯರು ಹುಣ್ಣಿಮೆಯ ಚಕ್ರದಂತೆ ಹಬ್ಬಗಳನ್ನು ನಿರ್ಧರಿಸುತ್ತಾರೆ. ಕೊಡವರು ತಾವೇ ತಮ್ಮ ಜನಪದ ಆಚರಣೆಗಳನ್ನು ನಿರ್ಧರಿಸಿ ಪ್ರಚಾರ ಮಾಡುತ್ತಾರೆ ಎಂದು ಪ್ರತಿಪಾದಿಸಿದರು.

ಕಲಿಯಂಡ ಮೀನಾ ಪ್ರಕಾಶ್, ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ್, ಬೇಪಡಿಯಂಡ ದಿನು, ಅರೆಯಡ ಗಿರೀಶ್, ನಂದೆಟ್ಟಿರ ರವಿ ಸುಬ್ಬಯ್ಯ, ಚಂಬಂಡ ಬೊಟ್ಟಂಗಡ ಗಿರೀಶ್, ಅಪ್ಪೆಂಗಡ ಮಾಲೆ ಪೂಣಚ್ಚ, ಚೊಕ್ಕಂಡ ಕಟ್ಟಿ ಪಳಂಗಪ್ಪ, ಪಾರ್ವಂಗಡ ನವೀನ್, ಜಮ್ಮಡ ಮೋಹನ್, ಮದ್ರೀರ ಕರುಂಬಯ್ಯ, ಆದೇಂಗಡ ರಾಣ ಬೋಪಣ್ಣ, ಆದೇಂಗಡ ಸಾಬು ಕಾಳಪ್ಪ, ಕಾಂಡೇರ ಜಿಮ್ಮಿ ಉತ್ತಪ್ಪ ಪಾಲ್ಗೊಂಡಿದ್ದರು.

ಕೊಡವ ಹಗ್ಗ ಜಗ್ಗಾಟ ಸ್ಪರ್ಧೆ ಲೋಗೋ ಬಿಡುಗಡೆ



ಕೊಡವ ಕುಟುಂಬಗಳ ನಡುವಿನ ಹಗ್ಗ ಜಗ್ಗಾಟ ಸ್ಪರ್ಧೆ ಲೋಗೋ ಬಿಡುಗಡೆಗೊಳಿಸಲಾಯಿತು.

ನಾಪೋಕ್ಲು, ಡಿ.5 (ದುಗ್ಗಳ)–ಕೊಡವ ಕುಟುಂಬಗಳಲ್ಲಿ ಕ್ರೀಡಾ ಸ್ಫೂರ್ತಿ ಏರುಗತಿಯಲ್ಲಿದ್ದು ವರ್ಷದಿಂದ ವರ್ಷಕ್ಕೆ ಹಾಕಿ, ಕ್ರಿಕೆಟ್, ಹಗ್ಗ ಜಗ್ಗಾಟ ಸೇರಿದಂತೆ ವಿವಿಧ ಕ್ರೀಡೆಗಳು ಕೊಡಗಿನಲ್ಲಿ ಜನಪ್ರಿಯತೆ ಪಡೆದುಕೊಳ್ಳುತ್ತಿವೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಇಲ್ಲಿನ ಕೊಡವ ಸಮಾಜದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಸಭಾಂಗಣದಲ್ಲಿ ಶುಕ್ರವಾರ ಕೊಡವ ಟಗ್ ಆಫ್ ವಾರ್ ಅಕಾಡೆಮಿಯ ಮಾನ್ಯತೆ ಪಡೆದ ಕೊಡವ ಕುಟುಂಬಗಳ ನಡುವಿನ ಹಗ್ಗ ಜಗ್ಗಾಟ ಸ್ಪರ್ಧೆ–2026ರ ಚಿನ್ಹೆ(ಲೋಗೋ) ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇಲ್ಲಿ ಹಾಕಿ ಕ್ರೀಡೆ ಗಿನ್ನೆಸ್ ದಾಖಲೆ ಮಾಡಿದೆ. ಅದರಂತೆ ಹಗ್ಗಜಗ್ಗಾಟ ಕ್ರೀಡೆಯು ಕೂಡ ದಾಖಲೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಕ್ರೀಡಾಕೂಟದ ಯಾಂತಮ್(ಹಾಡು) ಬಿಡುಗಡೆಗೊಳಿಸಿ ಪಂಜಾಬ್ ಬಿಟ್ಟರೆ ಕೊಡಗು ಕ್ರೀಡೆಯಲ್ಲಿ ಪ್ರಸಿದ್ಧಿ ಪಡೆದಿದೆ ಇಲ್ಲಿನ ಕೊಡವ ಕುಟುಂಬಗಳ ನಡುವಿನ ಹಾಕಿ, ಕ್ರಿಕೆಟ್, ಹಗ್ಗಜಗ್ಗಾಟ ಕ್ರೀಡೆಗಳು ಜನಪ್ರಿಯ. ಕ್ರೀಡೆಯಿಂದ ಮನಶಾಂತಿ, ಆರೋಗ್ಯ ಲಭಿಸುತ್ತದೆ. ಕ್ರೀಡೆಯಿಂದಾಗಿ ಯುವಜನರು ಭವಿಷ್ಯ ಕಂಡುಕೊಂಡಿದ್ದಾರೆ ಎಂದರು.

ಎಸ್.ಪಿ.ಮರಾಜನ್, ಸ್ಥಳೀಯ ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ ನಾಣಯ್ಯ, ಕೊಡವ ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷ ಪೊನ್ನೋಲತಂಡ ಕಿರಣ್ ಪೊನ್ನಪ್ಪ ಮಾತನಾಡಿದರು.

ಅಧ್ಯಕ್ಷತೆಯನ್ನು ಚೀಯಕಪೂವಂಡ ಕೇರ್ ಬಲಿ ಸಮಿತಿ ಅಧ್ಯಕ್ಷ ಕೆ ಬೋಪಣ್ಣ ವಹಿಸಿದ್ದು ಚೀಯಕಪೂವಂಡ ಕುಟುಂಬ ಸಮಿತಿಯ ಅಧ್ಯಕ್ಷ ಚೀಯಕ ಪೂವಂಡ ಎಂ. ಅಪ್ಪಚ್ಚು ಸ್ವಾಗತಿಸಿ ಪ್ರಾಸ್ತಾವಿಕ ನುಡಿಯನ್ನಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ಕಟ್ಟಿ ಮಂಜುನಾಥ್, ಕಾರ್ಯದರ್ಶಿ ಸಿ.ಎ. ನಾಚಪ್ಪ, ಜಂಟಿ ಕಾರ್ಯದರ್ಶಿ ಸಚಿನ್ ಮುತ್ತಪ್ಪ, ಖಜಾಂಚಿ ಸತೀಶ್ ದೇವಯ್ಯ, ಟೂರ್ನಮೆಂಟ್ ಡೈರೆಕ್ಟರ್ ಸಿ.ಡಿ. ನವೀನ್, ನಿರ್ದೇಶಕರಾದ ಪ್ರಕಾಶ್ ಮಂದಪ್ಪ, ಸುನಿಲ್ ಮಾಚಯ್ಯ, ಸಚಿನ್ ಪೂವಯ್ಯ ಪಾಲ್ಗೊಂಡಿದ್ದರು.

ವಯೋಭೇದವಿಲ್ಲದೆ ಕೋಲಾಟ ಆಡಿದ ಕೊಡವರು



ಮಡಿಕೇರಿ, ಡಿ.5–ಐತಿಹಾಸಿಕ ಹಿನ್ನೆಲೆ ಹೊಂದಿರುವ ನಗರದ ಕೋಟೆ ಆವರಣದಲ್ಲಿ ಮಡಿಕೇರಿ ಕೊಡವ ಸಮಾಜ, ಶ್ರೀ ಓಂಕಾರೇಶ್ವರ ದೇವಾಲಯ ಸಮಿತಿ ಮತ್ತು ಹೆಬ್ಬೆಟ್ಟಗೇರಿಯ ದೇಶತಕ್ಕ ಪಾಂಡೀರ ಕುಟುಂಬಸ್ಥರ ಸಂಯುಕ್ತ ಆಶ್ರಯದಲ್ಲಿ ಪುತ್ತರಿ ಕೋಲಾಟ ಕಾರ್ಯಕ್ರಮ ನಡೆಯಿತು.

ಪಾಂಡೀರ ಕುಟುಂಬಸ್ಥರಿಂದ ಪ್ರಾರಂಭಿಕವಾಗಿ ಪುತ್ತರಿ ಕೋಲಾಟ ನಡೆಯಿತು. ಕುಟುಂಬದ ಮಹಿಳಾ ಸದಸ್ಯರಿಂದ ನಡೆದ ಉಮ್ಮತ್ತಾಟ್, ಬೊಳಕಾಟ್ ನೃತ್ಯ ಪ್ರದರ್ಶನ ಗಮನ ಸೆಳೆಯಿತು. ಪುಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರು ಕೋಲಾಟ ಸೇರಿದಂತೆ ವಿವಿಧ ನೃತ್ಯ ಪ್ರಕಾರಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಕೋಲಾಟ, ಉಮ್ಮತ್ತಾಟ್, ಪರೆಯ ಕಳಿ ಮತ್ತಿತ್ತರ ಸಾಂಸ್ಕೃತಿಕ ಕಾರ್ಯಕ್ರಮಗಳು ಹಬ್ಬದ ಸಂಭ್ರಮಕ್ಕೆ ಸಾಕ್ಷಿಯಾದವು. ಸಮಾರೋಪ ಸಮಾರಂಭದಲ್ಲಿ ಕೊಡಗಿನ ಸಾಂಪ್ರದಾಯಿಕ ವಾಲಗಕ್ಕೆ ನೆರೆದಿದ್ದವರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಅನಾದಿ ಕಾಲದಿಂದಲೂ ಹುತ್ತರಿ ಕೋಲಾಟವನ್ನು ಆಚರಿಸಿಕೊಂಡು ಬರಲಾಗಿದೆ. ಕೊಡಗಿನ ಆಚಾರ, ವಿಚಾರ ಸಂಸ್ಕೃತಿ ಕಲೆಗಳು ಶಾಶ್ವತವಾಗಿ ಉಳಿಯಬೇಕು. ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಹೇಳಿದರು.

ಓಂಕಾರೇಶ್ವರ ದೇವಾಲಯ ಸಮಿತಿಯಿಂದ ಹುತ್ತರಿ ಕೋಲಾಟಕ್ಕೆ ನೀಡಲಾಗುವ ಗೌರವ ಧನವನ್ನು ಕನಿಷ್ಟ 20 ಸಾವಿರ ರೂ.ಗಳಿಗೆ ಹೆಚ್ಚಿಸುವಂತಾಗಬೇಕು. ಈ ಕುರಿತು ದೇವಾಲಯ ವ್ಯವಸ್ಥಾಪನಾ ಸಮಿತಿ ಕಾರ್ಯೋನ್ಮುಖವಾಗುವಂತೆ ಸಲಹೆ ನೀಡಿದರು.

ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ, ಕಾರ್ಯನಿರ್ವಹಣಾಧಿಕಾರಿ ದೇವರಾಜ್, ಮಾಜಿ ಅಧ್ಯಕ್ಷ ರಮೇಶ್ ಹೊಳ್ಳ, ಪ್ರಮುಖರಾದ ನಾಪಂಡ ರವಿ ಕಾಳಪ್ಪ, ರವಿ ಬಸಪ್ಪ, ಕೊಡವ ಸಮಾಜದ ಆಡಳಿತ ಮಂಡಳಿ ಪದಾಧಿಕಾರಿಗಳು, ಪೊಮ್ಮಕ್ಕಡ ಕೂಟದ ಸದಸ್ಯರು, ವಿವಿಧ ಕೊಡವ ಕೇರಿಗಳ ಅಧ್ಯಕ್ಷರು, ಪಾಂಡೀರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.



ಕುಶಾಲನಗರದಲ್ಲಿ ಪುತ್ತರಿ ನಮ್ಮೆ ಆಚರಣೆ



ಕೊಡವ ಸಮಾಜದಿಂದ ಪುತ್ತರಿ ನಮ್ಮೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕುಶಾಲನಗರ: ಪಟ್ಟಣದ ಕೊಡವ ಸಮಾಜದ ವತಿಯಿಂದ ಪುತ್ತರಿ ನಮ್ಮೆಯನ್ನು ಬಾಂಧವರು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದಲ್ಲಿ ನೆಲೆಸಿರುವ ಕೊಡವ ಬಾಂಧವರು ತಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆ ಧರಿಸಿ ಸಮಾಜದಲ್ಲಿ ರಾತ್ರಿ ಸೇರಿ ಫಲಾಹಾರ ಸೇವಿಸಿದರು. ಮೊದಲಿಗೆ ಸಮಾಜದ ಸಭಾಂಗಣದಲ್ಲಿ ನೆಲ್ಲಕ್ಕಿಯಡಿಯಲ್ಲಿ ಗುರುಕಾರೋಣರು ಮತ್ತು ದೇವರಿಗೆ ಭಕ್ತಿಪೂರ್ವಕ ಪೂಜೆ ಸಲ್ಲಿಸಲಾಯಿತು.

ಅರಳಿ, ಮಾವು, ಹಲಸು, ಕುಂಬಳಿ ಹಾಗೂ ಗೇರು ಮರಗಳ ಎಲೆಗಳಿಂದ ನೆರೆಕಟ್ಟುವ ಮೂಲಕ ವಿಧಿವಿಧಾನ ನೆರವೇರಿಸಿದರು. ನಂತರ ಸಿದ್ಧಪಡಿಸಿದ ಕುತ್ತಿಯನ್ನು ತೋಕ್ ಕತ್ತಿ, ದುಡಿಕೊಟ್ಟ್ ಪಾಟ್ ತಳಿಯತಕ್ಕಿ ಹಾಗೂ ಒಡ್ಡೋಲದೊಂದಿಗೆ ಗದ್ದೆಗೆ ಮೆರವಣಿಗೆ ಮೂಲಕ ತೆರಳಲಾಯಿತು. ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ಸಮಾಜದ ಗದ್ದೆಯಲ್ಲಿ ಪೂಜೆ ಸಲ್ಲಿಸಿ ಕದಿರು ತೆಗೆಯುವ ಮೂಲಕ ಸಾರ್ವತ್ರಿಕವಾಗಿ ಪುತ್ತರಿ ನಮ್ಮೆ ಆಚರಿಸಲಾಯಿತು.

ಪೊಲಿ ಪೊಲಿ ದೇವ ಪೊಲಿಯೋ ಬಾ ಎಂದು ಜೋರಾಗಿ ಕೂಗುತ್ತಾ ಹರ್ಷೋದ್ಗಾರ ಮಾಡಿದರು. ಈ ಸಂದರ್ಭ ಪಟಾಕಿ ಹಾಗೂ ಬಾಣ ಬಿರುಸುಗಳನ್ನು ಸಿಡಿಸಲಾಯಿತು. ನಂತರ ಧಾನ್ಯಲಕ್ಷ್ಮಿಯನ್ನು ಮೆರವಣಿಗೆ ಮೂಲಕ ತಂದು ಕದಿರನ್ನು ಸಮಾಜದಲ್ಲಿಟ್ಟು ಪೂಜೆ ಸಲ್ಲಿಸಿದರು ಗದ್ದೆಯಲ್ಲಿನ ಕದಿರು ತೆಗೆದು ಎಲ್ಲರಿಗೂ ವ್ಯವಸ್ಥಿತವಾಗಿ ವಿತರಣೆ ಮಾಡಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋದರು.

ಸಮಾಜದ ಅಧ್ಯಕ್ಷ ಮನುನಂಜುಂಡ, ಉಪಾಧ್ಯಕ್ಷ ಪುಲಿಯಂಡ ಚಂಗಪ್ಪ, ಕಾರ್ಯದರ್ಶಿ ಐಲಪಂಡ ಸಂಜು ಬೆಳ್ಳಿಯಪ್ಪ, ಸಹ ಕಾರ್ಯದರ್ಶಿ ಮೈಂದಪಂಡ ಜಗದೀಶ್, ಖಜಾಂಚಿ ಬೊಳ್ಳಚಂಡ ಮುತ್ತಣ್ಣ, ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಟಿಂಬರ್ ಲಾರಿ ಉರುಳಿ ಚಾಲಕ, ಕ್ಲೀನರ್‌ಗೆ ಗಾಯ



ಮಡಿಕೇರಿ,ಡಿ.5–ಸಿಲ್ವರ್ ಮರದ ನಾಟಾಗಳನ್ನು ಸಾಗಿಸುತ್ತಿದ್ದ ಟಿಂಬರ್ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಮಗುಚಿದ ಘಟನೆ ನಾಪೋಕ್ಲು ಮೂರ್ನಾಡು ಮುಖ್ಯ ರಸ್ತೆಯ ಹೊದ್ದೂರು ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ನಾಪೋಕ್ಲು ಕಡೆಯಿಂದ ಮೂರ್ನಾಡು ಮಾರ್ಗವಾಗಿ ಕೇರಳಕ್ಕೆ ನಾಟಗಳನ್ನು ಸಾಗಿಸುತ್ತಿದ್ದಾಗ ಹೊದ್ದೂರು ಗ್ರಾಮದ ಬಳಿಯ ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಟಿಂಬರ್ ಲಾರಿ ಪಲ್ಟಿಯಾಗಿದೆ. ಅಪಘಾತದಿಂದ 3 ವಿದ್ಯುತ್ ಕಂಬಗಳಿಗೆ ಹಾನಿಯಾಗಿ ವಿದ್ಯುತ್ ತಂತಿಗಳು ರಸ್ತೆಗೆ ಬಿದ್ದು ಕೆಲಕಾಲ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಮಾಹಿತಿ ಅರಿತು ಸ್ಥಳಕ್ಕೆ ಧಾವಿಸಿದ ಚೆಸ್ಕಾಂ ನಿಗಮ ಅಧಿಕಾರಿಗಳು, ಸಿಬ್ಬಂದಿ, ಪೊಲೀಸರು ಹಾಗೂ ಸಾರ್ವಜನಿಕರ ಸಹಕಾರದಿಂದ ರಸ್ತೆಯಲ್ಲಿದ್ದ ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು.

ಅಪಘಾತದಿಂದ ಲಾರಿಯ ಚಾಲಕ ಹಾಗೂ ಕ್ಲೀನರ್‌ಗೆ ಗಾಯಗಳಾಗಿದ್ದು, ಸ್ಥಳೀಯರು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಜ್ಜೇನು ದಾಳಿ : ಮೂವರು ಆಸ್ಪತ್ರೆಗೆ ದಾಖಲು

ಕುಶಾಲನಗರ: ಸಮೀಪದ ಕಣಿವೆ ಗ್ರಾಮದಲ್ಲಿ ಶುಕ್ರವಾರ ಹೆಜ್ಜೇನು ದಾಳಿಯಿಂದ ಮೂವರು ಗಾಯಗೊಂಡು ಪ್ರಾಣಾಪಾಯದಿಂದ ಪಾರಾದ ಘಟನೆ ನಡೆದಿದೆ.

ಸೋಮವಾರಪೇಟೆ ತಹಸೀಲ್ದಾರ್ ಕಚೇರಿ ಸಿಬ್ಬಂದಿ ಕಾರ್ತಿಕ್ ಕುಮಾರ್ ಹಾಗೂ ಅವರ ತಾಯಿ ಉಷಾ ಹಾಗೂ ಚಿಕ್ಕಪ್ಪ ಪ್ರಕಾಶ್ ಗಾಯಗೊಂಡಿದ್ದು, ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಾಗಿದ್ದಾರೆ. ಹುತ್ತರಿ ಅಂಗವಾಗಿ ಕಚೇರಿಗೆ ರಜೆ ಇದ್ದ ಕಾರಣ ಕಾರ್ತಿಕ್ ತನ್ನ ಕುಟುಂಬದವರೊಂದಿಗೆ ಬೆಳಗ್ಗೆ 11 ಗಂಟೆ ಸಮಯದಲ್ಲಿ ತೋಟಕ್ಕೆ ತೆರಳಿದ್ದರು. ದಿಢೀರನೇ ಗುಂಪು ಗುಂಪಾಗಿ ಧಾವಿಸಿದ ಹೆಜ್ಜೇನುಗಳು ಮೊದಲು ಕಾರ್ತಿಕ್ ಕುಮಾರ್ ಮೇಲೆ ದಾಳಿ ಮಾಡಿದವು. ತಕ್ಷಣವೇ ಕಿರುಚಿಕೊಂಡು ಕಾರಿನತ್ತ ಓಡಿ ಹೋಗಿ ರಕ್ಷಣೆ ಪಡೆಯಲು ಯತ್ನಿಸಿದರೂ ಹೆಜ್ಜೇನು ಅನತಿ ದೂರದಲ್ಲಿದ್ದ ಇವರ ತಾಯಿ ಉಷಾ ಹಾಗೂ ಚಿಕ್ಕಪ್ಪ ಅವರಿಗೂ ಕಚ್ಚಿ ಗಾಯಗೊಳಿಸಿದವು. ತಕ್ಷಣವೇ ತಾಯಿ ಮತ್ತು ಮಗ ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ಹೋಗಿ ವೈದ್ಯ ಡಾ.ಕೀರ್ತಿ ಕುಮಾರ್ ಮುಳ್ಳುಗಳನ್ನು ತೆಗೆದು ಸೂಕ್ತ ಚಿಕಿತ್ಸೆ ನೀಡಿದ್ದಾರೆ. ಆಸ್ಪತ್ರೆಗೆ ಧಾವಿಸಿದ ತಹಸೀಲ್ದಾರ್ ಕೃಷ್ಣಮೂರ್ತಿ, ಸಿಬ್ಬಂದಿ ಕಾರ್ತಿಕ್ ಕುಮಾರ್ ಆರೋಗ್ಯ ವಿಚಾರಿಸಿದರು. ಸಂಬಂಧಿ ಪ್ರಕಾಶ್ ಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಅಕ್ರಮ ಫೈರ್ ಕ್ಯಾಂಪ್



ಇಡೀ ರಾತ್ರಿ ರೀಲ್ಸ್ ನಡೆಸಿ ಅರಣ್ಯ ದಲ್ಲೇ ವಾಸ್ತವ್ಯ ಹೂಡಿದ್ದರು ಎಂದು ಹೇಳಲಾಗಿದೆ.

ಚಾಮರಾಜನಗರ, ಡಿ.5–ಬೆಂಗಳೂರು ಮೂಲದ ಇಬ್ಬರು ಪುಣಜನೂರು ವನ್ಯಜೀವಿ ವಲಯದ ಬೂದಿಪಡಗ ಶಾಖೆಯ ರಾಗಿಕಲ್ಲಮಡು ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಫೈರ್ ಕ್ಯಾಂಪ್ ನಡೆಸಿರುವುದು ತಡವಾಗಿ ಬೆಳಕಿಗೆ ಬಂದಿದ್ದು, ಇವರ ವಿರುದ್ಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿದೆ.

ಬೆಂಗಳೂರಿನ ಹನುಮಂತನಗರದ ನಿವಾಸಿ ಜಿ. ಹರ್ಷರಾಜ್ ಹಾಗೂ ಬ್ಯಾಟರಾಯನಪುರದ ಸತೀಶ್ ಕುಮಾರ್ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಅರಣ್ಯ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

ಆರೋಪಿತರಾದ ಹರ್ಷರಾಜ್ ಹಾಗೂ ಸತೀಶ್ ಕುಮಾರ್ ನ.30ರಂದು ಕೆಂಪು ಬಣ್ಣದ ಮಹೀಂದ್ರ ಥಾರ್(ಕೆಎ–03, ಎನ್‌ಡಬ್ಲ್ಯೂ–5577)ನಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯ ಪುಣಜನೂರು ವನ್ಯಜೀವಿ ವಲಯದ ಬೂದಿಪಡಗ ಶಾಖೆಯ ರಾಗಿಕಲ್ಲಮಡು ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ ಫೈರ್ ಕ್ಯಾಂಪ್ ನಡೆಸಿದ್ದಾರೆ. ಇದು ಸಾಲದೆಂಬಂತೆ ಇಡೀ ರಾತ್ರಿ ರೀಲ್ಸ್ ನಡೆಸಿ ಅರಣ್ಯ ದಲ್ಲೇ ವಾಸ್ತವ್ಯ ಹೂಡಿದ್ದರು ಎಂದು ಹೇಳಲಾಗಿದೆ.

ದೂರು ದಾಖಲಿಸಲು ಸಚಿವರ ಸೂಚನೆ : ಅರಣ್ಯದೊಳಗೆ ಅಕ್ರಮವಾಗಿ ಪ್ರವೇಶಿಸಿರುವ ಘಟನೆ ವಿಚಾರ ತಿಳಿದ ಕೂಡಲೇ ಅರಣ್ಯ ಸಚಿವ ಈಶ್ವರ್ ಖಂಡ್ರೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಸಚಿವರ ಸೂಚನೆ ಮೇರೆಗೆ ಅಧಿಕಾರಿಗಳು ಡಿ. 2ರಂದು ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಆಕ್ರೋಶ: ಅರಣ್ಯದೊಳಗೆ ಇಬ್ಬರು ಅಕ್ರಮ ಪ್ರವೇಶಿಸಿ, ಫೈರ್ ಕ್ಯಾಂಪ್ ನಡೆಸಿರುವ ಘಟನೆಗೆ ಜಿಲ್ಲೆಯ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳ ಅಥವಾ ಸಿಬ್ಬಂದಿ ಸಹಕಾರವಿಲ್ಲದೆ ಅರಣ್ಯದೊಳಗೆ ಪ್ರವೇಶಿಸಲು ಸಾಧ್ಯವಿಲ್ಲ. ಅಲ್ಲದೆ ಆರೋಪಿಗಳ ವಿರುದ್ಧ ಕೇವಲ ಪ್ರಕರಣ ದಾಖಲಾಗಿದೆಯೇ ಹೊರತು ಅವರನ್ನು ಬಂಧಿಸಿಲ್ಲ. ಮೇಲ್ನೋಟಕ್ಕೆ ಅರಣ್ಯ ಇಲಾಖೆಯ ವೈಫಲ್ಯ ಕಾಣುತ್ತಿದ್ದು, ಅತಿಕ್ರಮ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಕೂಡಲೇ ಆರೋಪಿಗಳನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ವನ್ಯಜೀವಿ ಪ್ರಿಯರು ಆಗ್ರಹಿಸಿದ್ದಾರೆ.

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ: ಎಚ್‌ಸಿಎಂ



ಸಚಿವ ಮಹದೇವಪ್ಪ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕೊಳ್ಳೇಗಾಲ,ಡಿ.5–ಮುಖ್ಯಮಂತ್ರಿ ಬದಲಾವಣೆ ಎಂಬ ಪ್ರಶ್ನೆಯೇ ಇಲ್ಲ, ನಾಯಕತ್ವ ಬದಲಾವಣೆಯಾಗುತ್ತೆ ಎಂಬುದೆಲ್ಲಾ ಕೇವಲ ಗೊಂದಲಗಳಷ್ಟೆ ಇಂತಹ ಪ್ರಸ್ತಾವನೆಯೇ ಇಲ್ಲ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹಾದೇವಪ್ಪ ಹೇಳಿದರು

ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಎಂಬುದೆಲ್ಲವೂ ಊಹಾಪೋಹ ಕಲ್ಪನೆಗಳು ಈ ಬಗ್ಗೆ ಸಾಕಷ್ಟು ಗೊಂದಲಗಳಿವೆ, ಆದರೆ ಇಲ್ಲಿ ಯಾವ ಬದಲಾವಣೆಗಳು ಇಲ್ಲ ಎಂದು ಸ್ಪಷ್ಟಪಡಿಸಿದರು.

ಎಬಿಸಿಡಿ ಗೊತ್ತಿಲ್ಲದವರು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ, ಸಂವಿಧಾನದ ಬಗ್ಗೆ ಅವರಿಗೇನೂ ಗೊತ್ತು ಎಂದು ಛಲವಾದಿ ನಾರಾಯಣಸ್ವಾಮಿ ಹೆಸರೇಳದೆ ಟೀಕಿಸಿದ ಅವರು, ಸಂವಿಧಾನ ರಕ್ಷಕರು ಯಾರು ಎಂಬುದು ರಾಜ್ಯದ ಜನತೆಗೆ ಗೊತ್ತಿದೆ ಎಂದರು. ದಲಿತರಿಗೆ ಸಿಎಂ ಹುದ್ದೆ ಬೇಕು ಎಂಬುದು ಕಾಲ ಬಂದಾಗ ಎಲ್ಲವೂ ಆಗುತ್ತೆ, ಆದರೆ ಈ ಕುರಿತು ಎಲ್ಲೆಂದರಲ್ಲಿ ಮಾತನಾಡಲು ಆಗಲ್ಲ, ಬೀದಿಯಲ್ಲಿ ನಿಂತು ಸಿಎಂ ಸ್ಥಾನ ಕೊಡಿ ಎಂದು ಮಾಧ್ಯಮದವರ ಮುಂದೆ ಕೇಳಲಾಗುತ್ತಾ ಎಂದು ಪ್ರಶ್ನಿಸಿದರು

ಶಾಸಕ ಎ.ಆರ್.ಕೃಷ್ಣಮೂರ್ತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ನಗರಸಭೆ ಮಾಜಿ ಅಧ್ಯಕ್ಷ ರಮೇಶ್, ರೇಖಾ ರಮೇಶ್, ಸ್ವಾಮಿ ನಂಜಪ್ಪ, ಆಲಹಳ್ಳಿ ತೋಟೇಶ್, ಆನಂದಮೂರ್ತಿ, ಸಿಗ್ ಬತ್ ಉಲ್ಲಾ, ಮಂಜುನಾಥ್, ರಾಘವೇಂದ್ರ, ಸಿದ್ದಾರ್ಥ, ಮಹದೇವಪ್ಪ, ಚೇತನ್ ದೊರೈರಾಜು, ಹೊಂಗನೂರು ಚೇತನ್ ಇನ್ನಿತರಿದ್ದರು. ಸಚಿವ ಮಹದೇವಪ್ಪ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಅಲ್ಪಸಂಖ್ಯಾತರ ವಸತಿ ಶಾಲೆ ನಿರ್ಮಾಣಕ್ಕೆ ಕ್ರಮ



ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಕೊಳ್ಳೇಗಾಲ, ಡಿ.5(ಎನ್‌ಎನ್)–ತಾಲೂಕಿನ ಕುರುಬನಕಟ್ಟೆಯಲ್ಲಿರುವ ಮುರಾರ್ಜಿ ಶಾಲೆ ಪಕ್ಕದಲಿರುವ 5 ಎಕರೆ ಜಾಗದಲ್ಲಿ ಮುರಾರ್ಜಿ ದೇಸಾಯಿ ಅಲ್ಪ ಸಂಖ್ಯಾತರ ವಸತಿ ಶಾಲೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದ್ದಾರೆ

ಶಿಕ್ಷಣ ಇಲಾಖೆ ಆರ್‌ಸಿಎಂ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಕಲೋತ್ಸವ, ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಾಗಲೆ ಅಲ್ಪಸಂಖ್ಯಾತರ ಶಾಲೆ ಮಂಜೂರಾತಿಯಿಂದಾಗಿ ಕ್ರೈಸ್ತರು, ಮುಸ್ಲಿಂ ಮತ್ತು ಬೌದ್ಧ ಧರ್ಮದ ಮಕ್ಕಳ ಕಲಿಕೆಗೆ ಪೂರಕವಾಗಿದ್ದು ಸದ್ಯಕ್ಕೆ ಈ ಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ತಹಸಿಲ್ದಾರ್ ಪರಿಶೀಲಿಸಿ ಶೀಘ್ರದಲ್ಲೆ ಜಾಗ ಮಂಜೂರು ಮಾಡಬೇಕೆಂದು ತಿಳಿಸಿದರು.

ಯಳಂದೂರಿನ ಆದರ್ಶ ಶಾಲೆ ಹೆಣ್ಣು ಮಕ್ಕಳು ಕಂಸಾಳೆ ನೃತ್ಯ ಕಲಿತು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ಸಾಧನೆಗೈದಿರುವುದು ಹೆಮ್ಮೆಯ ವಿಷಯ. 15 ಮಕ್ಕಳು ಮಧ್ಯ ಪ್ರದೇಶದ ಭೂಪಾಲ್‌ನಲ್ಲಿನ ಕಾರ್ಯಕ್ರಮಕ್ಕೆ ತೆರಳಿದ್ದಾರೆ. ಕಂಸಾಳೆ ಪುರುಷರು ಹೆಚ್ಚು ಕಲಿಯುವ ಕಲೆ, ಈ ಶಾಲೆ ಹೆಣ್ಣು ಮಕ್ಕಳು ಕಲಿತು ಪ್ರದರ್ಶನಕ್ಕೆ ಮುಂದಾಗಿರುವುದು ಸಂತಸಪಡುವ ವಿಷಯ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಂದ್ರು, ತಾಲೂಕು ಅಧ್ಯಕ್ಷ ರಾಜೇಂದ್ರ, ತಾಪಂ ಇಓ ಗುರು ಶಾಂತಪ್ಪ ಬೆಳ್ಳುಂಡಗಿ, ಬಿಇಓ ಮಂಜುಳಾ, ಬಿ.ಆರ್.ಸಿ ಮಹದೇವ ಕುಮಾರ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಕ್ಸಾಂಡರ್, ಪ್ರೌಢಶಾಲಾ ಮುಖ್ಯ ಶಿಕ್ಷಕ ವಿಶ್ವನಾಥ್, ಸಹಶಿಕ್ಷಕರ ಸಂಘ ಅಧ್ಯಕ್ಷ ಅಕ್ಬರ್, ಶ್ರೀಧರ್, ನೋಡಲ್ ಅಧಿಕಾರಿ ವಿಜಯ್ ಕುಮಾರ್, ಬುಕಾನಿ, ಬಸವರಾಜು, ಚಿಕ್ಕರಾಜು, ಹರೀಶ್, ದಿವಾಕರ್, ಇನ್ನಿತರರಿದ್ದರು.

ಶಿವಶಂಕರ್ ನಿಧನ



ಬೇಗೂರು, ಡಿ.5–ದೊಡ್ಡಹುಂಡಿ ಗ್ರಾಮದ ನಿವಾಸಿ ಶಿವಶಂಕರ್ (34) ಗುರುವಾರ ರಾತ್ರಿ ಅನಾರೋಗ್ಯ ದಿಂದ ನಿಧನರಾದರು. ಇವರು ಎಲ್.ಟಿ. ಫೈನಾನ್ಸ್ ಕಂಪನಿಯ ಮ್ಯಾನೇಜರ್ ಆಗಿದ್ದರು. ಇವರಿಗೆ ಪತ್ನಿ, ಪುತ್ರಿ, ತಂದೆ, ತಾಯಿ ಹಾಗೂ ತಮ್ಮ ಇದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಡೆಯಿತು.

ಇಂದು ಅಖಿಲ ಭಾರತ ಗೃಹರಕ್ಷಕದಳ ದಿನಾಚರಣೆ

ಚಾಮರಾಜನಗರ: ಅಖಿಲ ಭಾರತ ಗೃಹರಕ್ಷಕದಳ ದಿನಾಚರಣೆಯನ್ನು ಡಿ.6ರ ಬೆಳಿಗ್ಗೆ 11 ಗಂಟೆಗೆ ನಗರದ ಪೊಲೀಸ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಗೃಹರಕ್ಷಕದಳದ ಆಯ್ಕೆ ಸಮಿತಿ ಅಧ್ಯಕ್ಷರಾದ ಡಾ.ಬಿ.ಟಿ.ಕವಿತಾ ಉದ್ಘಾಟಿಸುವರು. ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಎಂ.ಎನ್. ಶಶಿಧರ ಪ್ರತಿಜ್ಞಾ ವಿಧಿ ಬೋಧಿಸುವರು. ಗೃಹರಕ್ಷಕದಳದ ಆಯ್ಕೆ ಸಮಿತಿ ಸದಸ್ಯರಾದ ಟಿ. ಜವರೇಗೌಡ, ಜಿಲ್ಲಾ ಸಶಸ್ತ್ರ ಪೊಲೀಸ್ ಮೀಸಲು ಪಡೆಯ ಪೊಲೀಸ್ ಉಪಾಧೀಕ್ಷಕ ಜಿ.ಆರ್.ಸೋಮಣ್ಣ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಗೃಹರಕ್ಷಕದಳದ ಆಯ್ಕೆ ಸಮಿತಿ ಸದಸ್ಯ ಎಸ್. ಚಂದ್ರಪಾಟೀಲ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಗೃಹರಕ್ಷಕದಳದ ಜಿಲ್ಲಾ ಸಮಾದೇಷ್ಟರಾದ ಎಸ್.ಜಿ. ಮಹಾಲಿಂಗ ಸ್ವಾಮಿ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕೊತ್ತಲವಾಡಿ, ಮಾದಲವಾಡಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ



ಕೊತ್ತಲವಾಡಿ ಗ್ರಾಮದಲ್ಲಿ ಪಶು ಆಸ್ಪತ್ರೆ ನೂತನ ಕಟ್ಟಡ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ.ಡಿ.5–ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ನಬಾರ್ಡ್ ಎನ್‌ಪಿಸಿಸಿ ನೆರವಿನಡಿ 50ಲಕ್ಷ ರೂ. ವೆಚ್ಚ ದಲ್ಲಿ ಪಶು ಆಸ್ಪತ್ರೆ ನೂತನ ಕಟ್ಟಡ, ಮಾದಲವಾಡಿ ಗ್ರಾಮದ ಬೋವಿ ಸಮಾಜದವರ ಬೀದಿಯಲ್ಲಿ ಎಸ್ಸಿಪಿ ಅನುದಾನ 30ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟ ರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಈ ಭಾಗದ ಜಾನುವಾರುಗಳಿಗೆ ಅನಾರೋಗ್ಯ ತಲೆದೋರಿದಾಗ ಸೂಕ್ತ ಚಿಕಿತ್ಸೆ ಒದಗಿಸಲು ಪಶು ಆಸ್ಪತ್ರೆ ನಿರ್ಮಿಸಿಕೊಡಬೇಕು ಎಂಬ ಒತ್ತಾಯ ಗ್ರಾಮಸ್ಥರಿಂದ ಕೇಳಿ ಬಂದ ಮೇರೆಗೆ ಕೊತ್ತಲವಾಡಿಗೆ ಪಶು ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ. ಮಾದಲವಾಡಿ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ನೆರವೇರಿಸಲಾಗಿದ್ದು, ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ, ಕುಡಿಯುವ ನೀರು, ಸಮುದಾಯ ಭವನ, ನಾಗರಿಕರ ಬೇಡಿಕೆಗೆ ಪೂರಕವಾಗುವಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಸಿಸಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡುವ ಮೂಲಕ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಗ್ರಾಪಂ ಉಪಾಧ್ಯಕ್ಷೆ ಚಂದ್ರಮ್ಮ, ಸದಸ್ಯರಾದ ಸತ್ಯಾನಂದಮೂರ್ತಿ, ಪ್ರಭುಸ್ವಾಮಿ, ಮೋಹನ್ ಕುಮಾರ್, ಗ್ರಾಮಸ್ಥರಾದ ಕೊತ್ತಲವಾಡಿ ಸೋಮಲಿಂಗಪ್ಪ, ಯಾನಗಳ್ಳಿ ಶಂಭಪ್ಪ, ತಾಪಂ ಮಾಜಿ ಅಧ್ಯಕ್ಷ ಶಾಂತಪ್ಪ, ಬಸವಣ್ಣ, ಶೇಖರಪ್ಪ, ಗೌಡಿಕೆ ರಾಜಶೇಖರ್, ನಾಗರಾಜು, ಮಲ್ಲೇಶ್ ಇಂಜಿನಿಯರ್ ಭೀಮ್ ಸಾಗರ್, ಪಿ.ಡಿ.ಓ ಪ್ರಕಾಶ್, ಮಾದಪ್ಪ ಇತರರು ಹಾಜರಿದ್ದರು.

ದೀಪವು ಮಾನವನ ಪರಿಶುದ್ಧತೆ ಹೆಚ್ಚಿಸಲಿ



ಚಾಮರಾಜನಗರ,ಡಿ.5–ದೀಪವು ಮಾನವನ ಪರಿಶುದ್ಧತೆ ಹೆಚ್ಚಿಸಿ, ಅರಿವಿನ ಬೆಳಕನ್ನು ಅರ್ಪಿಸುವ ಗುಣವನ್ನು ಬೆಳೆಸುತ್ತದೆ ಎಂದು ಶ್ರೀ ರಾಮಶೇಷ ಪಾಠಶಾಲೆಯ ಪ್ರಾಚಾರ್ಯ ಪ್ರದೀಪ್ ದೀಕ್ಷಿತ್ ತಿಳಿಸಿದರು.

ಶ್ರೀ ಪರಿಮಳ ರಾಮ ವಿದ್ಯಾ ಮಂದಿರದ ಆವರಣದಲ್ಲಿ ಜರುಗಿದ ದೀಪ ಪ್ರಜ್ವಲನೆಯಲ್ಲಿ ಮಾತನಾಡಿ, ಕಾರ್ತಿಕ ಮಾಸದಲ್ಲಿ ದೀಪ ಹಚ್ಚಿ ತಾಯಿ ಲಕ್ಷ್ಮಿಯನ್ನು ಆರಾಧಿಸುವ ಮೂಲಕ ಸಮಾಜದ ಸರ್ವರ ಹಿತವನ್ನು ಬಯಸುತ್ತೇವೆ. ದೇವತಾ ಕಾರ್ಯದಲ್ಲಿ ಪಾಲ್ಗೊಂಡು ಜೀವ ನವನ್ನು ಸಂತೋಷದಿಂದ ಅನುಭವಿಸೋಣ ಎಂದರು.

ಜೈಹಿಂದ್ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ಮಾತನಾಡಿ ಕಾರ್ತಿಕ ಮಾಸ ದೀಪದ ಮಾಸವಾಗಿದೆ. ದೀಪವು ಕತ್ತಲೆಯನ್ನು ಹೋಗಲಾಡಿಸಿ ಬೆಳಕು ನೀಡುತ್ತದೆ. ಹಾಗೆಯ ಆರೋಗ್ಯದ ಪ್ರತೀಕವಾಗಿದೆ. ಪರಿಸರ ಶುದ್ಧಿ ಹಾಗೂ ಮನಸ್ಸು ಶಾಂತವಾಗಲು ಬೆಳಕು ಬಹಳ ಮುಖ್ಯ. ದೀಪ ಅಹಂಕಾರವನ್ನು ಹೋಗಲಾಡಿಸುತ್ತದೆ. ಸಮಾಜಕ್ಕೆ ಸೇವೆ ಸಲ್ಲಿಸುವ ಗುಣ ಬೆಳೆಸುತ್ತದೆ ಎಂದರು.

ರೋಟರಿ ಸಂಸ್ಥೆಯ ಚೈತನ್ಯ ಹೆಗಡೆ ದೀಪೋತ್ಸವ ಕಾರ್ಯಕ್ರಮಕ್ಕೆ ಶುಭ ಕೋರಿ ಬಹುತೇಕ ಎಲ್ಲಾ ಕಡೆ ದೀಪೋತ್ಸವ ಆಚರಿಸುವ ಮೂಲಕ ಭಕ್ತಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಜನರು ಭಾರತೀಯ ಹಬ್ಬಗಳನ್ನು ಸಂತೋಷದಿಂದ ಆಚರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಚೇತನ್, ಮಾಣಿಕ್ ಚಂದ್, ಸಿ.ರವಿ, ಹಸಿರು ಪಡೆ ಸತೀಶ್, ಸುಮಕ್, ಶಮನ್, ಅಶ್ವಿನ್ ಇದ್ದರು. ಶ್ರೀ ಪರಿಮಳ ರಾಮ ವಿದ್ಯಾ ಮಂದಿರದ ಆವರಣದಲ್ಲಿ ದೀಪ ಪ್ರಜ್ವಲನೆ ನಡೆಯಿತು.

ಇಂದು ಜಿಲ್ಲೆಯ ವಿವಿದೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಹರದನಹಳ್ಳಿ, ಗುಂಡ್ಲುಪೇಟೆ ಮತ್ತು ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ಡಿ.6ರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಗುಂಡ್ಲುಪೇಟೆ. ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೆನೆಕಟ್ಟೆ, ವೀರನಪುರ, ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ, ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್.ಜೆ.ವೈ, ಎಲಚಟ್ಟಿ, ಗೋಪಾಲ್‌ಪುರ ಎನ್.ಜೆ.ವೈ. ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಮತ್ತು ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್. ಹುಂಡಿ ಎನ್.ಜೆ.ವೈ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
30x40 S/F
"ವಾಸ್ತವ ಮಾನಸ ಲೇಔಟ್"
TVS ಫ್ಯಾಕ್ಟರಿ ಮುಖ್ಯ ರಸ್ತೆ, ತಳೂರು. ಕೂಡಲೇ ಮನೆ ಕಟ್ಟಲು ಅಥವಾ ಹೂಡಿಕೆಗೆ ತುಂಬಾ ಯೋಗ್ಯವಾಗಿದೆ.
9008570086, 9591810822

ನಿವೇಶನಗಳು ಮಾರಾಟಕ್ಕಿದೆ
ಪೊಲೀಸ್ ಬಡಾವಣೆ – 30x40
ಸಾತಗಳ್ಳಿ ಬಡಾವಣೆ – 30x40 & 20x30
ವಾಣಿ ವಿಲಾಸ ಬಡಾವಣೆ – 30x40
9448447035

SITE FOR SALE
40X60. W/F Vishwa Prajna layout, Near New R.T. Nagar Direct registration only
9740088990

ಪುರಿ ಜಗನ್ನಾಥ್ ಟೂರ್ 3D/2N
ಪುರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್ ರಾಜ್‌ಹನ್ಸ್ ಐಲ್ಯಾಂಡ್, ಗೋಲ್ಡನ್ ಬೀಚ್, ಚಿಲಿಕಾ ಲೇಕ್, ಮುಕ್ತೇಶ್ವರ್
29-12-2025 ರಿಂದ 28,000/-
ಅಯೋಧ್ಯೆ, ಕಾಶಿ 6D/5N
ಗಯಾ, ಬೋದ್‌ಗಯಾ, ಪ್ರಯಾಗ್‌ರಾಜ್, ಸಾರಾನಾಥ್
17-12-2025 ರಿಂದ 36,000/-
Tasty Food - LUXURY ACCOMDN
Call : 7259226593

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಶ್ರೀ ಗೌರೀಶಂಕರ ಟ್ರಾವೆಲ್ಸ್
12-12-2025 (7 ದಿನ): ಅಯೋಧ್ಯೆ, ಕಾಶಿ, ದೆಹಲಿ, ಆಗ್ರಾ, ಮಥುರಾ, ಪ್ರಯಾಗ್‌ರಾಜ್, ಗಯಾ.
17-1-2026 (4 ದಿನ): ಭುವನೇಶ್ವರ್, ಪುರಿಜಗನ್ನಾಥ್, ಕೊನಾರ್ಕ್
7-2-2026 (4 ದಿನ): ಭೀಮಾಶಂಕರ, ಶಿರಡಿ, ತ್ರ್ಯಂಬಕೇಶ್ವರ, ಘೃಷ್ಣೇಶ್ವರ್, ನಾಸಿಕ್.
(ವಿಮಾನ, AC ಬಸ್, ಊಟ, ರೂಂ)
Mob: 9448499538

WANTED
Dosa Master / South Indian Cook Idli maker, Coffee Maker, Experienced Candidates required for a Cafe in Mysore. Good Salary, Food & accommodation provided. Contact:
9513511116

ಬೇಕಾಗಿದ್ದಾರೆ
ಸಪ್ಲೇಯರ್, ಕ್ಲೀನರ್ ಮತ್ತು ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ–ಹೋಟೆಲ್ ಸಂಭ್ರಮ ಬಾರ್ ಅಂಡ್ ರೆಸ್ಟೋರೆಂಟ್, ನಜರ್‌ಬಾದ್, ಮೈಸೂರು. ಸಂಪರ್ಕಿಸಿ:
9945108109

ಬೇಕಾಗಿದ್ದಾರೆ
ಪತ್ರಿಕರಗಾರರ ಕಛೇರಿಗೆ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಅನುಭವವುಳ್ಳ ನುರಿತ ಮಹಿಳಾ ಡಿ.ಟಿ.ಪಿ ಆಪರೇಟರ್ ಬೇಕಾಗಿದ್ದಾರೆ
ವಿಳಾಸ: ಕಾಳಿದಾಸ ಎಂಟರ್‌ಪ್ರೈಸಸ್, ತ್ರಿವೇಣಿ ಸರ್ಕಲ್, ಡಾ. ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿನಗರ, ಮೈಸೂರು
9880999105

WANTED
* Required teaching faculty for Nursing. * Receptionist with good communication skills (female).
Sanath Group of Institutions, Mysore
9342110613, 9480405632

SITE FOR SALE
Vijayanagara 4th stage Kalyaninagara attached to Reshab Layout, E/F 30x42 site with 40 feet road. Call:
8884616461 / 8073300783

ಅಡುಗೆಯವರು ಬೇಕಾಗಿದ್ದಾರೆ
ಹೊಸ ಕಾಲೇಜಿಗೆ ಅಡುಗೆ ತಯಾರಕರು ಬೇಕಾಗಿದ್ದಾರೆ. ವಸತಿ, ESI & PF ಸೌಲಭ್ಯವಿರುತ್ತದೆ.
ಸ್ಥಳ: ಮೈಸೂರು
8310846772, 9535096161

ಮಹಿಳಾ ಅಡುಗೆಯವರು ಬೇಕಾಗಿದ್ದಾರೆ
ಮಹಿಳಾ ಸಸ್ಯಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. (ಲಿಂಗಾಯಿತ & ಬ್ರಾಹ್ಮಣ ಮಾತ್ರ)
ಸ್ಥಳ: ಬಸವರಾಜು ಸರ್ಕಲ್, ವಿಜಯನಗರ, ಮೈಸೂರು
8310846772, 9535096161

SITE FOR SALE
45x60 East Facing 60 Feet Road Kuvempunagar. (Maruti Temple Road) Contact
9187002359

HOUSE FOR LEASE
In R.T. Nagar 2 BHK House Ground floor and First Floor LEASE- 1x Lakhs Address : No.52, 2nd Cross, Journalist layout, Near power friends club R.T. Nagar, Mysore-25
8088080707
7019261733

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– Rs. 11,700 (24 CT)
9108146123

ತಿರುಪತಿ–ಕಾಳಹಸ್ತಿ ಪ್ಯಾಕೇಜ್
ಡಿಸೆಂಬರ್ 12ಕ್ಕೆ ಹೊರಡುವುದು, ಗೋ ಮೈಸೂರು ಹಾಲಿಡೇಸ್, ಕೆ.ಡಿ. ಸರ್ಕಲ್, ವಿಜಯನಗರ
Mob: 9448738617, 9731255916, 9036154301

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಜಮೀನು ಬಾಡಿಗೆಗೆ
3– ಎಕರೆ ಜಮೀನು ಶುಂಠಿ ಬೆಳೆ ಬೆಳೆಯಲು ಅಥವಾ ಬಾಳೆ ಬೆಳೆ ಬೆಳೆಯಲು ಬಾಡಿಗೆಗೆ ದೊರೆಯುತ್ತದೆ. ಈ ಜಮೀನು ಮೈಸೂರು To ಕೆ.ಆರ್.ಎಸ್ ರಸ್ತೆಯಲ್ಲಿರುತ್ತದೆ ಮತ್ತು ರಾಯಲ್ ಇನ್ ಹೋಟೆಲ್ ರಿಂಗ್ ರಸ್ತೆಯಿಂದ 6. K.M. ದೂರದಲ್ಲಿರುತ್ತದೆ. ಸಂಪರ್ಕಿಸಿ : ಪ್ರದೀಪ್ ಬಿ.ಎಸ್
9916157831

ಬೇಕಾಗಿದ್ದಾರೆ
ಫ್ಯಾಕ್ಟರಿ ಕೆಲಸಕ್ಕೆ ಹೆಲ್ಪರ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಆಲನಹಳ್ಳಿ (ನಂದಿನಿ ಬಡಾವಣೆ) ಮೈಸೂರು
9900515650

SITE FOR SALE
Muda approved Bogadi main road Jatti Hundi 30x40, 20x40, 20x30 80% bank loan
9738884777

ಕೆಲಸಕ್ಕೆ ಬೇಕಾಗಿದ್ದಾರೆ
ಟ್ರಾವೆಲ್ ಮತ್ತು ಟೂರಿಸಂ ಲೈನ್‌ನಲ್ಲಿ ಅನುಭವ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ
9902122021

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್
Mob: 9964733988

WANTED
Graphic Designer
- Corel Draw, Photoshop, min. 3 yrs experience
Signboard Maker
- Letter Rising, ACP Routing, Installation skill
GALAXY ADS
Call : 810 540 6141, 733 833 6464

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

FOR SALE
Brindavan Extension 40x60, 2 floor house for sale.. Vijayanagar 1st Stage 40x60 site for sale.. Gokulam 45x60 old house for sale.
Mob: 9620607232

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತ ಮುತ್ತ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಹಾಸ್ಪಿಟಲ್‌ಗಳಲ್ಲಿ ಕೆಲಸ ಮಾಡಲು ಹೌಸ್ ಕೀಪಿಂಗ್ ಸೆಕ್ಯೂರಿಟಿ ಮತ್ತು helper's ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ. ಹಾಗೂ 10th ಪಾಸ್ & ಫೇಲ್ ಕಚೇರಿ ಸಹಾಯಕ ಬೇಕಾಗಿದ್ದಾರೆ. ದ್ವಿ ಚಕ್ರ ವಾಹನ ಹೊಂದಿರಬೇಕು. Age : 18 to 30. ಹಾಗೂ ಮೈಸೂರು ಹಿನಕಲ್ ಗ್ರಾಮದ ಸುತ್ತ ಮುತ್ತಲಿನಲ್ಲಿರಬೇಕು. ಸಂಪರ್ಕಿಸಿ:
9036461347, 9611208553

NEW HOUSE FOR SALE
@ MUDA Layout 2+1 BHK 20x30 South Facing site East Facing Door, Shanthaveri Gopal Gowda Nagar, Mysore
9740019514
9738884777

HOUSE FOR SALE
At R.S. Naidu Nagar, G. Floor & 1st Floor 2 BHK Each Floor North Facing Site & North Facing Door (20X30) MUDA Property with the clear Documents. Contact:
9945735779, 97407 07778

SITE FOR SALE
30x40 East Facing with the clear Documents at Prime Location, Thumakane Nagar at Parashurama Layout, Bannur Main Road, Mysore. Contact:
77959 51027, 97407 07778

SITE FOR SALE
30x40 North facing site, Railway Layout, Bogadi, Mysore.
Mob: 9731203746

HOUSE FOR SALE
33x90 Dimension Housing Board, near Sri Ramachandra High School, Chamarajanagara.
Price: Rs. 1.45 Cr.
Mob: 8970085467

SITE FOR SALE
ಕೆಹೆಚ್‌ಬಿ ಕೆಂಚಲಗೂಡು ಕಾರ್ನರ್ ಸೈಟು 1800 sq.ft.
Contact:
Mob: 9449990513

ಜಮೀನು ಬಾಡಿಗೆಗೆ ಇದೆ
ಬೋಗಾದಿ ಸಿಗ್ನಲ್‌ನಿಂದ 4ಕಿ.ಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ ಅಲಿನೀಶನ್ ಆಗಿರುವ 1¼ ಎಕರೆ ಜಮೀನು ರೆಸಾರ್ಟ್ ಹಾಗೂ ಇತರೆ ಎಲ್ಲಾ ಉದ್ದೇಶಕ್ಕೆ ಚ.ಅಡಿಗೆ 1ರೂಪಾಯಿಯಂತೆ ಬಾಡಿಗೆಗೆ ಇದೆ
8197609290

ಸೈಟು ಮಾರಾಟಕ್ಕಿದೆ
MUDA APPROVED $32\frac{1}{2}$ X 40 NORTH FACE
ಶ್ರೀ ಸಾಯಿ ಚಾಮುಂಡೇಶ್ವರಿ ಲೇಔಟ್ ರಾಘವೇಂದ್ರಸ್ವಾಮಿ ಮಠದ ರಸ್ತೆ, ಟಿ. ನರಸೀಪುರ ಮೇನ್ ರೋಡ್, ಚಿಕ್ಕಹಳ್ಳಿ, ಮೈಸೂರು
9845035818

ತಕ್ಷಣ ಬೇಕಾಗಿದ್ದಾರೆ
Masters & Tailors, Embroidery Workers
J.P. NAGAR.
Mob: 7975704935

SITE FOR SALE
30x43 Hebbal 2nd Stage, Near Cauvery Circle, Mysore.
Mob: 9036378788, 9743405060, 9164041999

Sales Girls Needed
Basic education - Degree / 2nd PUC with basic computer skills. For only those staying near Vidyaranyapuram, Chamundipuram.
For more details contact:
9900520298, 8197393199

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

SITE FOR SALE
20/30 MUDA Site for Sale in Vivekanandanagar Near Bhramaramba Choultry Mysore.
30/40 Sites For Sale in East Bogadi Road Mysore. 44 lakhs
PH 9900464111

ಸೈಟು ಮಾರಾಟಕ್ಕಿದೆ
ಹೂಟಗಳ್ಳಿ ನಗರಸಭಾ ಖಾತಾ ಫಾರಂ ನಂ. 03, ಪಶ್ಚಿಮ ದಿಕ್ಕಿನ 2270 ಚ.ಅಡಿ. ಸೈಟು ಮಾರಾಟಕ್ಕಿದೆ. ಸುಲಕ್ಷಾ ಆಸ್ಪತ್ರೆ ಎದುರು ರಸ್ತೆ (ಹಿನಕಲ್) ವಿಜಯನಗರ 3ನೇ ಹಂತ, ಮೈಸೂರು. ಚ.ಅಡಿಗೆ ರೂ.5000/–(NEGO)
ವಿಜಯನಗರ 4ನೇ ಹಂತ 2ನೇ ಫೇಸ್ 2108ನೇ ಸಂಖ್ಯೆಯ ಪಶ್ಚಿಮ ದಿಕ್ಕಿನ 2400 ಚ.ಅಡಿ ಮುಡಾ ಸೈಟು ಮಾರಾಟಕ್ಕಿದೆ. ಚ.ಅಡಿಗೆ ರೂ. 7200/– (NEGO)
9035959797

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
ಆಫೀಸ್ ಅಸಿಸ್ಟೆಂಟ್ ಹುಡುಗರು ಬೇಕಾಗಿದ್ದಾರೆ
ಐಟಿಐ ಎಲೆಕ್ಟ್ರಿಕಲ್ಸ್ / ಪಿಯುಸಿ ಆದವರಿಗೆ ಆದ್ಯತೆ ದ್ವಿಚಕ್ರ ವಾಹನ ಹೊಂದಿರಬೇಕು ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಕೆಲಸಕ್ಕೆ ಬೇಕಾಗಿದ್ದಾರೆ
* ಗ್ರಾಫಿಕ್ ಡಿಸೈನರ್ (1)
ಕೊರಲ್ ಡ್ರಾ + ಫೋಟೋ ಶಾಪ್ (Salary:25000)
* ಹೆಲ್ಪರ್ (3)
* ಸರ್ವರ್ (1)
* ಅಸಿಸ್ಟೆಂಟ್ (1)
} ಹೋಟೆಲ್ ಗೆ ವಿಜಯನಗರ 4ನೇ ಹಂತ ದಲ್ಲಿ
88841 40303 / 63660 81556



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮನೆ ಊಟ ದೊರೆಯುತ್ತದೆ
ಕ್ಯಾರಿಯರ್ ಮೀಲ್ಸ್, ಹೋಮ್ ಡೆಲಿವರಿ(ವೆಜ್) ನಾವೇ ಮಾಡಿಕೊಡಲಾಗುತ್ತದೆ. ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ, ರಾತ್ರಿ ಊಟ ಮಾಡಿಕೊಡಲಾಗುತ್ತದೆ.
9380347129, 7019491983

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಹೋಟೆಲ್ ಕೆಲಸಕ್ಕೆ
ಮಾಂಸಹಾರಿ ನಾಟಿ ಶೈಲಿಯ ಅಡುಗೆ ಮಾಡಲು ಭಟ್ಟರು, ಸಪ್ಲೈಯರ್‌ಗಳು ಹಾಗೂ ಹೋಟೆಲ್ ಮತ್ತು ಲಾಡ್ಜಿಂಗ್ ಮ್ಯಾನೇಜ್ಮೆಂಟ್ ನೋಡಿಕೊಳ್ಳಲು ಹುಡುಗರು ಮತ್ತು ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ
9740279617

ಮನೆ ಮಾರಾಟಕ್ಕಿದೆ
20x30 (1200 ಚ.ಅ) ಉತ್ತರಮುಖಿ G+1 ಹೊಸದಾಗಿ ನಿರ್ಮಿಸಿದ ವಾಸಸ್ಥಾನ ವಸಂತನಗರ. 20x30 (1200 ಚ.ಅ) ಪೂರ್ವಮುಖಿ G+1 ವಾಸಸ್ಥಾನ – JSS ಲೇಔಟ್ ಉತ್ತರಮುಖಿ G+2 ಡುಪ್ಲೆಕ್ಸ್ ಮನೆ – ವಸಂತನಗರ, ಪ್ಲಾಟ್: 20X30 ಅಡಿ । ನಿರ್ಮಾಣ ವಿಸ್ತೀರ್ಣ: 1800 ಚ.ಅ ಸುಂದರ ವಿನ್ಯಾಸ, ಉತ್ತಮ ಸ್ಥಳ, ಎಲ್ಲಾ ಸೌಲಭ್ಯಗಳ ಸಮೀಪ, ಸಂಪರ್ಕಿಸಿ
9986621579 / 7624987329

SITES FOR SALE
VIJAYANAGAR, DATAGALLI, BOGADI, ROOPANAGAR, RAMKRISNANAGAR SIDDARTH LAYOUT, POLICE LAYOUT, SATAGALLI GOKULAM, HEBBAL, RAMASWAMY CIRCLE SARASWATHIPURAM, KUVEMPUNAGAR, VIVEKANANDANAGAR, NIE, VIDYARANYAPURAM, SRIRAMPURA, J.P. NAGAR
MS PROPERTIES
9110612459

ಉಚಿತ ತರಬೇತಿ (ಸಮಾಜ ಸೇವೆಗಾಗಿ)
ಎಲ್ಲಾ ರೀತಿಯ ಆರೋಗ್ಯ, ಅಭಿವೃದ್ಧಿ, ಮನೆಯ ಸಮಸ್ಯೆಗಳು ಯಾವುದೇ ಇದ್ದರೂ, ಪ್ರಾಣಶಕ್ತಿಯಿಂದ ಹೊರಬರುವುದನ್ನು ಪ್ರತಿದಿನ ಉಚಿತವಾಗಿ ಮೈಸೂರು ಬೆಂಗಳೂರಿನಲ್ಲಿ ಕಲಿಸಿಕೊಡುತ್ತೇವೆ
9916935669 / 9686118117

HERITAGE & CO HEBBAL, MYSORE
Wanted Drivers for Dosth (Ashok leyland) immediately.
9148108838, 9538520013

ಜಮೀನು ಮಾರಾಟಕ್ಕಿದೆ
ಮಾವಿನಹಳ್ಳಿ ಮೈಸೂರ್ ತಾಲ್ಲೂಕು 2 ಎಕರೆ (ಜನರಲ್)ಮಾರಾಟಕ್ಕೆ ಇದೆ 1 ಎಕರೆಗೆ 85 ಲಕ್ಷ 20 km ಮೈಸೂರ್ ಸಿಟಿ ಗೆ 2 km H.D. ಕೋಟೆ ಮೇನ್ ರೋಡ್, ಶ್ರೀ ರಾಂಪುರ ರಿಂಗ್ ರೋಡ್‌ಗೆ 7 km
8073300783, 7411356023

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. (18k -38k), SSLC, PUC, DEGREE
6366718368, 9739121355

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ. ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ. ಸಂಪರ್ಕಿಸಿ
9448229184, 7899625268

ಹೊಸಮನೆ ಮಾರಾಟಕ್ಕಿದೆ
ಲಲಿತಾದ್ರಿಪುರ (ಬಾಲಾಜಿ ಲೇಔಟ್) 20X30-3BHK-E/F ನಿಖರವಾದ ಸೂಕ್ತ ಬೆಲೆಗೆ ಮಾರಾಟಕ್ಕಿದೆ
7760065890
9480222708

ಬೇಕಾಗಿದ್ದಾರೆ
45 ವರ್ಷದೊಳಗಿನ ಓದಲು ಬರೆಯಲು ಗೊತ್ತಿರುವ ಸೆಕ್ಯೂರಿಟಿ ಗಾರ್ಡ್ಸ್ (ವೇತನ ರೂ. 14000) ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡಲು ITI ಆದವರು (ವೇತನ ರೂ. 16000) ಬೇಕಾಗಿದ್ದಾರೆ. ಸಂಪರ್ಕಿಸಿ
9900481819, 9972945905

WANTED IMMEDIATELY
Stores Executive - Male Exp 1 to 2 years (Qualification Any Degree) Address: THE AKSHAYAPATRA FOUNDATION MYSORE, NO 31, 18th Cross, Jayanagar, Mysore.
Mob No: 9964451366

ಮಾರಾಟಕ್ಕೆ ಇದೆ
ಕುಶಾಲನಗರದ ಬಳಿ ಇರುವ ಬೈಲುಕೊಪ್ಪ ದೊಡ್ಡ ಹೊನ್ನೂರು ಎಂಬಲ್ಲಿ 5 ಎಕರೆ 9 ಗುಂಟೆ ಜಮೀನು ಮಾರಾಟಕ್ಕೆ ಇದೆ ಸುತ್ತಲೂ ಫೆನ್ಸ್ ಹಾಕಲಾಗಿದೆ, ಒಳ್ಳೆ ನೀರಿನ ವ್ಯವಸ್ಥೆ ಇದೆ, ಲೇಔಟ್, ರೆಸಾರ್ಟ್, ಹೋಮ್ ಸ್ಟೇ, ಕಾಫಿ ಎಸ್ಟೇಟ್, ವಿಲ್ಲಾ, ಮಾಡಲು ಒಳ್ಳೆ ಜಾಗ, ಆಸಕ್ತಿ ಉಳ್ಳವರು ಕರೆಮಾಡಿ. ಕಮಿಷನ್ ಅನ್ವಯವಾಗುತ್ತದೆ.
9900846129

ಸೈಟು ಮಾರಾಟಕ್ಕಿದೆ
ದಟ್ಟಗಳ್ಳಿ 30x40 E/F
9343380911

ಫುಲ್ ಟೈಮ್ ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ
ನಂಬಿಕಸ್ಥ, ಅನುಭವಿ, ಮನೆಯಲ್ಲೇ ಉಳಿಯುವವರು, ಮೈಸೂರಿನ ಗೋಕುಲಂ ಮನೆಗೆ ಬೇಕಾಗಿದ್ದಾರೆ. ವೇತನ : 13000. ಸ್ವಲ್ಪಮಟ್ಟಿನ ಹಿಂದಿ ಜ್ಞಾನವುಳ್ಳವರಾಗಿರಬೇಕು. ತಿಂಗಳಲ್ಲಿ 2 ಭಾನುವಾರ ರಜೆ ಇರುತ್ತದೆ.
9870493209

ಅಡುಗೆ ಸಹಾಯಕರು ಬೇಕಾಗಿದ್ದಾರೆ
ಮೈಸೂರು ಮೃಗಾಲಯದ ಬಳಿ ಇರುವ ಇಟಾಲಿಯನ್ ಕೆಫೆಗೆ ಅಡುಗೆ ಸಹಾಯಕರು ಬೇಕಾಗಿದ್ದಾರೆ. ಸಂಬಳ : 12,000 to 15000 ಸಂಪರ್ಕಿಸಿ
8310850636 / 7676549007

FOR SALE
20x30 Old Houses @ Kuvempunagar, RK Nagar
40x120 Site@ 80 Feet Road in Dattagalli
20x30 New Duplex House @ Utthanahalli & Dattagalli
40x60@ JP Ngr, Shardha Lyt
20x30/30x45/35x60/40x60 Properties @ Srirampura
20x30 Properties @ VijayaNagar
PRAKRUTHI PROPERTIES
95386 90359, 90359 90359

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

100% ಉದ್ಯೋಗವಕಾಶ ವರ್ಕ್ ಫ್ರಂ ಹೋಂ
ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ವಯಸ್ಸು 18 ರಿಂದ 65 ರವರೆಗೆ. ಆಫೀಸ್‌ಗಳಿಗೆ 4th, 7th, 10th, ITI, Any Degree Pass / Fail ಆದ ಯುವಕ, ಯುವತಿಯರಿಗೆ ಹಾಗೂ ESI, PF ನೊಂದಿಗೆ. ಇಂದೇ ಕರೆ ಮಾಡಿ. ಸಂಬಳ: 22,000 – 45000.
6362024878, 9019593297

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000 ದಿಂದ 25,000. ಸಂಪರ್ಕಿಸಿ:
Mob: 8095133188

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಪ್ರತಿಷ್ಠಿತ ಕಂಪನಿ ಮತ್ತು ಆಫೀಸ್ ಕೆಲಸಗಳಿಗೆ 7th, 10th, ITI, B.Com., B.Sc., BE, Any Degree ಪಾಸ್ / ಫೇಲ್ ಆದಂತಹ ಯುವಕ, ಯುವತಿಯರು, ವಿದ್ಯಾರ್ಥಿಗಳು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ, ವಸತಿ ಇರುತ್ತದೆ. ಸಂಬಳ 20,000 ರಿಂದ 75,000.
Mob: 9916788422

ಬೇಕಾಗಿದ್ದಾರೆ
ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ಮಾಡಲು ಹೆಲ್ಪರ್ಸ್ ಹಾಗು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. SSLC+PUC+ITI Pass or Fail 8 ಗಂಟೆಗಳ ಹಾಗೂ 12 ಗಂಟೆಗಳ ಕೆಲಸದ ಅವಧಿಗಳು. ಆಕರ್ಷಕ ವೇತನ + ESI + PF ವಾರದ ರಜೆಗಳ ಸೌಲಭ್ಯವಿರುತ್ತದೆ.
ತಕ್ಷಣ ಸಂಪರ್ಕಿಸಿ: 9483076815, 7019378337, 9743091336

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

SITE FOR SALE
40X60.. North face Muda approved. 6700/- Drusti layout... near vijaynagar 4th stage. 20X45 East face Dattagalli near Christ Public School.. 6200/-
8073799013

ಬಾಡಿಗೆಗಿದೆ
1 BHK, ಮತ್ತು 2 BHK ಜಯನಗರ, 2 ಮಳಿಗೆಗಳು (ಪ್ರತಿ ಮಳಿಗೆ:–230 sq ft) ರಿಂಗ್ ರೋಡ್, ಆನಂದನಗರ, ಬೋಗಾದಿ, ಮೈಸೂರು. ಸಂಪರ್ಕಿಸಿ:
9741881037

ಹೊಸಮನೆ ಬಾಡಿಗೆಗೆ ಇದೆ
20x40 ಪೂರ್ವಕ್ಕೆ 1ST FLOOR, 2BHK + ಸೋಲಾರ್ + ಗೀಜರ್ ಹೊಸ ಬಂಡಿಕೇರಿ, 6ನೇ ಕ್ರಾಸ್, ಕೆ.ಆರ್. ಮೊಹಲ್ಲಾ, ಮೈಸೂರು
9844130658

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ವರ್ಷದೊಳಗೆ 3 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕಿ ಭವನದ ಕಾಮಗಾರಿ ಪೂರ್ಣ

ತಿ.ನರಸೀಪುರ, ಡಿ.5– ನಾಯಕರ ಸಂಘದ ಆವರಣದಲ್ಲಿ ನೆನಗುದಿಗೆ ಬಿದ್ದಿರುವ ಮಹರ್ಷಿ ವಾಲ್ಮೀಕಿ ಭವನದ ಮುಂದುವರೆದ ಕಾಮಗಾರಿಗೆ 3 ಕೋಟಿ ಅನುದಾನವನ್ನು ಮಂಜೂರು ಮಾಡಿ, ವರ್ಷದೊಳಗೆ ಕಟ್ಟಡವನ್ನು ಉದ್ಘಾಟಿಸಿ ಸಮುದಾಯದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗೆ ನೀಡಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ಪಟ್ಟಣದ ಶ್ರೀರಾಂಪುರದಲ್ಲಿರುವ ತಾಲೂಕು ನಾಯಕರ ಸಂಘದ ಆವರಣದಲ್ಲಿ ಪೂರ್ಣಗೊಳ್ಳದಿರುವ ಮಹರ್ಷಿ ವಾಲ್ಮೀಕಿ ಸಮುದಾಯ ಭವನವನ್ನು ಪರಿಶೀಲಿಸಿ, ಸಂಘದ ಪದಾಧಿಕಾರಿಗಳಿಂದ ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದ ಅವರು ಶಾಸಕರಾದ ಮೊದಲ ಬಾರಿಗೆ ಸಚಿವ ಆಗುತ್ತಿದ್ದಂತೆ ನಾಯಕ ಸಮುದಾಯಕ್ಕೆ ಭವನವನ್ನು ನಿರ್ಮಿಸಬೇಕೆಂದು ನಾನೇ ಸಂಘದ ಆವರಣದಲ್ಲಿ ಅನುದಾನ ಕೊಟ್ಟು ಕಾಮಗಾರಿಗೆ ಚಾಲನೆ ನೀಡಿದ್ದೆ. ಇದುವರೆಗೂ 1.50 ಕೋಟಿ ಅನುದಾನ ಮಂಜೂರು ಮಾಡಿ, ನೆಲ ಮಹಡಿವರೆಗಷ್ಟೇ ಕೆಲಸವಾಗಿದೆ ಎಂದರು.

ತಾಲೂಕು ಕೇಂದ್ರದಲ್ಲಿ ಅಂಬೇಡ್ಕರ್ ಅಥವಾ ಮಹರ್ಷಿ ವಾಲ್ಮೀಕಿ ಭವನಗಳಿಗೆ 6 ಕೋಟಿವರೆಗೂ ಅನುದಾನ ಮಂಜೂರು ಮಾಡಲು ಅವಕಾಶ ಇರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಭವನದ ಮುಂದುವರೆದ ಕಾಮಗಾರಿಗೆ 3 ಕೋಟಿ ಹೆಚ್ಚುವರಿ ಅನುದಾನ ನೀಡಲಾಗುವುದು. ಈ ಬಗ್ಗೆ ಯೋಜನೆ ರೂಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ತಾಕೀತು ಮಾಡುತ್ತೇನೆ. ಕೂಡಲೆ ಕಾಮಗಾರಿಯನ್ನು ಆರಂಭಿಸಿ ವರ್ಷದೊಳಗೆ ಕಟ್ಟಡ ನಿರ್ಮಾಣ ಪೂರ್ಣಗೊಳಿಸಿ, ಉದ್ಘಾಟಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಮಹದೇವಪ್ಪ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿದರು. ಈ ವೇಳೆ ಮಹರ್ಷಿ ವಾಲ್ಮೀಕಿ ಶಿಕ್ಷಣ ಸಂಸ್ಥೆಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ನೀಡುವಂತೆ ಅಧ್ಯಕ್ಷ ಹೊನ್ನನಾಯಕ ಅವರು


ವಾಲ್ಮೀಕಿ ಸಮುದಾಯ ಭವನದ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪರಿಶೀಲಿಸಿದರು.

ಸಚಿವ ಹಾಗೂ ಎಂಎಲ್ಸಿ ಅವರಿಗೆ ಮನವಿ ಸಲ್ಲಿಸಿದರು.

ಜಿ.ಪಂ ಮಾಜಿ ಸದಸ್ಯ ಕೆ.ಸಿ.ಲೋಕೇಶ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಡಿ. ಬಸವರಾಜು, ಗೌರವಾಧ್ಯಕ್ಷ ಮಂಜುನಾಥನ್, ಕಾರ್ಯದರ್ಶಿ ಆಲಗೂಡು ನಾಗರಾಜು, ಉಪಾಧ್ಯಕ್ಷ ಎಚ್. ಹೊನ್ನಯ್ಯ, ನೌಕರರ ಸಂಘದ ಅಧ್ಯಕ್ಷ ಆರ್.ರಾಜು, ಖಜಾಂಚಿ ಗೋವಿಂದರಾಜು,ಇಂಡವಾಳು ಬಸವರಾಜು, ಕೆಬ್ಬೆ ಸುಂದರ, ಗವಿನಾಯಕ, ಸುಂದರ ನಾಯಕ, ಸಿದ್ದರಾಜು ಬೂದಹಳ್ಳಿ, ಹೊನ್ನನಾಯಕ, ಇಂದ್ರೇಶ್, ಸುಂದರ್, ಕುಮಾರ ಕೊಳತ್ತೂರು, ಆರ್‌ಪಿ ಹುಂಡಿ ನಾಗರಾಜು, ಮುಖಂಡರಾದ ಎಂ.ಬಿ.ಸಾಗರ್, ಕೃಷ್ಣನಾಯಕ, ರಾಘವೇಂದ್ರ, ಕೆಬ್ಬೆ ನಾಗಣ್ಣ, ಎಜೆ ವೆಂಕಟೇಶ್, ಕರಿಯಪ್ಪ, ವಾಸು, ಕುಮಾರ ಕೆಂಡನ್ ಕೊಪ್ಪಲು, ತಿರುಮಕೂಡಲು ಪುಟ್ಟು, ಸಿದ್ದರಾಜು ಹಾಗೂ ಇತರರು ಇದ್ದರು.

ಗುಣಮಟ್ಟದ ಕಾಮಗಾರಿ, ಮೂಲ ಸೌಕರ್ಯ ಕಲ್ಪಿಸಲು ನಿರ್ಲಕ್ಷ್ಯ ತೋರುವ

ಅಧಿಕಾರಿಗಳ ವಿರುದ್ಧ ಕ್ರಮ

ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ

ಹೆಚ್.ಡಿ.ಕೋಟೆ : ತಾಲೂಕಿನ ಗ್ರಾಮಗಳಲ್ಲಿ ನಡೆಯುತ್ತಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ ಅನಿಲ್ ಚಿಕ್ಕಮಾದು ತಾಲೂಕಿನ ಗಣೇಶನಗುಡಿ ಮತ್ತು ನೇರಳೆ ಗ್ರಾಮದಲ್ಲಿ 43 ಲಕ್ಷ ರೂ. ವೆಚ್ಚದ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ಹಾಗೂ ಬಾಬು ಜಗಜೀವನ ರಾಮ್ ನೂತನ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಶಾಸಕನಾಗಿ ಆಯ್ಕೆಯಾದ ಬಳಿಕ ಬೀಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅನೇಕ ಹಳ್ಳಿಗಳ ಅಭಿವೃದ್ಧಿಗೆ ಕೋಟ್ಯಾಂತರ ರೂ. ಅನುದಾನವನ್ನು ತಂದು ಅಭಿವೃದ್ಧಿ ಕಾಮಗಾರಿ ನಡೆಸಿದ್ದೇನೆ. ಇಂತಹ ಕಾಮಗಾರಿಗಳು ನಡೆಯುವ ವೇಳೆ ಗ್ರಾಮಸ್ಥರು ಕಾಳಜಿ ವಹಿಸಿ ಗುಣಮಟ್ಟದ ಕೆಲಸಗಳು ನಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಜನ ಸಂಪರ್ಕ ಸಭೆ ನಡೆಸಿ ಅಲ್ಲಿ ಮೂಲ ಸೌಕರ್ಯ ಕಲ್ಪಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಮುಂದಿನ ಮಾರ್ಚ್‌ನಲ್ಲಿ ಈ ಭಾಗದಲ್ಲಿ ನಡೆಸುವ ಜನಸಂಪರ್ಕ ಸಭೆಯಲ್ಲಿ ಈ ಸಮಸ್ಯೆಗಳು ಉದ್ಭವಿಸಬಾರದು ಎಂದರು.

ಗುಣಮಟ್ಟದ ಕಾಮಗಾರಿ ಮತ್ತು ಜನರಿಗೆ ಮೂಲ ಸೌಕರ್ಯ ಕಲ್ಪಿಸುವ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ


ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಶಾಸಕ ಅನಿಲ್ ಚಿಕ್ಕಮಾದು.

ಜರುಗಿಸಲಾಗುವುದು ಎಂದು ಎಚ್ಚರಿಸಿದ ಶಾಸಕರು, ಜನಸಾಮಾನ್ಯರಿಂದ ಬಂದಿರುವ ಸಮಸ್ಯೆಗಳನ್ನು ಬಗೆಹರಿಸಿ ಅದರ ಸಮಗ್ರ ವರದಿ ನೀಡುವಂತೆ ಸೂಚಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಬೀಚನಹಳ್ಳಿ ಭಾಸ್ಕರ್ ಅವರು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಬೀಚನಹಳ್ಳಿ ಗ್ರಾಮದಲ್ಲಿ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ಬಂದಂತ ಜನತೆಗೆ ನಿವೇಶನ, ಆಸ್ಪತ್ರೆ, ಗ್ರಾಮದಲ್ಲಿ ಪೊಲೀಸ್ ಠಾಣೆ, ವಿದ್ಯಾರ್ಥಿ ನಿಲಯ, ಬಸ್ ನಿಲ್ದಾಣದಿಂದ ಪುರ ಗ್ರಾಮದವರೆಗೆ ಸಿಸಿ ರಸ್ತೆ, ಸ್ಮಶಾನಕ್ಕೆ ಜಾಗ, ಗ್ರಾಮದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಮಾಡಿಕೊಡುವಂತೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಮುಂದಿನ ದಿನಗಳಲ್ಲಿ ಅಧಿವೇಶನದಲ್ಲಿ ಈ ವಿಚಾರ ಚರ್ಚಿಸಿ ಮೊದಲಿಗೆ ಇಲ್ಲಿ ವಾಸ ಮಾಡುವ ಜನತೆಗೆ ನಿವೇಶನ ಕೊಡುವ ಭರವಸೆಯನ್ನು ನೀಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಪರಶಿವಮೂರ್ತಿ, ಬಸವರಾಜು, ಭಾಸ್ಕರ್, ನಂದಿನಿ, ಹೇಮಂತ್, ಪ್ರಕಾಶ, ಸಿದ್ದರಾಮು, ತಹಸೀಲ್ದಾರ್ ಶ್ರೀನಿವಾಸ್, ಸುಪ್ರಿತ್, ಇಓ ಧರಣೇಶ್, ಪಿಡಿಓ ಚೆನ್ನಪ್ಪ, ವೈಪ್ರಸಾದ್, ಬಿಇಓ ರಾಜು, ಶಿವರಾಜು, ರಮೇಶ್, ಮಹೇಶ್, ಶಶಿಕಲಾ, ಗಣೇಶ್, ನಟಶೇಖರ ಮೂರ್ತಿ, ಪಿ.ಹರ್ಷಿತಾ, ಮಾದೇಶ್, ನೇತ್ರಾವತಿ, ಸಿಡಿಪಿಓ ದೀಪಾ, ರೇಣುಕಾ, ಸುದರ್ಶನ್ ಇದ್ದರು.

ಗೃಹ ಸಚಿವ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಲು ಆಗ್ರಹ



ಹುಣಸೂರು, ಡಿ.5– ಗೃಹ ಸಚಿವ ಜಿ.ಪರಮೇಶ್ವರ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಪರಮೇಶ್ವರ್ ಅಭಿಮಾನಿ ಸಂಘದ ರಾಜ್ಯಾಧ್ಯಕ್ಷ ತರಿಕಲ್ಲು ರಾಜು ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 75 ವರ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುತ್ತಾ ಬಂದಿರುವ ದಲಿತರಿಗೆ ಇಲ್ಲಿವರೆಗೂ ಮುಖ್ಯಮಂತ್ರಿ ಸ್ಥಾನ ನೀಡದಿರುವುದು ಬೇಸರದ ಸಂಗತಿ, ಕಾಂಗ್ರೆಸ್ ಪಕ್ಷ ಬಂಗಾರಪ್ಪ ಸೇರಿದಂತೆ ಅನೇಕ ಸಣ್ಣ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಿದೆ. ಆದರೆ ನಿಜವಾಗಿಯೂ ಕಾಂಗ್ರೆಸ್ ಪಕ್ಷ ತನ್ನಗಾಗಿ ದುಡಿದ ಒಂದು ಮುಖ್ಯ ಸಮುದಾಯವನ್ನು ಗುರುತಿಸುವಲ್ಲಿ ವಿಫಲವಾಗಿದೆ ಎಂದರು.

ಪರಮೇಶ್ವರ್ ಅಭಿಮಾನಿ ಸಂಘದ ತಾಲೂಕು ಅಧ್ಯಕ್ಷ ವಾಸು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಮಂಜಣ್ಣ, ಪ್ರಧಾನ ಕಾರ್ಯದರ್ಶಿ ಮಂಜು, ಕಾರ್ಯದರ್ಶಿ ಕಾರ್ತಿಕ್, ಸಿದ್ದೇಶ್, ಚಾಮನಾಯಕ ಹಾಜರಿದ್ದರು.

2030ಕ್ಕೆ ಹೆಚ್‌ಐವಿ ಮುಕ್ತ ಯೋಜನೆಗೆ ಕೈ ಜೋಡಿಸಿ

ಹೆಚ್‌ಐವಿ, ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮ್ಮದ್ ಮನವಿ

ಸರಗೂರು: ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟಿನ ಅಂಗ –ಸಂಸ್ಥೆಯಾದ ಜನಧ್ವನಿ ಸಮುದಾಯ ಬಾನುಲಿ ಕೇಂದ್ರದಲ್ಲಿ ಆಯೋಜಿಸಿದ್ದ ನೇರ ಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ವಿಶ್ವ ಏಡ್ಸ್ ದಿನ ಮತ್ತು ಹೆಚ್‌ಐವಿ ಸೋಂಕಿತರಿಗೆ ಸರ್ಕಾರದಿಂದ ಇರುವ ರಕ್ಷಣಾ ಯೋಜನೆಗಳ ಕುರಿತು ಮೈಸೂರು ಜಿಲ್ಲಾ ಹೆಚ್‌ಐವಿ ಮತ್ತು ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮ್ಮದ್ ಮಾತನಾಡಿದರು.

ಪ್ರತಿ ವರ್ಷ ಡಿ.1 ರಂದು ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ಏಡ್ಸ್ ದಿನವನ್ನು ಆಚರಿಸುತ್ತಿದ್ದು ಸಮುದಾಯದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಇತ್ತೀಚೆಗೆ ಹೆಚ್‌ಐವಿ ಸೋಂಕಿಗೆ ತುತ್ತಾಗುತ್ತಿರುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದ್ದು 2030ಕ್ಕೆ ಹೆಚ್‌ಐವಿ ಮುಕ್ತ ಮಾಡುವ ಯೋಜನೆಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ತಿಳಿಸಿದರು. ಹೆಚ್‌ಐವಿಯು ಪ್ರಮುಖ



ವಾಗಿ ಅಸುರಕ್ಷಿತ ಲೈಂಗಿಕತೆ, ತಾಯಿಯಿಂದ ಮಗುವಿಗೆ ರಕ್ತದ ಮೂಲಕ ಹಾಗೂ ಸೂಜಿ ಸಿರಂಜ್ ಈ ನಾಲ್ಕು ಮಾರ್ಗಗಳಿಂದ ಹರಡುವುದರಿಂದ ಪ್ರತಿಯೊಬ್ಬರೂ ಜಾಗೃತಿ ವಹಿಸಬೇಕು ಎಂದರು.

ಒಂದು ವೇಳೆ ಯಾರಿಗಾದರೂ ಹೆಚ್‌ಐವಿ ಸೋಂಕು ಪಾಸಿಟಿವ್ ಬಂದರೆ ಯಾರು ಕೂಡ ಆತಂಕಕ್ಕೆ ಒಳಗಾಗದೆ ಸರ್ಕಾರದಿಂದ ಉತ್ತಮವಾದ ಎಆರ್‌ಟಿ ಚಿಕಿತ್ಸೆ ಲಭ್ಯವಿದ್ದು ನಿರಂತರವಾಗಿ ಚಿಕಿತ್ಸೆಯನ್ನು ತೆಗೆದುಕೊಳ್ಳುವುದರಿಂದ ಸಾಮಾನ್ಯ ಮನುಷ್ಯರಂತೆ ಜೀವನ ನಿರ್ವಹಿಸಬಹುದು ಹಾಗೂ ಹೆಚ್‌ಐವಿ ಸೋಂಕಿತರಿಗೆ ಸರ್ಕಾರದಿಂದ ಕೆಲವು ಯೋಜನೆಗಳು ಮತ್ತು ಸೇವೆಗಳನ್ನು ಒದಗಿಸಲಾಗಿದೆ ಹಾಗೂ ಹೆಚ್‌ಐವಿ ಸೋಂಕಿತರ ಮಕ್ಕಳಿಗೆ ಶಿಕ್ಷಣಕ್ಕಾಗಿ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದ್ದು, ಎಲ್ಲರೂ ಕೂಡ ಆತ್ಮಸ್ಥೈರ್ಯದಿಂದ ಜೀವನವನ್ನು ನಡೆಸುವಂತೆ ಅರಿವು ಮೂಡಿಸಿದರು

ಕಾರ್ಯಕ್ರಮದಲ್ಲಿ ಜನಧ್ವನಿ ಸಮುದಾಯ ಬಾನುಲಿ ಕೇಂದ್ರದ ವ್ಯವಸ್ಥಾಪಕ ನಿಂಗರಾಜು ಜನಧ್ವನಿ ಸಿಬ್ಬಂದಿಗಳಾದ ಅನಿತಾ, ಪ್ರೀತಿ ಶ್ರೀಕಾಂತ್ ಸ್ಫೂರ್ತಿ, ಪ್ರಕಾಶ್ ಯತೀಶ್ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಡ್ರೋನ್ ಕ್ಯಾಮರಾ ಬಡಿದು ಶಾಸಕ ಅನಿಲ್ ಚಿಕ್ಕಮಾದು ಮುಖಕ್ಕೆ ಗಾಯ

ಹೆಚ್.ಡಿ.ಕೋಟೆಯಲ್ಲಿ ಘಟನೆ, ಮೈಸೂರಿಗೆ ಬಂದ ಶಾಸಕರು

ಹೆಚ್.ಡಿ.ಕೋಟೆ: ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಅನಿಲ್ ಚಿಕ್ಕಮಾದು ಅವರ ಮೂಗಿನ ಭಾಗಕ್ಕೆ ಡ್ರೋನ್ ಕ್ಯಾಮರಾ ಬಡಿದು ಗಾಯಗೊಂಡಿರುವ ಘಟನೆ ಶುಕ್ರವಾರ ಸಂಭವಿಸಿದೆ.





ಪಟ್ಟಣದ ಆದರ್ಶ ವಿದ್ಯಾರ್ಥಿ ನಿಲಯದಲ್ಲಿ ವಾರ್ಷಿಕೋತ್ಸವ, ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮ ನಡೆಯುತ್ತಿತ್ತು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶಾಸಕ ಅನಿಲ್ ಚಿಕ್ಕಮಾದು ಭಾಗವಹಿಸಿದ್ದರು. ಕಾರ್ಯಕ್ರಮದ ಚಿತ್ರೀಕರಣವನ್ನು ಡ್ರೋನ್ ಕ್ಯಾಮಾರಾ ಮತ್ತು ಸ್ಟಿಲ್ ಕ್ಯಾಮಾರಾ ಬಳಸಿ ಮಾಡಲಾಗುತ್ತಿತ್ತು. ಈ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕರ ಮುಖಕ್ಕೆ ಡ್ರೋನ್ ಕ್ಯಾಮರಾ ಆಕಸ್ಮಿಕವಾಗಿ ಅಪ್ಪಳಿಸಿದೆ. ಇದರಿಂದ ಅವರ ಮೂಗಿನ ಭಾಗದಲ್ಲಿ ಗಾಯವಾಗಿದೆ. ಈ ಘಟನೆಯಿಂದ ವಿದ್ಯಾರ್ಥಿಗಳು ಮತ್ತು ಪೋಷಕರು ಆತಂಕಗೊಂಡರು. ತಕ್ಷಣ ಶಾಸಕರನ್ನು ಪಟ್ಟಣದಲ್ಲಿರುವ ಸೆಂಟ್ ಮೇರಿಸ್ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ತಪಾಸಣೆ ಬಳಿಕ ಮೈಸೂರಿನ ತಮ್ಮ ನಿವಾಸಕ್ಕೆ ತೆರಳಿದ್ದಾರೆ ಎನ್ನಲಾಗಿದೆ.

ಕೆ.ಆರ್.ನಗರದಲ್ಲಿ ಅತ್ಯಾಧುನಿಕ ಸುಸಜ್ಜಿತ ಡಿಜಿಟಲ್ ಗ್ರಂಥಾಲಯ

ಕೆ.ಆರ್.ನಗರ: ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ಅಗತ್ಯ ಗ್ರಂಥಗಳ ಜೊತೆಗೆ ಅಂತರ್ಜಾಲ ಸೇವೆ ಒದಗಿಸುವಂತಹ ಅತ್ಯಾಧುನಿಕ ಸುಸಜ್ಜಿತ ಡಿಜಿಟಲ್ ಗ್ರಂಥಾಲಯಕ್ಕೆ ಅತಿ ಶೀಘ್ರದಲ್ಲಿ 1.30 ಕೋಟಿ ವೆಚ್ಚದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಹೃದಯ ಭಾಗದಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಕಟ್ಟಡದ ಪಕ್ಕದಲ್ಲಿ ಡಿಜಿಟಲ್ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಮಾತನಾಡಿದರು.


ಡಿಜಿಟಲ್ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಸ್ಥಳ ಪರಿಶೀಲನೆ ನಡೆಸಿದರು.

ಜಿಲ್ಲಾ ಕೇಂದ್ರ ಗ್ರಂಥಾಲಯದ ಪಕ್ಕದಲ್ಲಿ ಅತ್ಯಾಧುನಿಕ ಡಿಜಿಟಲ್ ಗ್ರಂಥಾಲಯ ಅಭಿವೃದ್ಧಿಪಡಿಸಲಾಗುತ್ತದೆ. 85 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡವನ್ನು ಮತ್ತು 50 ಲಕ್ಷ ರೂ. ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದರಲ್ಲದೆ ಕಟ್ಟಡ ನಿರ್ಮಾಣದ ಹೊಣೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು ಈಗಾಗಲೇ 1.30 ಕೋಟಿ ರೂ. ಹಣ ಸಹ ಬಿಡುಗಡೆಯಾಗಿದೆ ಎಂದರು.

ನಿತ್ಯ ಬದಲಾಗುತ್ತಿರುವ ಡಿಜಿಟಲ್ ಯುಗದಲ್ಲಿ ಗ್ರಂಥಪಾಲಕರ ಮತ್ತು ಗ್ರಂಥಾಲಯಗಳ ಕಾರ್ಯ ಸ್ವರೂಪ ಸಹ ಬದಲಾಗಿದ್ದು ಈಗ ಅವುಗಳನ್ನು ಡಿಜಿಟಲ್ ಗ್ರಂಥಾಲಯಗಳಲ್ಲಿ ಕಾಣುತ್ತಿದ್ದೇವೆ ಎಂದರು.

ಜಿಲ್ಲಾ ಕೇಂದ್ರ ಗ್ರಂಥಾಲಯದ ಮೇಲ್ವಿಚಾರಕಿ ವಾಣಿ, ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಗಡ್ಡ ಮಹೇಶ್, ನಿರ್ದೇಶಕರಾದ ಕೆ.ಎನ್.ಪ್ರಸನ್ನಕುಮಾರ್, ಸೈಯದ್ ಜಾಬೀರ್, ಶಿವುನಾಯಕ್, ಸೈಯದ್ ಸಿದ್ದಿಕ್, ನಟರಾಜ್, ಶಂಕರಸ್ವಾಮಿ, ಕೆ.ವಿನಯ್, ಎಂ.ಎಸ್.ಮಹದೇವ್, ಎಂ.ಜೆ. ರಮೇಶ್, ಕೆಂಚಿ ಮಂಜು, ಕೆ.ಪಿ.ಜಗದೀಶ್, ಮಂಜುನಾಥ್ ಇದ್ದರು.

ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ರೈತರ ಒತ್ತಾಯ

ಮಲ್ಕುಂಡಿ: ಕಾಡಂಚಿನ ಗ್ರಾಮಗಳಾದ ದೇವರಾಯಶೆಟ್ಟಿಪುರ, ಇಂದಿರನಗರ, ನಾಗಣಪುರ, ಬಳ್ಳೂರಹುಂಡಿ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ರೈತರು ಆಗ್ರಹಿಸಿದ್ದಾರೆ.

ಈ ಗ್ರಾಮಗಳ ರೈತರು ತಮ್ಮ ಜಮೀನಿನಲ್ಲಿ ಹುರುಳಿ ಬೆಳೆಗಳನ್ನು ಬೆಳೆದಿದ್ದು ಕಟಾವಿಗೆ ಬಂದಿರುವ ಉರುಳಿ ಫಸಲುಗಳನ್ನು ಜಿಂಕೆಗಳ ಹಾವಳಿಯಿಂದ ನಾಶವಾಗುತ್ತಿವೆ. ಇದರಿಂದ ರೈತರು ಕಂಗಲಾಗಿದ್ದಾರೆ ಎಂದು ರೈತ ಕೆಂಪಣ್ಣ ಆರೋಪಿಸಿದ್ದಾರೆ. ಈ ಭಾಗದ ರೈತರು ಬೆಳೆದ ಫಸಲುಗಳನ್ನು ಒಂದೆಡೆ


ಗ್ರಾಮದಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

> “ ಈಗಾಗಲೇ ಸ್ಥಳ ಪರಿಶೀಲನೆ ಮಾಡಲಾಗಿದೆ. ದೇವರಾಯಶೆಟ್ಟಿಪುರ ಇಂದಿರನಗರ ಗ್ರಾಮದ ರೈತರ ಬೆಳೆದ ಉರುಳಿ ಫಸಲುಗಳನ್ನು ಜಿಂಕೆಗಳು ನಾಶ ಪಡಿಸಿರುವ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಪರಿಹಾರ ನೀಡುವುದಾರ ಬಗ್ಗೆ ಮಾಹಿತಿ ನೀಡಲಾಗುವುದು ಕೆಲವೇ ದಿನಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು –ಹನುಮಂತಪ್ಪ ಪಾಟೀಲ್, ಓಂಕಾರ್ ವಲಯದ ಅರಣ್ಯಾಧಿಕಾರಿ.

ಕಾಡಾನೆಗಳು ನಾಶಪಡಿಸಿದರೆ ಮತ್ತೊಂದೆಡೆ ಹುರುಳಿ ಫಸಲನ್ನು ಜಿಂಕೆಗಳು ನಾಶ ಪಡಿಸುತ್ತಿವೆ. ಜಿಂಕೆ ನಾಶ ಮಾಡಿರುವ ಫಸಲುಗಳಿಗೆ ಯಾವುದೇ ಪರಿಹಾರ ನೀಡುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಕಾಡು ಪ್ರಾಣಿಗಳ ಹಾವಳಿ ತಪ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ. ಈಗಿರುವಾಗ ರೈತರು ಬದುಕುವುದಾದರೂ ಹೇಗೆ? ಸಾಲ ಸೋಲ ಮಾಡಿ ಬೆಳೆದ ಫಸಲು ಕಾಡು ಪ್ರಾಣಿಗಳ ಪಾಲಾದರೆ ರೈತ ಸಾಲ ತೀರಿಸುವುದಾದರೂ ಹೇಗೆ? ರೈತರು ತಮ್ಮ ಫಸಲುಗಳನ್ನು ಉಳಿಸಿಕೊಳ್ಳಲು ರಾತ್ರಿ ವೇಳೆ ಕಾಯಲು ಹೋಗಲು ಹುಲಿ ಕಾಟ ಹೆಚ್ಚಾಗಿದೆ. ಹೀಗಿರುವಾಗ ರೈತರು ತಮ್ಮ ಫಸಲುಗಳನ್ನು ಉಳಿಸಿಕೊಳ್ಳಲಾಗದೆ ಕಂಗಲಾಗಿದ್ದಾರೆ ಸಾಲ ತೀರಿಸಲಾಗದೆ ಆತ್ಮಹತ್ಯೆ ದಾರಿ ಹಿಡಿಯುವ ಪರಿಸ್ಥಿತಿ ಉಂಟಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾನಿಯಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಮಂಜುನಾಥ್, ಮಹೇಶ್, ನಂಜಯ್ಯ, ರಾಚಯ್ಯ, ದೀಪು, ಪಾಪಣ್ಣ, ಗ್ರಾಪಂ ಮಾಜಿ ಸದಸ್ಯ ವೀರಭದ್ರಸ್ವಾಮಿ, ಮಹದೇವಸ್ವಾಮಿ, ಮಹದೇವು, ನಂದೀಶ್, ಸಿದ್ದರಾಜು ಹಲವು ರೈತರು ಹಾಜರಿದ್ದರು.

ಮಾದೇಗೌಡನಹುಂಡಿ ಡೇರಿಗೆ ಅಧ್ಯಕ್ಷರ ಆಯ್ಕೆ



ತಿ.ನರಸೀಪುರ, ಡಿ.5– ತಾಲೂಕಿನ ಮಾದೇಗೌಡನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂಪಿ ಪ್ರಭಾಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನ ಮಾದೇಗೌಡನ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಪ್ರಭಾಕರ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅಧ್ಯಕ್ಷರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಕಟಿಸಿದರು.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಾದೇಗೌಡನ ಹುಂಡಿ ಎನ್ ಅನಿಲ್ ಕುಮಾರ್, ಈ ವೇಳೆ ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿ ಡೈರಿ ಅಧ್ಯಕ್ಷರನ್ನು ಒಮ್ಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಯಾವುದೇ ಸೌಲಭ್ಯಗಳು ಬಂದರೂ ಹಾಲು ಉತ್ಪಾದಕರಿಗೆ ಸಮರ್ಪಕವಾಗಿ ತಲುಪಿಸುವ ಕೆಲಸ ಮಾಡಬೇಕು ಎಂದರು.

ನೂತನ ಅಧ್ಯಕ್ಷ ಪ್ರಭಾಕರ್ ಮಾತನಾಡಿದರು. ಸಂಘದ ಉಪಾಧ್ಯಕ್ಷ ಎಸ್. ಅಂಬಿಕಾ, ಶಿವು, ಪುನೀತ್ ಕುಮಾರ್, ನವೀನ್, ರಾಮಚಂದ್ರ, ಗಣಪತಿ, ರತ್ನಮ್ಮ, ಚುಂಚೇಗೌಡ, ನಾಗರಾಜು, ಸಂಪತ್ ಕುಮಾರ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಘು ಎಸ್.ಗೌಡ, ಗ್ರಾಪಂ ಮಾಜಿ ಸದಸ್ಯರಾದ ಮಲ್ಲೇಗೌಡ, ಚುಂಚೇಗೌಡ, ಹೊಂಬೇಗೌಡ, ಪ್ರೇಮ್ ಕುಮಾರ್, ಗ್ರಾಪಂ ಸದಸ್ಯ ಸುಧಾರಾಜ್, ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ನಾಗೇಂದ್ರ, ಹಾಲು ಪರೀಕ್ಷಕ ಪ್ರದೀಪ್, ಗರ್ಭಧಾರಕ ಹರೀಶ್, ಹಾಗೂ ಹಾಲು ಉತ್ಪಾದಕರು, ಡೇರಿ ಸದಸ್ಯರು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ನಕಲಿ ದಾಖಲೆ ಸೃಷ್ಟಿಸಿ ದಲಿತರ ಜಮೀನು ಕಬಳಿಸುವ ದಂದೆ

ಕಡಿವಾಣ ಹಾಕಲು ಕಂದಾಯ ಸಚಿವರಿಗೆ ದಸಂಸ ಮನವಿ

ಹುಣಸೂರು, ಡಿ.5– ತಾಲೂಕಿನಾದ್ಯಾಂತ ಹಲವು ಕಡೆಗಳಲ್ಲಿ ಬಂಡವಾಳ ಶಾಹಿಗಳು ಅಧಿಕಾರಿಗಳನ್ನು ಬಳಸಿಕೊಂಡು ಅಸಹಾಯಕ ದಲಿತ ರೈತರ ಮತ್ತು ದುರ್ಬಲರ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅವರು ರೈತರ ಜಮೀನುಗಳನ್ನು ಕಬಳಿಸುವ ದಂಧೆಗೆ ಕಡಿವಾಣ ಹಾಕುವಂತೆ ದಸಂಸ (ಡಿಜಿ ಸಾಗರ್ ಬಣ) ಜಿಲ್ಲಾ ಸಂಚಾಲಕ ಕೊಳಗಟ್ಟ ಕೃಷ್ಣ, ಪ್ರಭಾರ ಉಪವಿಭಾಗಾಧಿಕಾರಿ ಮಂಜುನಾಥ್ ಮೂಲಕ ಸಚಿವರಿಗೆ ಮನವಿ ಸಲ್ಲಿಸಿದರು.

ಹುಣಸೂರು ತಾಲೂಕು ಬಿಳಿಕೆರೆ ಹೋಬಳಿ, ಕೊಳಗಟ್ಟ ಗ್ರಾಮದಲ್ಲಿ ಬಡ ರೈತ ಸೋಮಯ್ಯನ ಕುಟುಂಬದ ಸರ್ವೆ ನಂಬರ್ 69 ರಲ್ಲಿ 1 ಎಕರೆ 13 ಗುಂಟೆ ಜಮೀನನ್ನು ಕಳೆದ 70 ವರ್ಷಗಳಿಂದ ತಾತ ಮತ್ತು ತಂದೆಯವರ ಕಾಲದಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದರೂ ಆತನ ಅನುಭವವನ್ನು ಲೆಕ್ಕಿಸದೇ ಸ್ಥಳೀಯ ಅಧಿಕಾರಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಿ.ಎಸ್.ರಮೇಶನ ಪತ್ನಿ ರೇಖಾ ಮತ್ತು ಮಕ್ಕಳಾದ ರಿಷಿಕಾ.ಆರ್, ಆಶಿಕಾ. ಆರ್ ಅವರ ಹೆಸರಿಗೆ ಖಾತೆ ಮಾಡಿರುವ ಬಿಳಿಕೆರೆ ಕಂದಾಯಾಧಿಕಾರಿಗಳ ಮೇಲೆ ಕ್ರಮ ಜರುಗಿಸಿ, ಸೋಮಯ್ಯನಿಗೆ ಭೂ ದಾಖಲೆಗಳನ್ನು ಮಾಡಿಕೊಡುವಂತೆ ಒತ್ತಾಯಿಸಿದ್ದಾರೆ.

ಈ ರೀತಿ ಒಂದಲ್ಲಾ ಒಂದು ರೀತಿಯಲ್ಲಿ ದಲಿತರ ಅಸಹಾಯಕ ಬಡವರ ಮೇಲೆ ಆಗುತ್ತಿರುವ ಅನ್ಯಾಯ ವಂಚನೆಯನ್ನು ದಸಂಸವು ತೀವ್ರವಾಗಿ ಖಂಡಿಸುತ್ತಾ ಸರ್ಕಾರಕ್ಕೆ ಆಗ್ರಹಿಸಿ ದಲಿತರಿಗೆ ನ್ಯಾಯ ಒದಗಿಸಿ ರಕ್ಷಣೆ ಕೊಡಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಇಂದು ತಿ.ನರಸೀಪುರದ ಕೆಲವೆಡೆ ವಿದ್ಯುತ್ ವ್ಯತ್ಯಯ

ತಿ.ನರಸೀಪುರ, ಡಿ.5– ವ್ಯಾಸರಾಜಪುರ ವಿ.ವಿ.ಕೇಂದ್ರದ ಮೂರನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಡಿ.6ರಂದು



ಬೆಳಗ್ಗೆ 10 ಘಂಟೆಯಿಂದ ಸಂಜೆ 5 ಗಂಟೆವರೆಗೆ ವ್ಯಾಸರಾಜಪುರ, ಸಿದ್ದನಹುಂಡಿ, ಎಸ್.ಕೆಬ್ಬೇಹುಂಡಿ, ಕನ್ನಾಯಕನಹಳ್ಳಿ, ಚಿಕ್ಕಲಕ್ಷ್ಮೀಪುರ, ಉಕ್ಕಲಗೆರೆ, ಎಂ.ಎಲ್ ಹುಂಡಿ, ಕಳ್ಳೀಪುರ, ಬೂದಳ್ಳಿ, ತಮ್ಮಡಿಪುರ, ವೀರಪ್ಪ ಒಡೆಯರಹುಂಡಿ, ಹಸುವಟ್ಟಿ, ಚಿಕ್ಕಬೂವಳ್ಳಿ, ಹೊರಳಹಳ್ಳಿ, ನೆರೆಗ್ಯಾತನಹಳ್ಳಿ, ನಾಗಲಗೆರೆ, ಶ್ರೀರಾಮಪುರ, ಕೈಯಂಬಳ್ಳಿ, ಕೃಷ್ಣಾಪುರ, ಸೋಸಲೆ, ಎಸ್‌ಕೆಪಿ ಅಗ್ರಹಾರ, ಬೆನಕಹಳ್ಳಿ, ಕೋಳಿಮಲ್ಲನಹುಂಡಿ, ಕೆಂಡನಕೊಪ್ಪಲು, ಮೇಗಡಹಳ್ಳಿ ಎ.ಬಿ.ಸಿ, ಮುಸುವಿನಕೊಪ್ಪಲು, ಎಂ.ಕೆಬ್ಬೆಹುಂಡಿ, ಹುಳುಕನ ಹುಂಡಿ, ಗ್ರಾಮಗಳು/ ಗ್ರಾಮ ಪಂಚಾಯಿತ್ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನೂತನ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಚಾಲನೆ

ನಂಜನಗೂಡು: ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಿ ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ತಾಲೂಕಿನ ವರುಣಾ ಕ್ಷೇತ್ರ ವ್ಯಾಪ್ತಿಯ ಆಯ್ದ ಗ್ರಾಮಗಳಲ್ಲಿ 3 ಕೋಟಿ 60 ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಗುದ್ದಲಿ ಪೂಜೆ ನೆರವೇರಿಸಿದರು.

ತಾಲೂಕಿನ ತಾಂಡವಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನೂತನ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು

ತಾಲೂಕಿನ ಕಿರಗುಂದ ಗ್ರಾಮದಲ್ಲಿ 15 ಲಕ್ಷ ಹೊಸಕೋಟೆಯಲ್ಲಿ 30 ಲಕ್ಷ ಬೊಕ್ಕಹಳ್ಳಿ ಗ್ರಾಮದಲ್ಲಿ 45 ಲಕ್ಷ, ಸುತ್ತೂರು ಗ್ರಾಮದಲ್ಲಿ 30 ಲಕ್ಷ, ಮರಳೂರು ಗ್ರಾಮದಲ್ಲಿ 30 ಲಕ್ಷ, ಬೀದರಗೂಡು ಗ್ರಾಮದಲ್ಲಿ 30 ಲಕ್ಷ, ತಾಂಡವಪುರ ಗ್ರಾಮದಲ್ಲಿ 30 ಲಕ್ಷ, ನಗರ್ಲೆ ಗ್ರಾಮದಲ್ಲಿ 30 ಲಕ್ಷ ಸೇರಿದಂತೆ ಒಟ್ಟು 2 ಕೋಟಿ 40 ಲಕ್ಷ ವೆಚ್ಚದಲ್ಲಿ 8 ಗ್ರಾಮಗಳಲ್ಲಿ 16 ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು, ಜೊತೆಗೆ ತಾಲೂಕಿನ ಮಲ್ಲೂಪುರ ಗ್ರಾಮದಲ್ಲಿ 30 ಲಕ್ಷ, ಗೋಣಹಳ್ಳಿ 30 ಲಕ್ಷ, ಬಿದರಗೂಡು 45 ಲಕ್ಷ ಹಾರೋಪುರ ಗ್ರಾಮದಲ್ಲಿ 15 ಲಕ್ಷ ವೆಚ್ಚದಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ ಶಾಲಾ ಕೊಠಡಿಗಳನ್ನು ಉದ್ಘಾಟನೆಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.


ಶಾಲಾ ಕೊಠಡಿ ನಿರ್ಮಾಣಕ್ಕೆ ಎಂಎಲ್ಸಿ ಡಾ.ಯತೀಂದ್ರ ಗುದ್ದಲಿ ಪೂಜೆ ನೆರವೇರಿಸಿದರು.

ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು ಮಾತನಾಡಿದರು.

ಇದೇ ಸಂದರ್ಭದಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯರಂಗಸ್ವಾಮಿ, ಜಿಪಂ ಮಾಜಿ ಸದಸ್ಯ ದಯಾನಂದ, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಜ್ಯೋತಿ, ಸದಸ್ಯರಾದ ರಾಮು, ರವಿ, ಮಹೇಶ್, ಮುಖಂಡರಾದ ದಕ್ಷಿಣಮೂರ್ತಿ, ರವಿಪ್ರಕಾಶ್, ಟಿ.ಎಲ್. ಮೋಹನ್ ಕುಮಾರ್, ರವಿಪ್ರಕಾಶ್, ಬಿ.ಪಿ.ಮಹದೇವು, ಹೆಬ್ಯಾ ರಾಜು, ಪ್ರಕಾಶ್, ಗ್ರಾಪಂ ಸದಸ್ಯ ರೇವಮ್ಮ, ಗಿರಿಧರ್, ಕಲ್ಮಹಳ್ಳಿಬಾಬು, ಮುದ್ದುಮಾದೇಗೌಡ, ಮಡಿವಾಳ ಸಮುದಾಯ ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಎನ್. ಮಹೇಶ್ ಕುಮಾರ್, ಎಇಇ ಮಂಜುನಾಥ್, ಎಇ ಸುಶ್ಮಿತಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಆರೋಗ್ಯಕರ ಮೈಸೂರು ಉದ್ದೇಶಿತ 'ಸ್ವಸ್ಥ ಮೈಸೂರು' ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ

- ಈ ವಿನೂತನ ಕಾರ್ಯಕ್ರಮಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಪೂರ್ಣ ಸಹಕಾರ: ಸಚಿವ ದಿನೇಶ್ ಗುಂಡೂರಾವ್
- ಮೈಸೂರನ್ನು ಆರೋಗ್ಯ ನಗರವನ್ನಾಗಿ ರೂಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆರಂಭ: ಪ್ರಮೋದಾದೇವಿ ಒಡೆಯರ್



'ಸ್ವಸ್ಥ ಮೈಸೂರು' ಉದ್ಘಾಟನಾ ಸಮಾರಂಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು. ಜೆರಿಯಾಟ್ರಿಕ್ಸ್ ತಜ್ಞೆ ಡಾ.ಪ್ರತಿಭಾ ಪಿರೇರಾ, ಯೋಗಗುರು ಆಚಾರ್ಯ ಭರತ್ ಶೆಟ್ಟಿ, ಆರೋಗ್ಯ ವರ್ಲ್ಡ್ ಇಂಡಿಯಾ ಟ್ರಸ್ಟ್‌ನ ಡಾ.ನಳಿನಿ ಸಾಲಿಗ್ರಾಮ್, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಖ್ಯಾತ ಹಿರಿಯ ವೈದ್ಯರಾದ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ, ಡಾ.ಖಾದರ್ ವಲಿ, ಜಿಲ್ಲಾ ಕಣ್ಗಾವಲು ಅಧಿಕಾರಿ ಡಾ.ನಾಗರಾಜು ಉಪಸ್ಥಿತರಿದ್ದರು.

ಮೈಸೂರು, ಡಿ.5(ಎಂಕೆ)– ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್, ಆರೋಗ್ಯ ವರ್ಲ್ಡ್ ಇಂಡಿಯಾ ಟ್ರಸ್ಟ್ ವತಿಯಿಂದ ಸರ್ಕಾರಿ ಮತ್ತು ಖಾಸಗಿ ಸಂಘ–ಸಂಸ್ಥೆಗಳ ಹಾಗೂ ನಾಗರಿಕರ ಸಹಯೋಗದೊಂದಿಗೆ ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣದ ಮೂಲಕ ಆರೋಗ್ಯಕರ ಮೈಸೂರು ರೂಪಿಸಲು ಉದ್ದೇಶಿಸಿರುವ 'ಸ್ವಸ್ಥ ಮೈಸೂರು' ವಿನೂತನ ಜಾಗೃತಿ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಮೈಸೂರಿನ ಬುಲೆವಾರ್ಡ್ ರಸ್ತೆಯಲ್ಲಿರುವ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ 'ಸ್ವಸ್ಥ ಮೈಸೂರು' ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಸ್ವಸ್ಥ ಮೈಸೂರು' ಮಹತ್ವದ ಉದ್ದೇಶಿತ ಹಾಗೂ ಮೈಸೂರಿನ ಆರೋಗ್ಯ ಸ್ಥಿತಿಯನ್ನು ಉನ್ನತೀಕರಣಗೊಳಿಸುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದ ಯಶಸ್ವಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಪೂರ್ಣ ಸಹಕಾರ ನೀಡಲಿದ್ದು, ಕಾರ್ಯಕ್ರಮ ಯಶಸ್ವಿಯಾಗಿ ಆರೋಗ್ಯಕರ ಸ್ವಸ್ಥ ಮೈಸೂರು ನಿರ್ಮಾಣವಾಗಲಿ ಎಂದು ಹಾರೈಸಿದರು.

ಸರ್ಕಾರವೇ ಎಲ್ಲಾ ಕಾರ್ಯಕ್ರಮಗಳನ್ನು ಮಾಡಬೇಕು ಎಂಬುದಿಲ್ಲ. ಸಂಘ–ಸಂಸ್ಥೆಗಳು ಕೈ ಜೋಡಿಸಿದರೆ ಮಾತ್ರವೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸಿದ್ದ ಸ್ವಸ್ಥ ಬೆಂಗಳೂರು ಕಾರ್ಯಕ್ರಮದ ಯಶಸ್ಸಿನ ಬಳಿಕ ಸ್ವಸ್ಥ ಮೈಸೂರು ಕಾರ್ಯಕ್ರಮ ಆಯೋಜನೆ ಅಭಿನಂದನಾರ್ಹವಾಗಿದೆ. ಜನರು ಆರೋಗ್ಯವಾಗಿದ್ದರೆ ಮಾತ್ರವೇ ಸಮಾಜ ಆರೋಗ್ಯವಾಗಿರಲಿದೆ. ಆರೋಗ್ಯಕರ ಸಮಾಜದಿಂದ ದೇಶದ ಅಭಿವೃದ್ಧಿಯೂ ಆಗಲಿದೆ. ಉತ್ತಮ ಆರೋಗ್ಯವೇ ಎಲ್ಲದಕ್ಕೂ ಪ್ರೇರಣೆ ಎಂದರು.

ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳದ ಕಾರಣದಿಂದಾಗಿಯೇ ದೇಶದಲ್ಲಿಂದು ಡಯಾಬಿಟಿಸ್, ರಕ್ತದೊತ್ತಡ, ಕ್ಯಾನ್ಸರ್ ಇನ್ನಿತರ ಸಾಂಕ್ರಾಮಿಕವಲ್ಲದ ರೋಗಗಳು ಹೆಚ್ಚಾಗುತ್ತಿವೆ. ಜೊತೆಗೆ ಡಿಜಿಟಲ್‌ನ ಅತಿಯಾದ ಬಳಕೆಯಿಂದ ಮಕ್ಕಳಲ್ಲಿಯೂ ಮಾನಸಿಕ ಆರೋಗ್ಯ ಸಮಸ್ಯೆ ಹೆಚ್ಚಾಗುತ್ತಿದೆ. ಇದನೆಲ್ಲಾ ನೋಡಿಕೊಂಡು ಕೂರಲು ಸಾಧ್ಯವಿಲ್ಲ. ಜನರಿಗೆ ಆರೋಗ್ಯ ಕಾಪಾಡಿಕೊಳ್ಳುವಂತೆ ತಿಳಿ ಹೇಳುವುದು ಅನಿವಾರ್ಯವಾಗಿದೆ. ಆದ್ದರಿಂದ 'ಸ್ವಸ್ಥ ಮೈಸೂರು' ಕಾರ್ಯಕ್ರಮ ಅನಿವಾರ್ಯ ಮತ್ತು ಅಗತ್ಯವಾಗಿದ್ದು, ದೀರ್ಘಕಾಲದವರೆಗೆ ಈ ಕಾರ್ಯಕ್ರಮ ಮುಂದುವರೆಯಲಿದ್ದು, ಆರೋಗ್ಯಕರ ಮೈಸೂರು ನಿರ್ಮಾಣವಾಗಲಿ ಎಂದು ಆಶಿಸಿದರು.

ಎರಡನೇ ನಗರ: ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಮಾತನಾಡಿ, ಮೈಸೂರನ್ನು ಆರೋಗ್ಯ ನಗರವನ್ನಾಗಿ ರೂಪಿಸುವ ಉದ್ದೇಶದಿಂದ 'ಸ್ವಸ್ಥ ಮೈಸೂರು' ಕಾರ್ಯಕ್ರಮ ರೂಪಿಸಲಾಗಿದೆ. ಈಗಾಗಲೇ ಬೆಂಗಳೂರಿನಲ್ಲಿ ಆರಂಭಿಸಿ, ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮೈಸೂರು ಎರಡನೇ ನಗರವಾಗಿದ್ದು, ಕಾರ್ಯಕ್ರಮ ಯಶಸ್ಸಿಗೆ ಸಹಕಾರ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ 2 ವರ್ಷದ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಆರೋಗ್ಯ ವರ್ಲ್ಡ್ ಇಂಡಿಯಾ ಟ್ರಸ್ಟ್‌ನ ಡಾ.ನಳಿನಿ ಸಾಲಿಗ್ರಾಮ್, ಯೋಗಗುರು ಆಚಾರ್ಯ ಭರತ್ ಶೆಟ್ಟಿ, ಖ್ಯಾತ ವೈದ್ಯರಾದ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ, ಡಾ.ಖಾದರ್ ವಲಿ, ಜಿಲ್ಲಾ ಕಣ್ಗಾವಲು ಅಧಿಕಾರಿ ಡಾ.ನಾಗರಾಜು, ಡಾ.ಪ್ರತೀಭಾ ಪೇರೆರಾ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ಗೌರವ ಕಾರ್ಯದರ್ಶಿ ರಿಜಿನಲ್ ವೆಸ್ಲಿ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿಯಲ್ಲಿರುವ ಕಿತ್ತಾಟ, ಗೊಂದಲ ನಮ್ಮಲ್ಲಿಲ್ಲ; ಸಿಎಂ, ಡಿಸಿಎಂ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಿದ್ದಾರೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ

ಮೈಸೂರು, ಡಿ.5(ಎಂಕೆ)– ಬಿಜೆಪಿಯಲ್ಲಿ ರುವ ಕಿತ್ತಾಟ ಗೊಂದಲ ನಮ್ಮಲ್ಲಿ ಇಲ್ಲ. ಸಿಎಂ ಮತ್ತು ಡಿಸಿಎಂ ಸೇರಿ ದಂತೆ ಎಲ್ಲರೂ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮೈಸೂರಿನಲ್ಲಿ ಶುಕ್ರವಾರ ಸಿಎಂ ಬದಲಾವಣೆ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯ ಗಳಿಲ್ಲ. ಎಲ್ಲರಿಗೂ ಸಿಎಂ ಆಗ್ಬೇಕು ಅನ್ನೋ ಆಸೆ ಇದ್ದೆ ಇರುತ್ತೆ. ಆದ್ರೆ ಯಾರು ಆಗ್ಬೇಕು ಎಂಬುದನ್ನು ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದರು.

ಸಿಎಂ ರೇಸ್‌ನಲ್ಲಿ ನೀವು ಇದ್ದಿರಾ ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿ, ನನ್ನನ್ನು ಯಾಕೆ ಎಳೆದು ತರ್ತಾ ಇದ್ದಿರಾ... ನನಗೂ ಆಸೆ ಇದೆ. ಆದರೆ ಸಮಯ, ಸಂದರ್ಭ ಎಲ್ಲವನ್ನು ಡಿಸೈಡ್ ಮಾಡಲಿದೆ. ಒಟ್ಟಿನಲ್ಲಿ ಕಾಂಗ್ರೆಸ್ ಹೈ ಕಮಾಂಡ್ ತೀರ್ಮಾನವೇ ಅಂತಿಮ. ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಒಬ್ಬರಿಗೊಬ್ಬರು ಕಿತ್ತಾಡಿಕೊಂಡು ಜಗದೀಶ್ ಶೆಟ್ಟರ್, ಸದಾನಂದಗೌಡ ಸಿಎಂ ಆದ್ರೂ. ಅವರ ರೀತಿಯ ಕಿತ್ತಾಟ ಗೊಂದಲ ನಮ್ಮಲ್ಲಿ ಇಲ್ಲ. ನಿನ್ನೆ ನಡೆದ ಸಭೆಯಲ್ಲೂ ಕೂಡ ಎಲ್ಲರೂ ಒಟ್ಟಾಗಿ ಭಾಗಿಯಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ನಿಷ್ಕ್ರಿಯವಾಗಿದೆ: ರಾಜ್ಯದಲ್ಲಿ ವಿಪಕ್ಷ ಸ್ಥಾನದಲ್ಲಿರುವ ಬಿಜೆಪಿ ಸಂಪೂರ್ಣ ನಿಷ್ಕ್ರಿಯವಾಗಿದೆ. ಕೇವಲ ಭಾಷಣ ಬಿಗಿಯುವುದರಲ್ಲಿ ವಿಜಯೇಂದ್ರ, ಆರ್.ಅಶೋಕ್, ಪ್ರಹ್ಲಾದ್ ಜೋಶಿ ಅವರು ಬ್ಯುಸಿಯಾಗಿದ್ದಾರೆಯೇ ಹೊರತು ರಾಜ್ಯದ ರೈತರ ಸಮಸ್ಯೆಗಳನ್ನು ಕೇಂದ್ರಕ್ಕೆ ತಲುಪಿಸುವ ಕೆಲಸ ಮಾಡುತ್ತಿಲ್ಲ. ರಾಜ್ಯದ ಬಿಜೆಪಿ ಸಂಸದರು ರಾಜ್ಯದ ಪರ ಧ್ವನಿ ಎತ್ತುತ್ತಿಲ್ಲ. ಇವರಿಗೇನು ಜವಾಬ್ದಾರಿ ಇಲ್ವಾ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಸ್ತಿ ಪೊಲೀಸ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಅಖಂಡ–2 (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಮಾಸ್ ಯಾತ್ರಾ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಂ (ಕ)	4 ಪ್ರದರ್ಶನಗಳು

ಮೈಸೂರು ವಿಮಾನ ನಿಲ್ದಾಣದಿಂದ ವಿಮಾನಗಳ ಹಾರಾಟ ವಿಳಂಬ



ಮೈಸೂರು ಡಿ. 5 (ಆರ್‌ಕೆ)– ಮೈಸೂರಿನಿಂದ ಹೈದರಾಬಾದ್ ಮತ್ತು ಚೆನ್ನೈಗೆ ಸಂಪರ್ಕ ಕಲ್ಪಿಸುವ ಇಂಡಿಗೋ ವಿಮಾನಗಳು ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಗುರುವಾರ ತಡವಾಗಿ ಪ್ರಯಾಣ ಆರಂಭಿಸಿದವು.

ಗುರುವಾರ ಮಧ್ಯಾಹ್ನ 1 ಗಂಟೆಗೆ ಮೈಸೂರಿಗೆ ಬರಬೇಕಾಗಿದ್ದ ಹೈದರಾಬಾದ್‌ಗೆ ಸಂಪರ್ಕ ಕಲ್ಪಿಸುವ ಇಂಡಿಗೋ ವಿಮಾನವು ಮಧ್ಯಾಹ್ನ 3.30ಕ್ಕೆ ಆಗಮಿಸಿತು. ಅದೇ ರೀತಿ ರಾತ್ರಿ 7 ಗಂಟೆಗೆ ಆಗಮಿಸಬೇಕಿದ್ದ ಚೆನ್ನೈ ವಿಮಾನವು ರಾತ್ರಿ 9.30ಕ್ಕೆ ಬಂದಿಳಿಯಿತು. ಚೆನ್ನೈ ಮತ್ತು ಹೈದರಾಬಾದ್‌ನಿಂದ ತಡವಾಗಿ ಬಂದ ಈ ಎರಡೂ ವಿಮಾನಗಳು 20 ನಿಮಿಷದ ಬಳಿಕ ಮೈಸೂರಿನಿಂದ ಟೇಕ್ ಆಫ್ ಆದವು.

ಸುರಕ್ಷತೆ ದೃಷ್ಟಿಯಿಂದ ಪೈಲಟ್‌ಗಳು 6 ಗಂಟೆಗಿಂತ ಹೆಚ್ಚುಕಾಲ ವಿಮಾನ ಹಾರಾಟ ಮಾಡುವಂತಿಲ್ಲ ಎಂಬ ನಿಯಮವನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ವು ರೂಪಿಸಿರುವುದರಿಂದ ಅದನ್ನು ವಿರೋಧಿಸಿ ಪೈಲೆಟ್‌ಗಳು ದೇಶಾದ್ಯಂತ ಮೌನ ಪ್ರತಿಭಟನೆ ಮಾಡುತ್ತಿರುವ ಕಾರಣ ವಿಮಾನಗಳ ಹಾರಾಟ ವಿಳಂಬವಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಎಂದಿನಂತೆ ಚೆನ್ನೈ ಮತ್ತು ಹೈದರಾಬಾದ್ ವಿಮಾನಗಳಷ್ಟೇ ಸಂಚರಿಸುತ್ತಿವೆ. ಗುರುವಾರ ಮಾತ್ರವೇ ವಿಳಂಬವಾಗಿದೆ. ಆದರೆ, ಇಂದು ಹಾರಾಟ ಸ್ಥಗಿತಗೊಂಡಿರುವ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ನಿಲ್ದಾಣದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಭಗವದ್ಗೀತಾ ಸಪ್ತಾಹಕ್ಕೆ ತೆರೆ



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಆದಿ ಶಂಕರ ಮಠದಲ್ಲಿ ಕೊಂಡಲಮ್ ಸುಬ್ರಹ್ಮಣ್ಯಂ ಕುಟುಂಬದವರು ಏರ್ಪಡಿಸಿದ್ದ ಭಗವದ್ಗೀತಾ ಸಪ್ತಾಹ ಗುರುವಾರ ಮುಕ್ತಾಯವಾಯಿತು. ಚಂದ್ರಮೌಳಿ ಎಸ್., ಶಶಿಕಲಾ ಕುಮಾರ್, ವಿ.ಎಸ್. ಪ್ರಕಾಶ್, ವಿ . ಶೈಲಜಾ, ಡಾ. ವಿ. ಶ್ರೀಮತಿ, ರಾಜೇಶ್ವರಿ ಸುಬ್ರಹ್ಮಣ್ಯಂ, ಕೆ.ಎಸ್. ಸುಬ್ರಹ್ಮಣ್ಯಂ, ವಿ. ಶ್ರೀನಿವಾಸ ಇನ್ನಿತರರಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.5– ಕಡಕೊಳ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.7 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಕಡಕೊಳ, ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯಾ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ, ಬಿರೇಗೌಡನಹುಂಡಿ, ಕೆ.ಎಂ.ಹುಂಡಿ, ಬಿ.ಜಿ.ಹುಂಡಿ, ಕೆ.ಎನ್.ಹುಂಡಿ, ಆಯರಹಳ್ಳಿ, ಕಿರಾಳು, ದೂರ, ಮುರುಡಗಳ್ಳಿ, ತಳೂರು, ಡಿ. ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದರ್ಶನ್ ಮನೆಯಲ್ಲಿ ಪತ್ತೆಯಾದ 82 ಲಕ್ಷ ಸದ್ಯ ಆದಾಯ ತೆರಿಗೆ ಇಲಾಖೆಯಲ್ಲಿರಲಿ

ಬಿಗ್ ಶಾಕ್ ನೀಡಿದ ಕೋರ್ಟ್ ಆದೇಶ



ಬೆಂಗಳೂರು, ಡಿ.5– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ರುವ ನಟ ದರ್ಶನ್ ಅವರ ಮನೆಯಲ್ಲಿ ಪತ್ತೆಯಾಗಿರುವ 82 ಲಕ್ಷ ರೂ. ಆದಾಯ ತೆರಿಗೆ ಇಲಾಖೆಯಲ್ಲೇ ಇರಲಿ ಎಂದು 57ನೇ ಸಿಸಿಎಚ್ ಕೋರ್ಟ್ ಆದೇಶ ಹೊರಡಿಸಿ ಬಿಗ್‌ಶಾಕ್ ನೀಡಿದೆ.

ಅಲ್ಲದೆ, ಕೊಲೆ ಪ್ರಕರಣದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸಾಕ್ಷ್ಯ ನಾಶಪಡಿಸಲು ಮತ್ತು ತನ್ನ ಹೆಸರು ಬಹಿರಂಗವಾಗ ದಂತೆ ನೋಡಿಕೊಳ್ಳಲು ಕೆಲ ಆರೋಪಿ ಗಳಿಗೆ ದರ್ಶನ್ ನೀಡಿದ್ದ ಹಣದ ಮೂಲದ ಕುರಿತು ವಿಚಾರಣೆ ನಡೆಸಲು ಆದಾಯ ತೆರಿಗೆ ಇಲಾಖೆಗೆ ಅನುಮತಿ ನೀಡಿ, ನ್ಯಾಯಾಲಯ ಆದೇಶಿಸಿದೆ.

ಪ್ರಕರಣ ಸಂಬಂಧ ದರ್ಶನ್ ಮತ್ತು ಇತರೆ ಆರೋಪಿಗಳಿಂದ ವಶಪಡಿಸಿಕೊಂಡಿ ರುವ ಸುಮಾರು 82 ಲಕ್ಷರೂ. ಹಣದ ಮೂಲದ ಬಗ್ಗೆ ತನಿಖೆ ನಡೆಸ ಬೇಕಿದೆ. ಆ ಹಣವನ್ನು ತಮ್ಮ ಸುಪರ್ದಿಗೆ ನೀಡಲು ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರಿಗೆ ನಿರ್ದೇಶಿಸು ವಂತೆ ಕೋರಿ ಆದಾಯ ತೆರಿಗೆ ಇಲಾಖೆ ಅರ್ಜಿ ಸಲ್ಲಿಸಿತ್ತು ಈ ಅರ್ಜಿ ಪುರಸ್ಕರಿಸಿರುವ ನ್ಯಾಯಾಧೀಶರು, ಆರೋಪಿಗಳಿಂದ ವಶಪಡಿಸಿಕೊಂಡಿರುವ ಹಣವನ್ನು ಆದಾಯ ತೆರಿಗೆ ಇಲಾಖೆಯ ಸುಪರ್ದಿಗೆ ನೀಡುವಂತೆ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರಿಗೆ ನಿರ್ದೇಶಿಸಿದ್ದರು.

ಈ ಹಣ ದರ್ಶನ್ ಮನೆಗೆ ಹೇಗೆ ಬಂತೆಂದು ದರ್ಶನ್ ಪರ ವಕೀಲರು ವಾದಿಸಿದ್ದರು. ದರ್ಶನ್ ಅವರು ಮೋಹನ್‌ರಾಜ್ ಎಂಬುವರಿಗೆ 40 ಲಕ್ಷ ರೂಗಳನ್ನು ಸಾಲವಾಗಿ ಹಣ ನೀಡಿದ್ದರು. ಮೋಹನ್‌ರಾಜ್ ಅವರು ಅದನ್ನು ದರ್ಶನ್‌ಗೆ ಮರಳಿಸಿದ್ದರು. ದರ್ಶನ್ ಇದನ್ನು ತಮ್ಮ ನಿವಾಸದಲ್ಲಿಯೇ ಇಟ್ಟಿದ್ದರು. ಅಲ್ಲದೆ, 25 ಲಕ್ಷ ರೂ. ಕೃಷಿಯಿಂದಲೂ. 15 ಲಕ್ಷ ರೂ ಪಶು ಸಂಗೋಪನೆಯಿಂದ ಬಂದಿದೆ ಎಂದು ದರ್ಶನ್ ಪರ ವಕೀಲರು ಹೇಳಿದ್ದರು. ಇದಕ್ಕೆ ಆದಾಯ ತೆರಿಗೆ ಇಲಾಖೆ ದರ್ಶನ್ ಈ ಹಣಕ್ಕೆ ಸೂಕ್ತ ದಾಖಲೆಯನ್ನು ಸಲ್ಲಿಕೆ ಮಾಡಿಲ್ಲ ಇದು ವಂಚನೆಯ ಹಣ ಎಂದು ವಾದಿಸಿತ್ತು.

ಮತ್ತೇ ಇದೀಗ ಆದಾಯ ತೆರಿಗೆ ಇಲಾಖೆ ಬಳಿ ಇರುವ ಹಣವನ್ನು ತನಗೆ ವಾಪಸ್ ಮಾಡುವಂತೆ ಆದೇಶಿಸಬೇಕೆಂದು ದರ್ಶನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಆಕ್ಷೇಪಣೆ ಎತ್ತಿದ ಐಟಿ, ದರ್ಶನ್ ಇದೂವರೆಗೂ ಸ್ಪಷ್ಟ ಮಾಹಿತಿ ನೀಡಿಲ್ಲ. ಹೀಗಾಗಿ ತನಿಖೆ ಮುಂದುವರೆಸಬೇಕಾಗಿದೆ ಎಂದಿತ್ತು. ವಾದ– ಪ್ರತಿವಾದ ಆಲಿಸಿದ ನ್ಯಾಯಾಲಯ 82 ಲಕ್ಷ ಹಣ ಐಟಿ ಬಳಿಯಲ್ಲೇ ಇರಲಿ, ತನಿಖೆ ಮುಂದುವರೆಸಲಿ ಎಂದು ಆದೇಶಿಸಿದೆ.

ಆದಾಯ ಮಿತಿ 8 ಲಕ್ಷ ದಾಟಿದರೆ ಹಿಂದುಳಿದ ಮೀಸಲು ಅಲಭ್ಯ: ಹೈಕೋರ್ಟ್

ಆದಾಯ ಮಿತಿ ದಾಟಿದ್ದರೆ ಕೆನೆ ಪದರ ವ್ಯಾಪ್ತಿಗೆ । ಪ್ರವರ್ಗ 2-ಎ: ಸರ್ಕಾರದ ಮೇಲ್ಮನವಿ ಮಾನ್ಯ

ಬೆಂಗಳೂರು: ಪ್ರವರ್ಗ 2–ಎ (ಹಿಂದುಳಿದ ವರ್ಗ) ಅಡಿಯಲ್ಲಿ ಪೋಷಕರ ವಾರ್ಷಿಕ ಆದಾಯ ನಿಗದಿತ ಮಿತಿಯನ್ನು ದಾಟಿದ್ದರೆ ಅಭ್ಯರ್ಥಿಯು ಕೆನೆ ಪದರ ವ್ಯಾಪ್ತಿಗೆ ಒಳಪಡುತ್ತಾರೆ. ಹಾಗಾಗಿ, ಅವರು ಮೀಸಲಾತಿ ಪತ್ರ ಪಡೆಯಲು ಅನರ್ಹರಾಗುತ್ತಾರೆ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಾತಿ, ಆದಾಯ ಪರಿಶೀಲನಾ ಮೇಲ್ಮನವಿ ಪ್ರಾಧಿಕಾರ ಮತ್ತು ಧಾರವಾಡ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಅಧ್ಯಕ್ಷರು ಸಲ್ಲಿಸಿದ್ದ ರಿಟ್ ಮೇಲ್ಮನವಿ ಮತ್ತು ನ್ಯಾಯಾಂಗ ನಿಂದನಾ ಅರ್ಜಿಗಳ (ಡಬ್ಲ್ಯು.ಎ 301/2025 ಜಿ–ಎಂ ಸಿಸಿ ಮತ್ತು ಸಿಸಿಪಿ 74/2025) ವಿಚಾರಣೆ ನಡೆಸಿದ ಮುಖ್ಯ ನ್ಯಾಯ ಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಸರ್ಕಾರದ ಪರ ವಾದ ಮಂಡಿಸಿದ್ದ ನಮಿತಾ ಮಹೇಶ್ ಅವರ ವಾದವನ್ನು ಮನ್ನಿಸಿರುವ ನ್ಯಾಯಪೀಠ, 'ಅಭ್ಯರ್ಥಿಯ ಪೋಷಕರ ಸಂಬಳವೂ ಸೇರಿದಂತೆ ಎಲ್ಲ ಮೂಲಗಳ ಆದಾಯವನ್ನು ಪರಿಗಣಿಸಬೇಕು. ಒಂದು ವೇಳೆ ಆದಾಯವು ನಿಗದಿತ ಮಿತಿಯನ್ನು ದಾಟಿದ್ದರೆ, ಆದಾಯ ತೆರಿಗೆ ಪಾವತಿದಾರ ಆಗಿದ್ದರೆ ಆಗ ಆತನಿಗೆ ಕೆನೆ ಪದರ ನಿಯಮ ಅನ್ವಯ ಆಗುತ್ತದೆ ಮತ್ತು ಅಭ್ಯರ್ಥಿಯು ಪ್ರವರ್ಗ 2–ಎ ಅಡಿ ಮೀಸಲಾತಿಯ ಅಧಿಕಾರ ಹೊಂದುವ ಬೇಡಿಕೆ ಸಲ್ಲಿಸಲು ಅವಕಾಶ ಹೊಂದಿರುವುದಿಲ್ಲ' ಎಂದು ತೀರ್ಪಿನಲ್ಲಿ ವಿವರಿಸಿದೆ.

ಪ್ರಕರಣವೇನು: ಕೆಪಿಟಿಸಿಎಲ್ ಸಹಾಯಕ ಎಂಜಿನಿಯರ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಧಾರವಾಡದ ರಾಘವೇಂದ್ರ ಫಕ್ಕೀರಪ್ಪ ಚಂದ್ರಣ್ಣನವರ ಪ್ರವರ್ಗ 2–ಎ (ಕುರುಬ ಜಾತಿ) ಅಡಿ ಆಯ್ಕೆಯಾಗಿದ್ದರು. ಅದರಂತೆ ಮೀಸಲಾತಿ ಪತ್ರಕ್ಕಾಗಿ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನೆ ಸಮಿತಿಗೆ ಅರ್ಜಿ ಸಲ್ಲಿಸಿದ್ದರು.

ಸಮಿತಿಯು, ಅಭ್ಯರ್ಥಿಯ ಪೋಷಕರ ಆದಾಯವು ಪ್ರವರ್ಗ–2ಎಗೆ ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿಯಾದ 8 ಲಕ್ಷ ಮೀರುತ್ತಿರುವ ಕಾರಣ ಅವರು ಹಿಂದುಳಿದ ವರ್ಗಗಳಡಿ ಮೀಸಲಾತಿ ಪಡೆಯಲು ಅರ್ಹರಲ್ಲ ಎಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ರಾಘವೇಂದ್ರ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ 2024ರ ಅಕ್ಟೋಬರ್‌ನಲ್ಲಿ, 'ಅಭ್ಯರ್ಥಿಯು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹ' ಎಂದು ತೀರ್ಪು ನೀಡಿತ್ತು. ಏಕಸದಸ್ಯ ನ್ಯಾಯ ಪೀಠದ ಆದೇಶವನ್ನು ಸರ್ಕಾರ ವಿಭಾಗೀಯ ನ್ಯಾಯಪೀಠದಲ್ಲಿ ಪ್ರಶ್ನಿಸಿತ್ತು.

ಮೈಸೂರು ನಗರದಲ್ಲಿ ಈಗಿರುವ ಹಾಲಿನ ಬೂತ್‌ಗಳೇ ಸಾಕು; ಇದರಲ್ಲೂ ಪೈಪೋಟಿಗಿಳಿಯಬೇಡಿ

- ಶಾಸಕ ಹರೀಶ್‌ಗೌಡರ ಸಲಹೆ
- ಎಂಡಿಎ, ಪಾಲಿಕೆ ವ್ಯಾಪ್ತಿಗೆ ಸೇರಿದ ಜಾಗದಲ್ಲಿನ್ನು ಸ್ಥಳಾವಕಾಶ ಇಲ್ಲ



ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘವನ್ನು ಉದ್ಘಾಟಿಸಲಾಯಿತು. ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರಿದ್ದರು.

ಮೈಸೂರು,ಡಿ.5(ಎಸ್‌ಪಿಎನ್)– ಮೈಸೂರು ನಗರದ ಎಂಡಿಎ ಮತ್ತು ಪಾಲಿಕೆ ವ್ಯಾಪ್ತಿಗೆ ಸೇರಿದ ಜಾಗದಲ್ಲಿ ಹೊಸ ಹಾಲಿನ ಬೂತ್‌ಗಳಿಗೆ ಸ್ಥಳಾವಕಾಶ ನೀಡದಂತೆ ನಿರ್ಬಂಧಿಸಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಭವನದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ವತಿಯಿಂದ ಏರ್ಪಡಿಸಿದ್ದ ಸಂಘದ ಉದ್ಘಾಟನೆ ಹಾಗೂ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈಗಾಗಲೇ ಸಾವಿರಕ್ಕೂ ಅಧಿಕ ಹಾಲು ಮಾರಾಟಗಾರರ ಬೂತ್‌ಗಳನ್ನು ನೀಡಲಾಗಿದೆ. ಇದಕ್ಕಿಂತ ಹೆಚ್ಚಿಗೆ ಸಾರ್ವಜನಿಕ ಸ್ಥಳದಲ್ಲಿ ಹಾಲು ಬೂತ್‌ಗಳನ್ನು ಸ್ಥಾಪಿಸದಂತೆ ಸೂಚಿಸಲಾಗಿದೆ. ಈಗಾಗಲೇ ಎಂಡಿಎ ಸಭೆಯಲ್ಲಿ ನಗರ ವ್ಯಾಪ್ತಿಯಲ್ಲಿ ಒಂದು ಕಿ.ಮೀ ವ್ಯಾಪ್ತಿಗಿಂತ ಕಡಿಮೆ ಅಂತರದಲ್ಲಿ ಹೊಸ ಹಾಲಿನ ಬೂತ್‌ಗಳಿಗೆ ಜಾಗ ನೀಡದಂತೆ ಠರಾವು ಪಾಸ್ ಮಾಡಲಾಗಿದೆ ಎಂದರು.

ಖಾಸಗಿ ಜಾಗದಲ್ಲಿ ಹೊಸ ಹಾಲಿನ ಬೂತ್‌ಗಳನ್ನು ಹಾಕಲು ನನ್ನದೇನು ಅಭ್ಯಂತರವಿಲ್ಲ. ಹಾಗಾಗಿ ಕೈಸುಟ್ಟುಕೊಳ್ಳುವ ಸಾಹಸಕ್ಕೆ ಯಾರೂ ಹೋಗುವುದಿಲ್ಲ ಎಂದ ಶಾಸಕರು, ನಗರ ವ್ಯಾಪ್ತಿಯಲ್ಲಿ ಸಾವಿರಾರು ಜನ ಈ ಹಾಲು ಉತ್ಪನ್ನವನ್ನು ನಂಬಿದ್ದಾರೆ. ಅಂತಹ ಬದುಕು ಅಸನಾಗಲು ಇಂತಹ ಸಂಘಟನೆ ಅಗತ್ಯ, ಇದಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಸ್ವಾಮೀಜಿ ಆಶೀರ್ವಾದವೂ ಇದೆ ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ಸ್ಥಾಪನೆ ಉತ್ತಮ ಬೆಳವಣಿಗೆ. ಈ ಸದಸ್ಯರ ಕುಟುಂಬದ ಪ್ರತಿಭಾವಂತ ಮಕ್ಕಳಿಗೆ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲು ನಾನು ವೈಯಕ್ತಿಕವಾಗಿ 25 ಸಾವಿರ ನೀಡುತೇನೆ ಎಂದು ಘೋಷಿಸಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಸ್ವಾಮೀಜಿ ಮಾತನಾಡಿದರು.


ವೇದಿಕೆಯಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ಅಧ್ಯಕ್ಷ ಹೆಚ್.ಕುಮಾರ್, ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ಮೈಮುಲ್ ಎಂಡಿ. ಸುರೇಶ್ ನಾಯಕ್, ಹಾಲು ಉತ್ಪಾದಕರ ಸಂಘದ ಆರ್.ಟಿ.ಚೆಲುವರಾಜ್, ಮುಖಂಡರಾದ ಎ.ಟಿ. ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾ ಶಂಕರ್, ಸಿ.ಓಂಪ್ರಕಾಶ್ ಪಿ.ಎಂ.ಪ್ರಸನ್ನ, ಕೆ.ಎಸ್. ಕುಮಾರ್, ದ್ರಾಕ್ಷಾಯಿಣಿ ಬಸವರಾಜ್, ಬಿ.ಕೆ. ಲೀಲಾ ನಾಗರಾಜ್, ನೀಲಾಂಬಿಕೆ ಮಹೇಶ್ ಕುರಟ್ಟಿ, ಎ.ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಮೈಮುಲ್ ಮಾರ್ಕೆಟಿಂಗ್ ಮ್ಯಾನೇಜರ್ ಜಯಶಂಕರ್, ಶಂಕರ್, ನವೀನ್‌ಕುಮಾರ್, ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ಆಡಳಿತ ಮಂಡಳಿ ಸದಸ್ಯರಾದ ಉಪಾಧ್ಯಕ್ಷ ವೈ.ಎಸ್.ದಿಲೀಪ್‌ಕುಮಾರ್, ಕಾರ್ಯದರ್ಶಿ ಎಂ.ಸತೀಶ್ ಕುಮಾರ್, ಖಜಾಂಚಿ ಕೆ.ಎಸ್.ಸತೀಶ್, ಜಂಟಿ ಕಾರ್ಯದರ್ಶಿ ಟಿ.ರಾಮಚಂದ್ರ, ಸಹ ಕಾರ್ಯದರ್ಶಿ ಜಿ.ರಮೇಶ್, ಜಿ.ರಮೇಶ್, ಡಾ.ಜಿ.ಯೋಗೇಶ್, ಎಂ.ಎ. ವರಮಹಾಲಕ್ಷ್ಮಿ, ಪಿ.ಸತೀಶ್, ಬಿ.ವಿ.ನಟರಾಜ್, ಪಿ.ಹರೀಶ್, ಸಿ.ಬಸವರಾಜ್, ಎಸ್.ಸೇತುರಾಮ್, ಎಲ್.ಶಿವರಾಜ್ ಉಪಸ್ಥಿತರಿದ್ದರು.

ನಂದಿನಿ ಹಾಲು ಮಾರಾಟಗಾರರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ

ಮೈಸೂರು, ಡಿ.5(ಎಸ್‌ಪಿಎನ್)–ಯಾವುದೇ ಅಸಂಘಟಿತ ವರ್ಗಕ್ಕೆ ಅನ್ಯಾಯವಾದಲ್ಲಿ ಅದನ್ನು ಕೇಳುವುದಕ್ಕೆ ಒಂಟಿಯಾಗಿ ಹೋದರೆ ಅದಕ್ಕೆ ಸ್ಪಂದನೆ ಸಿಗುವುದು ಕಷ್ಟಕರ. ಆದರೆ ಸಂಘ ಕಟ್ಟಿ ಸಂಘಟನೆ ಮೂಲಕ ಹೋದಾಗ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಮುಲ್ ಕೂಡ ಅಗಾಧವಾಗಿ ಬೆಳೆದಿದ್ದು, ಪ್ರತಿನಿತ್ಯ ಹತ್ತು ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಅದಕ್ಕೆ ಕಾರಣ ನಮ್ಮ ರೈತರು. ರೈತರು ನೀಡಿದಂತಹ ಹಾಲನ್ನು ಸಂಸ್ಕರಣೆ ಮಾಡುತ್ತಿರುವುದು ನಮ್ಮ ಮೈಮುಲ್, ಇಂದು ಹಾಲು ಉತ್ಪಾದನೆ ನಂಬಿಕೊಂಡು ಹಲವು ಕುಟುಂಬ ಜೀವನ ಸಾಗಿಸುತ್ತಿದ್ದು ನಾವು ಕೂಡ ಬೆನ್ನೆಲುಬಾಗಿ ನಿಲ್ಲುತ್ತೇವೆ ಎಂದು ತಿಳಿಸಿದರು. ನಮ್ಮ ರೈತರಿಗೆ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ನೀಡುತ್ತಿರುವ ವಿಮಾ ಹಣವನ್ನು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ಸದಸ್ಯರಿಗೆ ನೀಡಲು ಸಹಾಯ ಮಾಡಲಾಗುವುದು. ಯಾವುದಾದರೂ ಯೋಜನೆಯ ಜೊತೆ ನಿಮ್ಮ ಸಂಘವನ್ನು ಸೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಇಂಡಿಗೋ ವಿಮಾನ ಹಾರಾಟ 3 ದಿನಗಳಲ್ಲಿ ಸಹಜ ಸ್ಥಿತಿಗೆ: ಸರ್ಕಾರ; 10 ದಿನ ಎಂದ ವಿಮಾನಯಾನ ಸಂಸ್ಥೆ



ರಾಮ ಮೋಹನ್

ನವದೆಹಲಿ: ಹೊಸ ವಿಮಾನ ಕರ್ತವ್ಯ ನಿಯಮಗಳನ್ನು ಹಿಂಪಡೆಯುವುದು ಸೇರಿದಂತೆ ವಿವಿಧ ಕಾರ್ಯಾಚರಣೆಯ ಕ್ರಮಗಳು ಇಂಡಿಗೋ ವಿಮಾನಗಳ ಅಡೆತಡೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ ಮತ್ತು ಮುಂದಿನ ಮೂರು ದಿನಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವ ನಿರೀಕ್ಷೆ ಇದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ. ರಾಮ ಮೋಹನ್ ನಾಯ್ಡು ಶುಕ್ರವಾರ ಹೇಳಿದ್ದಾರೆ.

ಕಳೆದ ನಾಲ್ಕು ದಿನಗಳಲ್ಲಿ ನೂರಾರು ವಿಮಾನ ರದ್ದತಿ ಮತ್ತು ವಿಳಂಬಕ್ಕೆ ಕಾರಣವಾದ ಇಂಡಿಗೋ ಅಡೆತಡೆಗಳಿಗೆ ಕಾರಣಗಳು ಮತ್ತು ಹೊಣೆಗಾರಿಕೆಯನ್ನು ನಿರ್ಧರಿಸಲು ಸರ್ಕಾರ ಉನ್ನತ ಮಟ್ಟದ ತನಿಖೆ ನಡೆಸಲು ನಿರ್ಧರಿಸಿದೆ ಎಂದು ಸಚಿವರು ತಿಳಿಸಿದ್ದಾರೆ.

ಇಂಡಿಗೋ ಸಂಕಷ್ಟಕ್ಕೆ ಕಾರಣವನ್ನು ಪರಿಶೀಲಿಸಲು ಡಿಜಿಸಿಎ ನಾಲ್ಕು ಸದಸ್ಯರ ಸಮಿತಿಯನ್ನು ರಚಿಸಲಾಗಿದ್ದು, ಇಂಡಿಗೋದ ಆಂತರಿಕ ಮೇಲ್ವಿಚಾರಣೆ ಮತ್ತು ಕಾರ್ಯಾಚರಣಾ ಸಿದ್ಧತೆಯಲ್ಲಿನ ನ್ಯೂನತೆಗಳನ್ನು ತನಿಖೆ ಮಾಡಲು ಆದೇಶಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ವಿಮಾನಗಳ ವೇಳಾಪಟ್ಟಿಯಲ್ಲಿ, ವಿಶೇಷವಾಗಿ ಇಂಡಿಗೊ ವಿಮಾನಯಾನ ಸಂಸ್ಥೆಗಳ ವಿಮಾನಗಳ ವೇಳಾಪಟ್ಟಿಯಲ್ಲಿ ಆಗುತ್ತಿರುವ ಅಡಚಣೆಯನ್ನು ಪರಿಹರಿಸಲು ನಾಗರಿಕ ವಿಮಾನಯಾನ ಸಚಿವಾಲಯ ತುರ್ತು ಮತ್ತು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನಾಯ್ಡು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಜಿಸಿಎ ವಾರದ ವಿಶ್ರಾಂತಿ ಮತ್ತು ಸಾಮಾನ್ಯ ರಜೆಯನ್ನು ಪ್ರತ್ಯೇಕಿಸುವ ನಿಯಮವನ್ನು ತಾತ್ಕಾಲಿಕವಾಗಿ ಹಿಂಪಡೆದಿದೆ. ಈ ನಿರ್ದೇಶನಗಳು ತಕ್ಷಣದ ಅನುಷ್ಠಾನದ ಆಧಾರದ ಮೇಲೆ, ಮುಂದಿನ ಮೂರು ದಿನಗಳಲ್ಲಿ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರಳುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ಸಚಿವರು ಹೇಳಿದ್ದಾರೆ.

ಡಿಸೆಂಬರ್ 10 ರಿಂದ 15ರ ನಡುವೆ ಪರಿಸ್ಥಿತಿ ಸಹಜ ಸ್ಥಿತಿಗೆ: ಇಂಡಿಗೋ ಸಿಇಒ ಪೀಟರ್ ಎಲ್ಬರ್ಸ್ ಅವರು ಶುಕ್ರವಾರ ಮಾತನಾಡಿ, ಶನಿವಾರ ವಿಮಾನಯಾನ ಸಂಸ್ಥೆಯು 1,000 ಕ್ಕಿಂತ ಕಡಿಮೆ ವಿಮಾನ ರದ್ದತಿಗಳನ್ನು ನಿರೀಕ್ಷಿಸುತ್ತಿದೆ ಮತ್ತು ಡಿಸೆಂಬರ್ 10 ರಿಂದ 15 ರ ನಡುವೆ ಪರಿಸ್ಥಿತಿ ಸಾಮಾನ್ಯವಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಅನಾನುಕೂಲತೆಗಾಗಿ ಪ್ರಯಾಣಿಕರಿಗೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಿದ ಎಲ್ಬರ್ಸ್, ನವೆಂಬರ್ 1ರಿಂದ ಜಾರಿಗೆ ಬಂದ ಹೊಸ ಎಫ್‌ಡಿಟಿಎಲ್ ನಿಯಮಗಳ ಪ್ರಕಾರ ಅಗತ್ಯವಿರುವ ವಿಮಾನ ಚಾಲಕರ ಸಂಖ್ಯೆಯನ್ನು ತಪ್ಪಾಗಿ ಲೆಕ್ಕ ಹಾಕಿದ್ದು, ಕಂಪನಿಯ ಯೋಜನೆಯಲ್ಲಿ ಕೊರತೆಗಳಿದ್ದವು ಎಂದು ಒಪ್ಪಿಕೊಂಡಿದ್ದಾರೆ. ಡಿಸೆಂಬರ್ 10 ಮತ್ತು 15ರ ನಡುವೆ ಪರಿಸ್ಥಿತಿ ಸಹಜವಾಗುವ ನಿರೀಕ್ಷೆ ಇದೆ ಎಂದು ಸಿಇಒ ತಿಳಿಸಿದ್ದಾರೆ .

5ನೇ ವರ್ಷದ ಪುಣ್ಯಸ್ಮರಣೆ



ಮೊಕ್ಕುಳೆಂಡ್ರ ಸರೋಜಿನಿ

ಜನನ: 10-01-1953 (ನಿವೃತ್ತ ಆರೋಗ್ಯ ಇಲಾಖೆ) ನಿಧನ: 06-12-2020

(ತವರುಮನೆ ಪರಿಚನ, ಮರಗೋಡು)

ಪ್ರೀತಿಯ ಅಮ್ಮ,
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನಡೆ–ನುಡಿ, ಆದರ್ಶ ಗುಣಗಳು ಸದಾ ನಮ್ಮಲ್ಲಿ ಹಚ್ಚ ಹಸಿರಾಗಿದೆ, ಭಗವಂತ ಸದಾ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ,

ದುಃಖತಪ್ತರು: ಪತಿ–ಮೊಕ್ಕುಳೆಂಡ್ರ ಮಂದಣ್ಣ, ಮಕ್ಕಳಾದ– ಮೊಕ್ಕುಳೆಂಡ್ರ ದೀಪಕ್, ಪವನ್, ಸೊಸೆಯಂದಿರಾದ:– ಅಜಿತ, ಉಷಾ ಹಾಗೂ ಮೊಮ್ಮಗಳಾದ ಮಹನ್ಯ, ಕುಟುಂಬಸ್ಥರು ಹಾಗೂ ಬಂಧು–ಮಿತ್ರರು

WE MISS YOU AMMA ಶ್ರೀ ರಾಂಪುರ 2ನೇ ಹಂತ ಮೈಸೂರು ಮೊ: 9663916409, 9972626906

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರಮಂದಿರ ಹತ್ತಿರ, ಕೆಳ ಮಹಡಿ, #218/ಕೆ–30 ರಲ್ಲಿ ಕಛೇರಿಯುಳ್ಳ ದಿ ಸಿಟಿಜನ್ ವೆಲ್ಫೇರ್ ಗೃಹ ನಿರ್ಮಾಣ ಸಹಕಾರ ಸಂಘ, ಲಿ.,(ರಿ)ರ ಕಾರ್ಯದರ್ಶಿಯಾದ ಶ್ರೀ ಆರ್. ರೇಣುಕಾರಾಧ್ಯರವರ ಹೆಸರಿಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು, ಮೈಸೂರುಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿರುವ ಲೇಟ್ ರಾಮೇಗೌಡರವರ ಮಕ್ಕಳಾದ ಶ್ರೀ ರಾಮೇಗೌಡ ಮತ್ತು ಶ್ರೀ ಮಲ್ಲೂಗೌಡ ಹಾಗೂ ಅವರ ಕುಟುಂಬದವರ ಪರವಾಗಿ ಅವರುಗಳ ಜಿ.ಪಿ.ಎ. ಪ್ರತಿನಿಧಿಯಾದ ಶ್ರೀ ಆರ್. ವೀರೇಶ್‌ರವರು ದಿನಾಂಕ: 14–03–2024 ರಂದು ಷೆಡ್ಯೂಲ್ ಸ್ವತ್ತು ಸೇರಿದಂತೆ ಸದರಿ ಕುಟುಂಬಕ್ಕೆ ಸೇರಿದ ಸರ್ವೆ ನಂಬರ್ 222/8, 222/10 ಹಾಗೂ 222/11 ರ ಜಮೀನುಗಳನ್ನು ನನ್ನ ಕಕ್ಷಿದಾರರಿಗೆ ಶುದ್ಧಕ್ರಯ ಪತ್ರವನ್ನು ನೊಂದಣಿ ಮಾಡಿಕೊಡುವ ಮೂಲಕ ಕ್ರಯಕ್ಕೆ ಕೊಟ್ಟಿರುತ್ತಾರೆ.

ಷೆಡ್ಯೂಲ್ ಸ್ವತ್ತನ್ನು ಈ ಹಿಂದೆಯೇ ದಿನಾಂಕ: 10–04–2007 ರಂದು ಮೇಲ್ಕಂಡ ಶ್ರೀ ರಾಮೇಗೌಡ ಮತ್ತು ಶ್ರೀ ಮಲ್ಲೂಗೌಡ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರುಗಳು ಶ್ರೀ ಆರ್. ವೀರೇಶ್ ರವರಿಗೆ ಅಭಿವೃದ್ಧಿ ಕರಾರು ಪತ್ರ ಹಾಗೂ ಸಾಮಾನ್ಯ ಅಧಿಕಾರ ಪತ್ರವನ್ನು ನೊಂದಣಿ ಮಾಡಿಕೊಟ್ಟು ಪ್ರತಿಫಲವನ್ನು ಪಡೆದುಕೊಳ್ಳುವ ಮೂಲಕ ಅವರುಗಳಿಗೆ ಇದ್ದಂತಹ ವಿಶಿಷ್ಟ ಹಕ್ಕುಗಳನ್ನು ಶ್ರೀ ಆರ್. ವೀರೇಶ್‌ರವರಿಗೆ ವರ್ಗಾಯಿಸಿರುತ್ತಾರೆ. ಷೆಡ್ಯೂಲ್ ಸ್ವತ್ತು ಮೇಲ್ಕಂಡ ಖಾತೆದಾರರ ಹೆಸರಿನಲ್ಲಿ ಅನ್ಯಕ್ರಾಂತವಾಗಿದ್ದು, ಪಹಣಿಯಲ್ಲಿ ಖಾತೆಯು ರೈತರ ಹೆಸರಿನಲ್ಲಿಯೇ ಇರುವುದರಿಂದ, ಇದನ್ನೇ ನೆಪ ಮಾಡಿಕೊಂಡು ಸದರಿಯವರುಗಳು ಅಭಿವೃದ್ಧಿಕರಾರು ಪತ್ರ ಹಾಗೂ ಸಾಮಾನ್ಯಅಧಿಕಾರ ಪತ್ರ ಮಾಡಿರುವುದನ್ನು ಮರೆಮಾಚಿ ತಮ್ಮತಮ್ಮಲ್ಲೆ ಒಳ ಒಪ್ಪಂದ ಮಾಡಿಕೊಂಡು ಲೇಟ್ ರಾಮೇಗೌಡ ಕುಟುಂಬದವರು ಶ್ರೀ ಸೀತಾರಾಮ ಆರ್. ರವರಿಗೆ ಹಕ್ಕು ಬಿಟ್ಟುಕೊಟ್ಟಿರುವುದಾಗಿ ಹಕ್ಕು ಖುಲಾಸೆ ಪತ್ರವನ್ನು ದಿನಾಂಕ: 25–11–2024 ರಂದು ನೊಂದಣಿ ಮಾಡಿಸಿರುತ್ತಾರೆ ಹಾಗೂ ಸದರಿ ಪತ್ರದ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಆಗಾಗಿ, ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿನಲ್ಲಿ ನನ್ನ ಕಕ್ಷಿದಾರರಿಗೆ ಹಕ್ಕು ಭಾದ್ಯತೆಗಳು ಇರುವುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧವಾಗಿ ಮೇಲೆ ತಿಳಿಸಿರುವ ವ್ಯಕ್ತಿ ಹಾಗೂ ಅವರಕುಟುಂಬದವರಜೊತೆ ಬೇರೆಯಾರೂ ಕ್ರಯದಕರಾರು ಪತ್ರ, ಕ್ರಯ ಪತ್ರ, ದಾನ ಪತ್ರ, ಆಧಾರ ಪತ್ರ, ವಗೈರೆ ವ್ಯವಹಾರಗಳನ್ನು ಮಾಡಬಾರದು, ಒಂದು ವೇಳೆ ವ್ಯವಹಾರವನ್ನು ಮಾಡಿದ ಪಕ್ಷದಲ್ಲಿ ಅದರಿಂದ ಉಂಟಾಗುವ ಕಷ್ಟ–ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ವಿನಃ ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ, ಒಂದು ವೇಳೆ ಈ ಮೊದಲೇ ವ್ಯವಹರಿಸಿದ್ದಂತಹ ಪಕ್ಷದಲ್ಲಿ ದಾಖಲಾತಿ ಸಮೇತ ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸತಕ್ಕದ್ದು, ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರುಜಿಲ್ಲೆ, ಮೈಸೂರುತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್222/9 (ಹಳೆ ಸರ್ವೆ ನಂಬರ್ 222/1) ರಲ್ಲಿ ವಿಸ್ತೀರ್ಣ 3 ಎಕರೆ 00 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂಬರ್ 222/1 ಮತ್ತು 222/10ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 222/1ರ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 221ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 222/1ರ ಜಮೀನು

ಎಂ.ಆರ್. ಸುನಿಲ್ ಬಿ.ಎ.ಎಲ್., ಎಲ್ ಎಲ್.ಬಿ.,
ವಕೀಲರು
ನಂ. 2904(ಹೆಚ್–67), 2ನೇ ಮಹಡಿ, ಕಾಂತರಾಜರಸ್‌ರಸ್ತೆ, ಸರಸ್ವತಿಪುರಂ, ಮೈಸೂರು
ಮೊಬೈಲ್ ಸಂಖ್ಯೆ: 9742340603
ದಿನಾಂಕ: 29–11–2025

17ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ

ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಚನ್ನನಾಯಕ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ಕೇಂದ್ರೀಯ ವಿದ್ಯಾಲಯ ಸಂಘಟನ್ (ಕೆವಿಎಸ್) ಮತ್ತು ನವೋದಯ ವಿದ್ಯಾಲಯ ಸಮಿತಿ (ಎನ್‌ವಿಎಸ್) ಗಳಲ್ಲಿ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿ

ಕೇಂದ್ರೀಯ ವಿದ್ಯಾಲಯ ಸಂಘಟನ್ (ಕೆವಿಎಸ್) ಮತ್ತು ನವೋದಯ ವಿದ್ಯಾಲಯ ಸಮಿತಿ (ಎನ್‌ವಿಎಸ್) ಗಳಲ್ಲಿ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ 01/2025 ರ ನೇಮಕಾತಿ ಅಧಿಸೂಚನೆಯನ್ನು ಉಲ್ಲೇಖಿಸಿ, ಅರ್ಜಿದಾರರಿಗೆ ಕೆವಿಎಸ್ ಮತ್ತು ಎನ್‌ವಿಎಸ್ ಸಹಾಯಕ ಆಯುಕ್ತರು, ಪ್ರಾಂಶುಪಾಲರು, ಪಿಜಿಟಿ (ಹಿಂದಿ, ಇಂಗ್ಲಿಷ್, ವಾಣಿಜ್ಯ), ಟಿಜಿಟಿ (ಹಿಂದಿ, ಇಂಗ್ಲಿಷ್, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದೈಹಿಕ ಶಿಕ್ಷಣ/ದೈಹಿಕ ಮತ್ತು ಆರೋಗ್ಯ ಶಿಕ್ಷಣ) ಮತ್ತು ಜೂನಿಯರ್ ಸೆಕ್ರೆಟರಿಯೇಟ್ ಸಹಾಯಕ ಹುದ್ದೆಗಳಿಗೆ ಅರ್ಹತೆಗಳನ್ನು ಈಗ ಕೆವಿಎಸ್ ಮತ್ತು ಎನ್‌ವಿಎಸ್ ಒಂದೇ ರೀತಿ ಮಾಡಿರುವುದರಿಂದ ಅರ್ಜಿದಾರರು ಎರಡೂ ವಿಭಾಗಗಳಲ್ಲಿ ಈ ಹುದ್ದೆಗಳಿಗೆ ಏಕಕಾಲದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದು. ಕೆವಿಎಸ್ ಅಥವಾ ಎನ್‌ವಿಎಸ್‌ನಲ್ಲಿ ಈ ಹುದ್ದೆಗಳಿಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದಾದ ಅರ್ಜಿದಾರರಿಗೆ ಕೆವಿಎಸ್ ಅಥವಾ ಎನ್‌ವಿಎಸ್‌ಗಾಗಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಆನ್‌ಲೈನ್ ಅರ್ಜಿ ಪೋರ್ಟಲ್‌ನಲ್ಲಿ ಅವಕಾಶ ನೀಡಲಾಗುವುದು (ಸಂದರ್ಭಕ್ಕನ ುಗುಣವಾಗಿ). ವಿವರಗಳಿಗಾಗಿ ಅಭ್ಯರ್ಥಿಗಳು CBSE, KVS ಮತ್ತು NVS ವೆಬ್‌ಸೈಟ್‌ಗಳಲ್ಲಿ ಕೊರಿಜೆಂಡಮ್ – 2 ಅನ್ನು ನೋಡಬಹುದು.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು ಡಿಸೆಂಬರ್ 11, 2025 ರವರೆಗೆ (ರಾತ್ರಿ 11.59) ವಿಸ್ತರಿಸಲಾಗಿದೆ. ಹೆಚ್ಚಿನ ಹೊಸ ಮಾಹಿತಿಗಳಿಗಾಗಿ ಅಭ್ಯರ್ಥಿಗಳು CBSE, KVS ಮತ್ತು NVS ವೆಬ್‌ಸೈಟ್‌ಗಳಿಗೆ ಭೇಟಿ ನೀಡಬಹುದಾಗಿದೆ.

ನಿರ್ದೇಶಕರು (CTET), CBSE

cbc21107/12/0010/2526

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ

(ಕಛೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ : 08173–244008)
Email ID:-tpskpadmsec113@gmail.com
ಸಂ:ತಾ.ಪಂ.ಸ/ಹೊ.ಗು.ಟೆಂಡರ್/2025–26 ದಿನಾಂಕ:–04.12.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಷಯ: 2025–26ನೇ ಸಾಲಿಗೆ ಹೊರಗುತ್ತಿಗೆಯ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆದಿರುವ ಬಗ್ಗೆ. ಸಕಲೇಶಪುರ ತಾಲ್ಲೂಕು ಪಂಚಾಯತ್ ಕಾರ್ಯಾಲಯಕ್ಕೆ 2025–26 ನೇ ಸಾಲಿನ ಡಿಸೆಂಬರ್ 2025ರ ಮಾಹೆಯಿಂದ ಅನ್ವಯವಾಗುವಂತೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ. 1)ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ RDPR/2025-26/SE3085/CALL-02 date:04.12.2025 2)ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15.12.2025 ಅಪರಾಹ್ನ 04.30 ಗಂಟೆಗೆ 3)ಟೆಂಡರ್ ಮೌಲ್ಯ 17.26 ಲಕ್ಷ ರೂಗಳು 4)ಪಡೆಯಲು ಬಯಸಿರುವ ಸೇವೆಗಳ ವಿವರ & ಸಂಖ್ಯೆ 1)ಗ್ರೂಪ್ ಡಿ ನೌಕರರು–03 2)ವಾಹನ ಚಾಲಕರು–01 3)ಡಾಟಾ ಎಂಟ್ರಿ ಆಪರೇಟರ್–02 5)ಟೆಂಡರ್ ಫಾರಂ ಭಾಗ –ಎ(ತಾಂತ್ರಿಕ ಬಿಡ್) ತೆರೆಯುವ ದಿನಾಂಕ ಮತ್ತು ವೇಳೆ ಕಾರ್ಯನಿರ್ವಾಹಕ ಅಧಿಕಾರಿಯವರ ಕಚೇರಿ, ತಾಲ್ಲೂಕು ಪಂಚಾಯತ್ ಸಕಲೇಶಪುರ. 18.12.2025 ಪೂರ್ವಾಹ್ನ 05.30 ಗಂಟೆ. 6)ಟೆಂಡರ್ ಫಾರಂ ಭಾಗ –ಬಿ(ಆರ್ಥಿಕ ಬಿಡ್) ತೆರೆಯುವ ದಿನಾಂಕ ಮತ್ತು ವೇಳೆ 19.12.2025 ಅಪರಾಹ್ನ 05.30ಗಂಟೆ. 7)ಟೆಂಡರ್ ಸಲ್ಲಿಸುವ ಸಂಸ್ಥೆಗಳು ಪಾವತಿಸಬೇಕಾದ ಇಎಂಡಿ ಮೊತ್ತ ರೂ.43150/– ವಿ. ಸೂ: 1.ಹೊರಗುತ್ತಿಗೆಯ ಮೂಲಕ ಸೇವೆ ನೀಡಲು ಶಕ್ತವಿರುವ ಸಂಸ್ಥೆಗಳು ಮಾತ್ರ ಪ್ರಸ್ತಾವನೆಯನ್ನು ಸಲ್ಲಿಸಬಹುದು. 2.ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕಾರ್ಯನಿವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಸಕಲೇಶಪುರ ಇವರಿಂದ ಪಡೆಯಬಹುದು. ದೂರವಾಣಿ ಸಂ: 9480867135.

ಸಹಿ/–ಕಾರ್ಯನಿರ್ವಾಹಕ
ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/822/ಕೆಎಸ್‌ಎಂಸಿಎ/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ

ಬೆಂಗಳೂರು–ಮೈಸೂರು ರಸ್ತೆ, ಕಲ್ಲಹಳ್ಳಿ, ಮಂಡ್ಯ–571401
ಇ–ಮೇಲ್:apmcmandya@rediffmail.com, apmcmandya@gmail.com ದೂ: 220792
ಪತ್ರ ಸಂಖ್ಯೆ: ಕೃಮಾಇ/ಕೃಉಮಾಸ(ಮಂ)/ 687 /2025–26 ದಿನಾಂಕ:04–12–2025

ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಖ್ಯ ರಸ್ತೆಯಲ್ಲಿರುವ ಹಾಗೂ ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ ಸಣ್ಣ ಅಂಗಡಿ ಮಳಿಗೆಗಳು, ಕ್ಯಾಂಟೀನ್ ಮತ್ತು ತೂಕದ ಯಂತ್ರಗಳನ್ನು ಲೀವ್ ಅಂಡ್ ಲೈಸೆನ್ಸ್ ಫೀ ಆಧಾರದ ಮೇಲೆ ಹಂಚಿಕೆ ಮಾಡಲು ಟೆಂಡರ್ –ಕಂ–ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸಮಿತಿಯಲ್ಲಿ ನೋಂದಣಿ ಶುಲ್ಕ ಪಾವತಿಸಿ, ನೋಂದಾಯಿಸಿಕೊಂಡ ನಂತರ ಟೆಂಡರ್ ಸಹಿತ ಹರಾಜಿನಲ್ಲಿ ಭಾಗವಹಿಸುವುದು.
ಹಂಚಿಕೆ ಮಾಡಲು ಉದ್ದೇಶಿಸಿರುವ ಸಣ್ಣ ಅಂಗಡಿ ಮಳಿಗೆ, ಕ್ಯಾಂಟೀನ್, ಮತ್ತು ತೂಕದ ಯಂತ್ರ ಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಹಂಚಿಕೆ ಮಾಡುವ ಸಣ್ಣ ಅಂಗಡಿ ಮಳಿಗೆಗಳ ವಿವರ	ನಿಗಧಿಪಡಿಸಿರುವ ಲೀವ್ ಅಂಡ್ ಲೈಸೆನ್ಸ್ ಫೀ (ಮಾಸಿಕ ರೂ.ಗಳಲ್ಲಿ)	ಪಾವತಿಸಬೇಕಾದ ಮುಂಗಡ ಹಣ (ರೂ.ಗಳಲ್ಲಿ)	ಮೀಸಲಾತಿ ವಿವರ
	ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಖ್ಯ ರಸ್ತೆಯಲ್ಲಿರುವ ಸಣ್ಣ ಅಂಗಡಿ ಮಳಿಗೆಗಳು			
1	ಸಣ್ಣ ಅಂಗಡಿ ಮಳಿಗೆ ಸಂಖ್ಯೆ 06, 07, 08, 10, 11	2371–00	4742–00	ಸಾಮಾನ್ಯ ಮಳಿಗೆ ಸಂ.06,07,08 ಪರಿಶಿಷ್ಠ ಜಾತಿ ಮಳಿಗೆ ಸಂ.10 ಎಫ್.ಪಿ.ಓ ಮಳಿಗೆ ಸಂ.11
	ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕ್ಯಾಂಟೀನ್			
2	ಮುಖ್ಯ ಮಾರುಕಟ್ಟೆ ಪ್ರಾಂಗಣದ ಕ್ಯಾಂಟೀನ್	6982–00	13964–00	ಸಾಮಾನ್ಯ
	ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಕ್ಯಾಂಟೀನ್ ಮತ್ತು ತೂಕದ ಯಂತ್ರ			
1	ಕ್ಯಾಂಟೀನ್ –01	8363–00	14726.00	ಸಾಮಾನ್ಯ
2	60 ಮೆ.ಟನ್. ಸಾಮರ್ಥ್ಯದ ತೂಕದ ಯಂತ್ರ–01	20628–00	41256.00	ಸಾಮಾನ್ಯ

(1) ನಿಗಧಿತ ನೋಂದಣಿ ಶುಲ್ಕ ರೂ. 500/– ಪಾವತಿಸಿ ಸಮಿತಿಯಲ್ಲಿ ನೋಂದಾಯಿಸಲು ಕಡೆಯ ದಿನಾಂಕ: 20.12.2025 ರಂದು ಸಂಜೆ 5.00 ಗಂಟೆ. (2) ನಿಗಧಿತ ಅರ್ಜಿ ಶುಲ್ಕ ರೂ.300 ಪಾವತಿಸಿ ಅರ್ಜಿ ಪಡೆಯಲು ಕಡೆಯ ದಿನಾಂಕ: 26.12.2025 ಸಂಜೆ 11:00 ಗಂಟೆ. (3) ನೋಂದಾಯಿತ ವ್ಯಕ್ತಿ/ಸಂಸ್ಥೆಗಳು ಸಣ್ಣ ಅಂಗಡಿ ಮಳಿಗೆಗಳಿಗೆ ಇ.ಎಂ.ಡಿ. ಪಾವತಿಸಿ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕಡೆಯ ದಿನಾಂಕ: 29.12.2025 ರಂದು ಬೆಳಗ್ಗೆ 12.00 ಗಂಟೆ. (4) ಹರಾಜು ನಡೆಯುವ ದಿನಾಂಕ: 29.12.2025 ಸಮಯ 03:00 ರಿಂದ 04:.00 ಗಂಟೆ. (5) ಟೆಂಡರ್ ತೆರೆಯುವ ದಿನಾಂಕ: 29.12.2025 ರಂದು ಸಂಜೆ 05.00 ಗಂಟೆ ಅಥವಾ ಹರಾಜು ಮುಗಿದ ನಂತರ. (6)ಬಿಡ್ ತೆರೆಯುವ ಸ್ಥಳ : ಆಡಳಿತ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ. ಟೆಂಡರ್ ಸಹಿತ ಹರಾಜಿನ ಷರತ್ತು ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದು.

ಸಹಿ/–ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.
ಸಹಿ/–ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ

ಬೆಂಗಳೂರು–ಮೈಸೂರು ರಸ್ತೆ, ಕಲ್ಲಹಳ್ಳಿ, ಮಂಡ್ಯ–571401
ಇ–ಮೇಲ್:apmcmandya@rediffmail.com, apmcmandya@gmail.com ದೂ: 220792
ಪತ್ರ ಸಂಖ್ಯೆ: ಕೃಮಾಇ/ಕೃಉಮಾಸ(ಮಂ)/690/2025–26 ದಿನಾಂಕ:04–12–2025

ಹಂಚಿಕೆ ಪ್ರಕಟಣೆ

ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ಕೊಮ್ಮೇರಹಳ್ಳಿ(ಗೋಪಾಲಪುರ) ಉಪ ಮಾರುಕಟ್ಟೆ ಪ್ರಾಂಗಣ ಹಾಗೂ ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಈ ಕೆಳಕಂಡ ಗೋದಾಮು/ಅಂಗಡಿ ಮಳಿಗೆಗಳನ್ನು ಸಮಿತಿಯಿಂದ/ ಇಲಾಖೆಯಿಂದ ಲೈಸೆನ್ಸ್ ಪಡೆದ ವರ್ತಕರುಗಳಿಗೆ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸಿ, ಪ್ರತಿ 33 ತಿಂಗಳಿಗೊಮ್ಮೆ ಶೇ 5 ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕ ಹೆಚ್ಚಿಸಿ ಗರಿಷ್ಠ 55 ತಿಂಗಳ ಅವಧಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮ 2004ರ ಪ್ರಕಾರ ಕೇಳಿದಾಗ ಬಿಟ್ಟುಕೊಡುವ ಲೈಸೆನ್ಸಿನ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. ಅಂಗಡಿ ಮಳಿಗೆ ಪಡೆಯಲು ಇಚ್ಚಿಸುವವರು ಸಮಿತಿಯಲ್ಲಿ ನೋಂದಣಿ ಶುಲ್ಕ ಪಾವತಿಸಿ, ನೋಂದಾಯಿಸಿಕೊಂಡು ನಂತರ ಅರ್ಜಿ ಸಲ್ಲಿಸುವುದು.
ಹಂಚಿಕೆ ಮಾಡಲು ಉದ್ದೇಶಿಸಿರುವ ಅಂಗಡಿ ಮಳಿಗೆಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಹಂಚಿಕೆ ಮಾಡುವ ಸಣ್ಣ ಅಂಗಡಿ ಮಳಿಗೆಗಳ ವಿವರ	ನಿಗಧಿಪಡಿಸಿರುವ ಲೀವ್ ಅಂಡ್ ಲೈಸೆನ್ಸ್ ಫೀ (ಮಾಸಿಕ ರೂ.ಗಳಲ್ಲಿ)	ಪಾವತಿಸಬೇಕಾದ ಮುಂಗಡ ಹಣ (ರೂ.ಗಳಲ್ಲಿ)	ಮೀಸಲಾತಿ ವಿವರ ಮತ್ತು ಮಳಿಗೆಗಳ ಸಂಖ್ಯೆ
	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಮಾದರಿ ಗೋದಾಮುಗಳು			
1	'ಬಿ' ಮಾದರಿ ಗೋದಾಮು ಸಂಖ್ಯೆ –17	24,308–00	48,616–00	1.ಸಾಮಾನ್ಯ : ಸಂಖ್ಯೆ–ಸಿ– 06, 07, 09, 10, 13, 14, 19, 20, ಬಿ–17 ಬಿ–ಟೈಪ್ ಟ್ವಿನ್ ಮಾದರಿ–24 ಎನ್.ಜಿ.ಆರ್.ಜಿ ಗೋದಾಮು ಸಂಖ್ಯೆ– 1 ಡಿ–23 & 31 2.ಸಾಮಾನ್ಯ ಮಹಿಳೆ: ಡಿ–01 & ಇ ಮಾದರಿ–04 3.ಪರಿಶಿಷ್ಟ ಜಾತಿ : ಸಂಖ್ಯೆ– ಟ್ವಿನ್ (ಬಿ ಟೈಪ್) 23, ಸಿ–25 & ಇ ಮಾದರಿ –03, 4. ಪರಿಶಿಷ್ಟ ಪಂಗಡ–ಸಂಖ್ಯೆ ಸಿ–08 5. ಎಫ್.ಪಿ.ಓ ಮಳಿಗೆ ಸಂಖ್ಯೆ– ಡಿ–21, ಸಂಗ್ರಹಣಾ ಸಾಮರ್ಥ್ಯ ಗೋದಾಮು ಸಂ. 25,
2	ಟ್ವಿನ್ ಮಾದರಿ ಗೋದಾಮು ಸಂ–23 & 24 (ಬಿ–ಟೈಪ್)	25,820–00	51,640–00	
3	ಸಂಗ್ರಹಣಾ ಸಾಮರ್ಥ್ಯ ಗೋದಾಮು ಸಂ.–25	30,132–00	60,264–00	
4	'ಸಿ' ಮಾದರಿ ಗೋದಾಮು ಸಂಖ್ಯೆ – 06, 07, 08, 09, 10, 13, 14, 19, 20, 25,	9,260–00	18,520–00	
5	'ಡಿ' ಮಾದರಿ(ಶೀಟ್) ಗೋದಾಮು ಸಂಖ್ಯೆ – 01	10,692–00	21,384–00	
6	'ಡಿ' ಮಾದರಿ(ಆರ್.ಸಿ.ಸಿ) ಗೋದಾಮು ಸಂಖ್ಯೆ – 21, 23 & 31	11,121–00	22,242–00	
7	'ಇ' ಮಾದರಿ ತರಕಾರಿ ಗೋದಾಮು ಸಂಖ್ಯೆ–03 & 04	11,939–00	23,878–00	
8	ಎನ್.ಜಿ.ಆರ್.ಜಿ ಗೋದಾಮು ಸಂಖ್ಯೆ–1	14,021.00	28,042–00	
	ಕೊಮ್ಮೇರಹಳ್ಳಿ (ಗೋಪಾಲಪುರ) ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮುಗಳ ವಿವರ			
01	1000 ಮೆ.ಟನ್ ಸಾಮರ್ಥ್ಯದ ಗೋದಾಮು ಕಟ್ಟಡ ಸಂಖ್ಯೆ–01	114588–00	229176.00	ಸಾಮಾನ್ಯ
02	250 ಮೆ.ಟನ್ ಸಾಮರ್ಥ್ಯದ ಗೋದಾಮು ಕಟ್ಟಡ	34375–00	68750.00	ಸಾಮಾನ್ಯ
	ಸುಂಡಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿ ಇರುವ ಗೋದಾಮುಗಳ ವಿವರ			
01	ಸಣ್ಣ ಮಳಿಗೆ ಸಂಖ್ಯೆ –02	4646–00	9292.00	1.ಸಾಮಾನ್ಯ – ಸಂಖ್ಯೆ–02, 03, 04, 05. 2.ಸಾಮಾನ್ಯ ಮಹಿಳೆ–ಸಂಖ್ಯೆ 08 3.ಪರಿಶಿಷ್ಟ ಜಾತಿ: ಸಂಖ್ಯೆ– 07 4.ಎಫ್.ಪಿ.ಓ.– ಸಂಖ್ಯೆ 06
02	ಸಣ್ಣ ಮಳಿಗೆ ಸಂಖ್ಯೆ –03	4646–00	9292.00	
03	ಸಣ್ಣ ಮಳಿಗೆ ಸಂಖ್ಯೆ –04	4646–00	9292.00	
04	ಸಣ್ಣ ಮಳಿಗೆ ಸಂಖ್ಯೆ –05	4646–00	9292.00	
05	ಸಣ್ಣ ಮಳಿಗೆ ಸಂಖ್ಯೆ –06	4646–00	9292.00	
06	ಸಣ್ಣ ಮಳಿಗೆ ಸಂಖ್ಯೆ –07	4646–00	9292.00	
07	ಸಣ್ಣ ಮಳಿಗೆ ಸಂಖ್ಯೆ –08	4646–00	9292.00	

(1) ನಿಗಧಿತ ನೋಂದಣಿ ಶುಲ್ಕ ರೂ. 500/– ಪಾವತಿಸಿ ಸಮಿತಿಯಲ್ಲಿ ನೋಂದಾಯಿಸಲು ಕಡೆಯ ದಿನಾಂಕ: 20–12–2025 ರಂದು ಸಂಜೆ 5.00 ಗಂಟೆ. (ಈ ಹಿಂದೆ ನೋಂದಣಿ ಶುಲ್ಕ ಪಾವತಿಸಿ ನೋಂದಣಿ ಆದವರು. ಪುನಃ ನೋಂದಣಿ ಮಾಡಿಸುವ ಅವಶ್ಯಕತೆ ಇರುವುದಿಲ್ಲ). (2) ನೋಂದಾಯಿತ ವ್ಯಕ್ತಿ/ಸಂಸ್ಥೆಗಳು ಅರ್ಜಿ ಶುಲ್ಕ ರೂ.500/– ಪಾವತಿಸಿ ಅಂಗಡಿ ಮಳಿಗೆಗಳಿಗೆ ನಮೂನೆ–3 ರ ಅರ್ಜಿ ಪಡೆಯಲು ಕಡೆಯ ದಿನಾಂಕ: 26–12–2025 ರಂದು ಸಂಜೆ 5.00 ಗಂಟೆ. (3) ನೋಂದಾಯಿತ ವ್ಯಕ್ತಿ/ಸಂಸ್ಥೆಗಳಿಗೆ ಅಂಗಡಿ ಮಳಿಗೆಗಳ ಹಂಚಿಕೆ ಹಾಗೂ ವಿಧಿ–ವಿಧಾನಗಳ ಬಗ್ಗೆ ಸಭೆಯ ದಿನಾಂಕ: 29–12–2025 ಬೆಳಿಗ್ಗೆ 11.00 ಗಂಟೆಗೆ, ಸಮಿತಿಯ ಆಡಳಿತ ಕಛೇರಿಯ ಆವರಣ, ಮಂಡ್ಯ. (4) ಅಂಗಡಿ ಮಳಿಗೆಗಳಿಗೆ ನಿಗಧಿತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 31–12–2025 ರಂದು ಸಂಜೆ 05.00 ಗಂಟೆ. (5) ಎಫ್.ಪಿ.ಓ ಸಂಸ್ಥೆಗಳು ನಿಯಮ 17(2) (ಬಿ) ರನ್ವಯ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಮೇಲೆ ಶೇ 50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುವುದು. (6) ಮೀಸಲಾತಿಯಡಿಯಲ್ಲಿ ಅರ್ಜಿ ಬಾರದಿದ್ದಲ್ಲಿ ನಿಯಮ 17ರನ್ವಯ ಸಾಮಾನ್ಯ ವರ್ಗಕ್ಕೆ ವರ್ಗಾಹಿಸಿ ಹಂಚಿಕೆ ಮಾಡಲಾಗುವುದು. (7) ಮುಂಗಡ ಹಣ ಪಾವತಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮರುಕಟ್ಟೆ ಸಮಿತಿ, ಮಂಡ್ಯ ಇವರ ಹೆಸರಿಗೆ ಪಡೆದ ಬ್ಯಾಂಕ್ ಡಿ,ಡಿ ಮುಲಕ ಪಾವತಿಸುವುದು. (ಈಗಾಗಲೇ ಮುಂಗಡ ಮೊತ್ತವನ್ನು ಪಾವತಿಸಿರುವವರು ವ್ಯತ್ಯಾಸದ ಮುಂಗಡ ಮೊತ್ತವನ್ನು ಡಿ.ಡಿ. ಮೂಲಕ ಪಾವತಿಸುವುದು. (8) ಷರತ್ತು ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದು.

ಸಹಿ/–ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.
ಸಹಿ/–ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ.